ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳ ಮತ್ತು ಹಾಯ್‌ಸ್ಕೂಲುಗಳ ಉಪಯೋಗಕ್ಕಾಗಿ ರಚಿಸಿದ್ದು ಮತ್ತು ಸರಕಾರದಿಂದ ಮಂಜೂರಾದದ್ದು.

ಕನ್ನಡನುಡಿಗನ್ನಡಿ

ಎಂಬ

ಹೊಸಗನ್ನಡ ವ್ಯಾಕರಣ ಮತ್ತು ಛಂದೋಮಂಜರಿ

ಇದನ್ನು
ಮಹಾದೇವ ಪ್ರಭಾಕರ ಪೂಜಾರ
ಕನ್ನಡ ಪಂಡಿತ, ಟ್ರೇನಿಂಗ್ ಕಾಲೇಜ್, ಧಾರವಾಡ
ಇವರು ರಚಿಸಿದರು.

೧೯೪೦ನೆಯ ಇಸವಿಯ ಆವೃತ್ತಿಯ ಪುನರ್ಮುದ್ರಣ

೧೯೪೭

ಬೆಲೆ : ೧—೮—೦

ಪರಿವಿಡಿ

೧. ಅಕ್ಷರಗಳು .. ೧

೨. ಸಂಧಿ ೩

ಕನ್ನಡ ಸ್ವರಸಂಧಿ ವ್ಯಂಜನಸಂಧಿ

ಸಂಸ್ಕೃತ ,, ,,

೩. ಶಬ್ದಗಳು ೧೦

೪. ನಾಮಪದಗಳು .. ೧೧

ನಾಮಭೇದಗಳು

ನಾಮಪದಗಳ ರೂಪಸಿದ್ಧಿ

ಸರ್ವನಾಮಗಳ ,,

ವಿಶೇಷಣಗಳ ,,

ವಿಶಿಷ್ಟ ರೂಪಗಳು

೫. ಕ್ರಿಯಾಪದಗಳು ೩೧

ಧಾತುಗಳ ಪ್ರಕಾರಗಳು

ಕಾಲಾರ್ಥಕ ಕ್ರಿಯಾಪದಗಳು

ಸಂಭಾವನಾರ್ಥಕ ಕ್ರಿ. ಪ. ಗಳು

ವಿಧ್ಯರ್ಥಕ ಕ್ರಿಯಾಪದಗಳು

ವಿಶಿಷ್ಟ ರೂಪಗಳು

೬. ಕೃದಂತಗಳು ೪೫

ಕೃನ್ನಾಮಗಳು

ಕೃದ್ಭಾವನಾಮಗಳು

ಕೃದಂತಾವ್ಯಯಗಳು

೭. ತದ್ಧಿತಾಂತಗಳು ೫೫

ತದ್ಧಿತನಾಮಗಳು

ತದ್ಧಿತಭಾವನಾಮಗಳು

ತದ್ಧಿತಾವ್ಯಯಗಳು

೮. ಸಮಾಸ ೬೫

ತತ್ಪುರುಷ, ಕರ್ಮಧಾರಯ,

ಬಹುವ್ರೀಹಿ, ದ್ವಂದ್ವ, ಅಂಶಿ

ಸಮಾಸಗಳು

ಅರಿಸಮಾಸದೋಷ

ದ್ವಿರುಕ್ತಿಗಳು

೯. ಅವ್ಯಯಪದಗಳು ... ೬೭

ಅವ್ಯಯಪ್ರಕಾರಗಳು

೧೦. ಕಾರಕಗಳೂ, ನಾಮವಿಭಕ್ತಿ

ಪ್ರಯೋಗವೂ ೬೯

೧೧. ಕ್ರಿಯಾವಿಭಕ್ತಿಪ್ರಯೋಗ ೭೭

ಕರ್ತರಿಪ್ರಯೋಗ

ಕರ್ಮಣಿಪ್ರಯೋಗ

೧೨. ವಾಕ್ಯರಚನೆ ೮೦

ವಾಕ್ಯರಚನೆಗೆ ಉಪಯುಕ್ತವಾದ

ನಿಯಮಗಳು

ಕ್ರಿಯಾಪದಗಳ ಕಾಲಪುರುಷ

ಲಿಂಗವಚನಗಳು

ಸರ್ವನಾಮಪ್ರಯೋಗ

ವಿಶೇಷಣಪ್ರಯೋಗ

ಅವ್ಯಯಪ್ರಯೋಗ

೧೩. ವಾಕ್ಯಾರ್ಥಬೋಧೆ .. ೯೫

ಪದಸ್ವರೂಪಕಥನ (ಗ್ರಂಥದ

ಮೇಲೆ ವ್ಯಾಕರಣ ಹೇಳುವದು)

ಖಂಡಾನ್ವಯ ದಂಡಾನ್ವಯ

೧೪. ವಾಕ್ಯವಿಭಜನೆ ೧೦೧

ಸಾಮಾನ್ಯ ವಾಕ್ಯವಿಭಜನೆ

ಸಂಮಿಶ್ರವಾಕ್ಯವಿಭಜನೆ

ಸಂಯೋಜಿತ ವಾಕ್ಯವಿಭಜನೆ

೧೫. ಅನುಬಂಧ .. ೧೧೩

(೧) ಹ. ಗ. ಶಬ್ದವಿಕಾರ

(೨) ಹ. ಗ. ರೂಪಗಳು

(೩) ತದ್ಭವಗಳು

೧೬. ಛಂದೋಮಂಜರಿ ೧೨೨

ಗಣ. ಪ್ರಾಸ. ಯತಿ.

ಅಕ್ಷರವೃತ್ತ

ಮಾತ್ರಾವೃತ್ತ

ಕನ್ನಡ

ನುಡಿಗನ್ನಡಿ

೧. ಅಕ್ಷರಗಳು

ನಮ್ಮ ಮಾತುಗಳಲ್ಲಿರುವ ಶಬ್ದಗಳೆಲ್ಲ ಅಕ್ಷರಗಳ ಸೇರುವಿಕೆಯಿಂದ ಉಂಟಾಗಿವೆ. ಉದಾಹರಣೆ—ಆಕಳು ಎಂಬ ಶಬ್ದದಲ್ಲಿ ಆ+ಕ್+ಅ+ಳ್+ಉ ಎಂಬ ಅಕ್ಷರಗಳುಂಟು.

ಮೂಲಾಕ್ಷರಗಳಲ್ಲಿ **ಸ್ವರ, ವ್ಯಂಜನ, ಯೋಗವಾಹ** ಇಲ್ಲವೆ **ಅಯೋಗವಾಹ** ಎಂಬ ಮೂರು ಪ್ರಕಾರಗಳುಂಟು.

ಸ್ವರಗಳು:—೧೪; ಅವುಗಳಲ್ಲಿ ಹ್ರಸ್ವಸ್ವರ, ದೀರ್ಘಸ್ವರ ಎಂಬ ಎರಡು ಪ್ರಕಾರಗಳುಂಟು.

ಹ್ರಸ್ವಸ್ವರ:—ಒಂದು ಮಾತ್ರೆಯ* ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು ಹ್ರಸ್ವಸ್ವರಗಳು. ಅವು ೬. ಅ, ಇ, ಉ, ಋ, ಎ, ಒ.

ದೀರ್ಘಸ್ವರ:—ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು ದೀರ್ಘಸ್ವರಗಳು; ಅವು ೮. ಆ, ಈ, ಊ, ೠ, ಏ, ಐ, ಓ, ಔ.

ವ್ಯಂಜನಗಳಲ್ಲಿ ವರ್ಗೀಯವ್ಯಂಜನ, ಅವರ್ಗೀಯವ್ಯಂಜನ ಎಂಬ ಎರಡು ಪ್ರಕಾರಗಳು. **ವರ್ಗೀಯವ್ಯಂಜನಗಳು** ೨೫. ಅವು:—

---

* ಮಾತ್ರೆ:—**ಕು ಕೂ ಕೂ೩** ಎಂದು ಕೋಳಿ ಕೂಗುವಾಗ ಮೊದಲನೆಯ 'ಕು' ಎಂಬದನ್ನು ಉಚ್ಚರಿಸುವದಕ್ಕೆ ಬೇಕಾಗುವ ಕಾಲಪರಿಮಾಣವು ಮಾತ್ರೆಯೆನಿಸುವದು.

ಮೂರು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಕ್ಕೆ ಪ್ಲುತ ಎಂದು ಹೆಸರು. ಉದಾ—ಅ೩ ಕೂ೩ ಮುಂ.

	ಅಲ್ಪಪ್ರಾಣ.	ಮಹಾಪ್ರಾಣ.	ಅಲ್ಪ.	ಮಹಾ.	ಅನುನಾಸಿಕ
೧ ಕವರ್ಗ—	ಕ್	ಖ್	ಗ್	ಘ್	ಙ್
೨ ಚವರ್ಗ—	ಚ್	ಛ್	ಜ್	ಝ್	ಞ್
೩ ಟವರ್ಗ—	ಟ್	ಠ್	ಡ್	ಢ್	ಣ್
೪ ತವರ್ಗ—	ತ್	ಥ್	ದ್	ಧ್	ನ್
೫ ಪವರ್ಗ—	ಪ್	ಫ್	ಬ್	ಭ್	ಮ್

ಅವರ್ಗೀಯ ವ್ಯಂಜನಗಳು ೯:— ಯ್. ರ್, ಲ್, ವ್, ಶ್ ಷ್, ಸ್, ಹ್, ಳ್, (ರಕಾರಕ್ಕೆ ರೇಫವೆಂಬ ಹೆಸರೂ ಉಂಟು.)

ಮೇಲೆ ತೋರಿಸಿದಂತೆ ಎಲ್ಲ ವರ್ಗಗಳಲ್ಲಿ ೧ನೆಯ, ೩ನೆಯ ವರ್ಣಗಳಿಗೆ ಅಲ್ಪಪ್ರಾಣಗಳೆಂದೂ, ೨ನೆಯ ೪ನೆಯ ವರ್ಣಗಳಿಗೆ **ಮಹಾಪ್ರಾಣ** ಗಳೆಂದೂ ೫ನೆಯ ವರ್ಣಗಳಿಗೆ **ಅನುನಾಸಿಕ**ಗಳೆಂದೂ ಹೆಸರು.

ವರ್ಗಗಳ ಮೊದಲಿನ ಎರಡು ವರ್ಣಗಳಿಗೂ ಶ್,ಷ್,ಸ್,ಳ್ ಗಳಿಗೂ ಕರ್ಕಶವರ್ಣಗಳೆಂದು ಹೆಸರು. ಉಳಿದವು ಮೃದುವರ್ಣಗಳು.

ಅಯೋಗವಾಹ :— ಅನುಸ್ವಾರ, ವಿಸರ್ಗ ಎಂದು ಅಯೋಗವಾಹ ಗಳು ೨. ಅಂ, ಕುಂ ಮೊದಲಾದ ಅಕ್ಷರಗಳಲ್ಲಿ ಅಕಾರ ಉಕಾರಗಳ ಮುಂದೆ ಆಗುವ ಉಚ್ಚರಣೆಯು ಅನುಸ್ವಾರವು. ಅಃ ಚಿಃ ಮೊದಲಾದ ಅಕ್ಷರಗಳಲ್ಲಿ ಅಕಾರ, ಇಕಾರಗಳ ಮುಂದೆ ಆಗುವ ಉಚ್ಚರಣೆಯು ವಿಸರ್ಗವು.

೧೪ ಸ್ವರಗಳು, ೩೪ ವ್ಯಂಜನಗಳು, ೨ ಅಯೋಗವಾಹಗಳು ಇವು ಮೂಲಾಕ್ಷರಗಳು ; ಹೀಗೆ ವರ್ಣಮಾಲೆಯಲ್ಲಿ ಒಟ್ಟಿಗೆ ೫೦ ಮೂಲಾಕ್ಷರ ಗಳುಂಟು. (ಋ ಎಂಬ ಸ್ವರವು ಸಂಸ್ಕೃತ ಶಬ್ದಗಳಲ್ಲಿ ಮಾತ್ರ ಬರುವದು. ಮಹಾಪ್ರಾಣಗಳು ಸೇರಿದ ಶಬ್ದಗಳೂ ಶ ಷಕಾರಗಳುಳ್ಳ ಶಬ್ದಗಳೂ ಕನ್ನಡ ದಲ್ಲಿ ತೀರ ಕಡಿಮೆ.)

ಗುಣಿತಾಕ್ಷರ:—ವ್ಯಂಜನಗಳ ಮುಂದೆ ಸ್ವರಗಳು ಸೇರುವದರಿಂದ ಗುಣಿತಾಕ್ಷರಗಳಾಗುವವು. ಉದಾ—ಕ್ ವ್ಯಂಜನದ ಮುಂದೆ ಅ, ಆ, ಇ, ಈ, ಉ, ಮೊದಲಾದ ಸ್ವರಗಳು ಸೇರಲು ಆಗುವ ಕ, ಕಾ, ಕಿ, ಕೀ, ಕು, ಮೊದಲಾದವು ಗುಣಿತಾಕ್ಷರಗಳು. ಬಳ್ಳಿಗಳೆಲ್ಲ ಗುಣಿತಾಕ್ಷರಗಳು.

ಸಂಯುಕ್ತಾಕ್ಷರ:—ವ್ಯಂಜನದ ಮುಂದೆ ವ್ಯಂಜನವು ಸೇರಲು ಸಂಯುಕ್ತಾಕ್ಷರಗಳು ಇಲ್ಲವೆ ಒತ್ತಕ್ಷರಗಳು ಉಂಟಾಗುವವು. ಉದಾ—ಕ್+ಕ್+ಅ=ಕ್ಕ; ಕ್+ತ್+ಅ=ಕ್ತ ಸ್+ತ್+ರ್+ಅ=ಸ್ತ್ರ.

ಅಕ್ಷರ ಶಬ್ದ ಮೊದಲಾದವು ಧ್ವನಿರೂಪವಾಗಿರುವವು. ಅವುಗಳನ್ನು ಬರೆದು ತೋರಿಸುವ ಚಿಹ್ನಗಳನ್ನು ಅಕ್ಷರಚಿಹ್ನಗಳೆಂದು ಹೇಳುವರು. ಅಕ್ಷರ ಚಿಹ್ನಗಳನ್ನೂ ಅಕ್ಷರಗಳೆಂದು ಹೇಳುವ ವಾಡಿಕೆಯುಂಟು. ಅಕ್ಷರಚಿಹ್ನಗಳ ಸಮುದಾಯುವು ಲಿಪಿಯೆನಿಸುವದು.

---

೨. ಸಂಧಿ

ಸಂಧಿ:—ಅಕ್ಷರಗಳನ್ನು ಕೂಡಿಸುವದು, ಎಂದರೆ ನಡುವೆ ಅವಕಾಶ ಬಿಡದೆ ಒಂದರ ಮುಂದೆ ಇನ್ನೊಂದನ್ನು ಉಚ್ಚರಿಸುವದು ಸಂಧಿಯು.

ಸಂಧಿಕಾರ್ಯ:—ಸಂಧಿಯಾಗುವಾಗ ಲೋಪ, ಆಗಮ, ಆದೇಶ ಎಂಬ ಮೂರು ಪ್ರಕಾರದ ಕಾರ್ಯಗಳಾಗುವವು.

ಲೋಪ:—ಮೊದಲಿದ್ದ ಅಕ್ಷರಗಳಲ್ಲಿ ಒಂದು ಇಲ್ಲವೆ ಕೆಲವು ಹೋಗುವದು ಲೋಪವು. ಉದಾ—ನೆನಪು+ಇಲ್ಲ=ನೆನಪಿಲ್ಲ; ಇಲ್ಲಿ ಉಕಾರ ಲೋಪವಾಗಿದೆ. ರಾಮನ+ಆಜ್ಞೆ=ರಾಮನಾಜ್ಞೆ; ಇಲ್ಲಿ ಅಕಾರ ಲೋಪವಾಗಿದೆ.

ಆಗಮ:—ನಡುವೆ ಹೊಸ ಅಕ್ಷರಗಳು ಬರುವದು ಆಗಮವು. ಉದಾ—ಬಂದೆ+ಆ=ಬಂದೆಯಾ; ಇಲ್ಲಿ ನಡುವೆ ಯಕಾರವು ಬಂದಿದೆ.

ಆದೇಶ:—ಮೊದಲಿದ್ದ ಅಕ್ಷರಕ್ಕೆ ಇಲ್ಲವೆ ಅಕ್ಷರಗಳಿಗೆ ಪ್ರತಿಯಾಗಿ ಬೇರೆ ಅಕ್ಷರವು ಇಲ್ಲವೆ ಅಕ್ಷರಗಳು ಬರುವದು ಆದೇಶವು. ಉದಾ—ಹುಲಿ+ತೊಗಲು=ಹುಲಿದೊಗಲು; ಇಲ್ಲಿ ತಕಾರಕ್ಕೆ ಪ್ರತಿಯಾಗಿ ದಕಾರವು ಬಂದಿದೆ. ಬಿಸಿದು+ಬೂದಿ=ಬೆಂಬೂದಿ; ಇಲ್ಲಿ 'ಸಿದು' ಎಂಬ ಅಕ್ಷರಗಳಿಗೆ ಅನುಸ್ವಾರವು ಬಂದಿದೆ. ಇನಿದು(=ಇನ್)+ಸರ=ಇಂಚರ ಇಲ್ಲಿ ಸಕಾರಕ್ಕೆ ಚಕಾರವು ಬಂದಿದೆ.

ಕನ್ನಡ ಶಬ್ದಗಳು ಕೂಡುವಾಗ ಆಗುವ ಸಂಧಿಯು ಕನ್ನಡ ಸಂಧಿಯು. ಎರಡೂ ಸಂಸ್ಕೃತ ಪ್ರಕೃತಿಗಳು ಕೂಡುವಾಗ ಆಗುವ ಸಂಧಿಯು **ಸಂಸ್ಕೃತ ಸಂಧಿಯು**. ೧ ಕನ್ನಡ ಸಂಧಿಗೆ ಉದಾ— ಮನೆಯ+ ಆಳು=ಮನೆಯಾಳು; ರಾಮನ+ಇರವು=ರಾಮನಿರವು. ೨ ಸಂಸ್ಕೃತಸಂಧಿಗೆ ಉದಾ— ಶೀತ+ಅಂಶು=ಶೀತಾಂಶು; ನೀಲ+ಉತ್ಪಲ=ನೀಲೋತ್ಪಲ.

ಸಂಧಿಯ ಸ್ಥಳಗಳು:— ಒಂದು ಪದವು ಉಂಟಾಗುವಾಗಲೂ, ವಾಕ್ಯದಲ್ಲಿಎರಡು ಪದಗಳು ಕೂಡುವಾಗಲೂ ಸಂಧಿಯಾಗುವದು. ಮೊದಲನೆಯದು **ಪದಮಧ್ಯಸಂಧಿಯು**; ಎರಡನೆಯದು **ಪದಾಂತಸಂಧಿಯು**.

ಪದಮಧ್ಯಸಂಧಿ:— ನೋಡು+ಅ+ಅನ್ನು=ನೋಟವನ್ನು; ಇಲ್ಲಿ ನೋಡು+ಅ ಇವು ಕೂಡಿ ನೋಟ ಎಂದು ಆದಾಗಲೂ, ನೋಟ+ಅನ್ನು ಇವು ಕೂಡಿ ನೋಟವನ್ನು ಎಂದು ಆದಾಗಲೂ ಆಗಿರುವ ಸಂಧಿಗಳು ಪದಮಧ್ಯ ಸಂಧಿಗಳು. ಮತ್ತು ಹುಲಿಯ+ತೊಗಲು ಎಂಬೀ ಪದಗಳು ಸೇರಿ ಹುಲಿದೊಗಲು ಎಂಬ ಒಂದು ಸಮಾಸಪದವಾದಾಗ ಆದ ಸಂಧಿಯೂ ಪದಮಧ್ಯ ಸಂಧಿಯು.

ಪದಾಂತಸಂಧಿ:— ವಾಕ್ಯದಲ್ಲಿ ಎರಡು ಪದಗಳ ನಡುವೆ ಆಗುವ ಸಂಧಿಯು ಪದಾಂತಸಂಧಿಯು. ಉದಾ—ಆ ಕಿನ್ನರ ದಂಪತಿಗಳು ಎತ್ತರವಾದದ್ದೊಂದು ಶಿಖರವನ್ನೇರಿ ಹೋದವು. ಇಲ್ಲಿ ಎತ್ತರವು+ಆದದ್ದು+ ಒಂದು,ಶಿಖರವನ್ನು+ಏರಿ ಈಸ್ಥಳಗಳಲ್ಲಾದ ಸಂಧಿಗಳುಪದಾಂತಸಂಧಿಗಳು.

ಪದಮಧ್ಯಸಂಧಿಯು ನಿತ್ಯವು; ಎಂದರೆ ಪದಮಧ್ಯದಲ್ಲಿ ಆಗಬೇಕಾದ ಸಂಧಿಗಳನ್ನು ಮಾಡಲೇಬೇಕು. ಪದಾಂತಸಂಧಿಯು ವಿಕಲ್ಪವು; ಎಂದರೆ ವಾಕ್ಯದಲ್ಲಿ(ಪದಾಂತ)ಸಂಧಿಯನ್ನು ಮಾಡಬಹುದು; ಇಲ್ಲವೆ ಬಿಡಬಹುದು.

ಸ್ವರಸಂಧಿ:— ಸ್ವರದ ಮುಂದೆ ಸ್ವರವು ಬರಲು ಆಗುವ ಸಂಧಿಯು ಸ್ವರಸಂಧಿಯು. ಉದಾ— ಸಿರಿ + ಒಲಿದಳು=ಸಿರಿಯೊಲಿದಳು.

ವ್ಯಂಜನಸಂಧಿ:—ವ್ಯಂಜನದ ಮುಂದೆ ವ್ಯಂಜನವು ಬಂದರೆ ಇಲ್ಲವೆ ಸ್ವರವ್ಯಂಜನಗಳು ಒಂದರ ಮುಂದೆ ಒಂದು ಬಂದರೆ ಆಗುವ ಸಂಧಿಯು

ವ್ಯಂಜನಸಂಧಿಯು. ಉದಾ—ಕಣ್+ಪನಿ=ಕಣ್ಬನಿ; ಸುಖ+ಪಟ್ಟು=ಸುಖಬಟ್ಟು; ತಲೆ+ಬಾಗಿಲು=ತಲೆವಾಗಿಲು.

ಕನ್ನಡ ಸಂಧಿಗಳು—ಸ್ವರಸಂಧಿ

೧ **ಸ್ವರಲೋಪ ಸಂಧಿ:**—ಸ್ವರದ ಮುಂದೆ ಸ್ವರವು ಬಂದರೆ ಮೊದಲಿದ್ದ ಅರ್ಥಕ್ಕೆ ಬಾಧೆಯಿಲ್ಲದಿದ್ದರೆ ಹಿಂದಿನ ಸ್ವರವು ಲೋಪ ಹೊಂದುವದು. ಉದಾ—ಊರಿಂದ+ಊರಿಗೆ=ಊರಿಂದೂರಿಗೆ; ನೀಲೆ+ಅಮ್ಮ=ನೀಲಮ್ಮ; ಕಲ್ಲ+ಅಪ್ಪ=ಕಲ್ಲಪ್ಪ; ಮನೆಯಲ್ಲಿ+ಇದ್ದನು=ಮನೆಯಲ್ಲಿದ್ದನು; ಸುಖವು+ಆಯಿತು=ಸುಖವಾಯಿತು; ಮಾತು+ಎಷ್ಟು=ಮಾತೆಷ್ಟು; ಬೇರೆ+ಒಂದು=ಬೇರೊಂದು; ನಾಡಿಗೆ+ಒಡೆಯನು=ನಾಡಿಗೊಡೆಯನು. ಮುಂ.

ಮೊದಲು ಇದ್ದ ಅರ್ಥವು ತೋರದಂತೆ ಆದರೆ ಲೋಪವನ್ನು ಮಾಡಬಾರದು. ತಂದೆ+ಇಲ್ಲ=ತಂದಿಲ್ಲ; ಕರು+ಅನ್ನು=ಕರನ್ನು; ಮಡು+ಇದು=ಮಡಿದು; ಮುದಿ+ಅಪ್ಪ=ಮುದಪ್ಪ ಎಂದು ಸಂಧಿಯು ಮಾಡಬಾರದು. ಏಕೆಂದರೆ, ಮೊದಲಿದ್ದ ಅರ್ಥವು ತೋರುವದಿಲ್ಲ; ಭಿನ್ನಾರ್ಥವೂ ತೋರುವದು.

ಲೋಪದಿಂದ ಮೊದಲಿನ ಅರ್ಥಕ್ಕೆ ಬಾಧೆ ಬರುವಲ್ಲಿ ಯಕಾರಾಗಮ ಸಂಧಿಯಾಗಲಿ, ವಕಾರಾಗಮ ಸಂಧಿಯಾಗಲಿ ಆಗುವದು.

೨. **ಯಕಾರಾಗಮಸಂಧಿ:**— ಅ, ಇ, ಈ, ಎ, ಏ, ಐಕಾರಗಳ ಮುಂದೆ ಸ್ವರವು ಬಂದರೆ ಯಕಾರಾಗಮವಾಗುವದು. ಉದಾ—ಅ+ಈಟಿ=ಅಯೀಟಿ; ನರಿ+ಇಂದ=ನರಿಯಿಂದ; ಮುದಿ+ಅಪ್ಪ=ಮುದಿಯಪ್ಪ; ಮೀ+ಅಲಿಕ್ಕೆ=ಮೀಯಲಿಕ್ಕೆ; ಕಟ್ಟಿಗೆ+ಅನ್ನು=ಕಟ್ಟಿಗೆಯನ್ನು; ಬೇ+ಇಸು=ಬೇಯಿಸು; ಕೈ+ಎತ್ತಿದನು=ಕೈಯೆತ್ತಿದನು ಮುಂ.

ಓಕಾರದ ಮುಂದೆಯೂ ಕೆಲವು ಕಡೆಯಲ್ಲಿ ಯಕಾರಾಗಮವಾಗುವದು. ಉದಾ—ನೋ+ಉತ್ತ=ನೋಯುತ್ತ; ಜೋ+ಎಂದು=ಜೋಯೆಂದು.

೩. **ವಕಾರಾಗಮಸಂಧಿ:**— ಉ, ಊ, ಋ, ಓ, ಔಕಾರಗಳ ಮುಂದೆ ಸ್ವರವು ಬಂದರೆ ವಕಾರಾಗಮವಾಗುವದು. ಉದಾ—ಕರು+ಉ=

ಕರುವು; ಹೂ+ಇಂದ=ಹೂವಿಂದ; ದಾತೃ+ಅನ್ನು=ದಾತೃವನ್ನು; ಓ+ಅದೆ=ಓವದೆ; ನೌ + ಅನ್ನು=ನೌವನ್ನು ಮುಂ.

ಆ, ಈ ಎಂಬ ಶಬ್ದಗಳ ಮುಂದೆ ಉ, ಊ, ಒ, ಓ ಎಂಬ ಸ್ವರಗಳಿದ್ದರೆ ವಕಾರಾಗಮವಾಗುವದು. ಉದಾ—ಆ+ಉಣಿಸು=ಆವುಣಿಸು, ಈ+ಉಣಿಸು=ಈವುಣಿಸು; ಆ+ಊರು=ಆವೂರು; ಈ+ಊರು= ಈವೂರು; ಆ+ಒಂಟೆ=ಆವೊಂಟೆ; ಈ+ಒಂಟೆ= ಈವೊಂಟೆ; ಆ+ಓಣಿ=ಆವೋಣಿ; ಈ+ಓಣಿ=ಈವೋಣಿ; ಮುಂ.

ಲಕಾರಾಗಮಸಂಧಿ— ಪದಾಂತ್ಯ ಅಕಾರಕ್ಕೆ ಸ್ವರವು ಪರವಾದರೆ ಕೆಲವೆಡೆಯಲ್ಲಿ ಲಕಾರಾಗಮವಾಗುವದು. ಉದಾ—ಅದರಿಂದ+ಏ=ಅದರಿಂದಲೇ; ಹೋಗುತ್ತ+ಊ=ಹೋಗುತ್ತಲೂ; ಐದುತ+ಈಕ್ಷಿಸುತ=ಐದುತಲೀಕ್ಷಿಸುತ.

ಕನ್ನಡ ವ್ಯಂಜನ ಸಂಧಿ

೧. ಗದಬಾದೇಶಸಂಧಿ— ಸಮಾಸದಲ್ಲಿ ಉತ್ತರಪದಗಳ ಆದಿಯಲ್ಲಿರುವ ಕ ತ ಪಕಾರಗಳಿಗೆ ಕ್ರಮದಿಂದ ಗ ದ ಬಕಾರಗಳ ಆದೇಶವಾಗುವದು. ಉದಾ— ಹಳ+ಕನ್ನಡ=ಹಳಗನ್ನಡ; ಮನ+ಕಂಡು=ಮನಗಂಡು; ಕುರುಡು+ಕಣ್ಣು=ಕುರುಡುಗಣ್ಣು; ಮರ+ತುದಿ=ಮರದುದಿ; ಹೆಣ + ತಿನಿ=ಹೆಣದಿನಿ; ನಿಲ್ + ತಾಣ=ನಿಲ್ದಾಣ; (ಎಂಟು) ಎಣ್ + ಪತ್ತು = ಎಂಬತ್ತು ಹಿರಿದು+ಪಾವು= ಹೆಬ್ಬಾವು; ಸುಖ+ ಪಟ್ಟನು= ಸುಖಬಟ್ಟನು.

ವಕಾರಾದೇಶಸಂಧಿ:—ಸಮಾಸದಲ್ಲಿ ಉತ್ತರಪದಗಳ ಆದಿಯಲ್ಲಿರುವ ಪ ಬ ಮಕಾರಗಳಿಗೆ ವಕಾರಾದೇಶವಾಗುತ್ತದೆ. ಉದಾ- ಕೆನೆ+ ಪಾಲು=ಕೆನೆವಾಲು ಮೆಲ್+ಪಾಸು=ಮೆಲ್ವಾಸು; ತಲೆ+ ಬಾಗಿ=ತಲೆವಾಗಿ; ತೆರೆ+ಬಾಯಿ=ತೆರೆವಾಯಿ; ನೆಲ+ ಮನೆ=ನೆಲವನೆ; ನಲ್+ಮಾತು=ನಲ್ವಾತು.

ಪ್ರಕೃತಿಭಾವ— ಆಗಬೇಕಾದ ಸಂಧಿಕಾರ್ಯಗಳು ಆಗದಿರುವದು ಪ್ರಕೃತಿಭಾವವು.

(೧) ಆ ಎಂಬ ಶಬ್ದದ ಮುಂದೆ ಅ ಆ ಐ ಔಕಾರಗಳು ಬಂದರೆ ಪ್ರಕೃತಿ

ಭಾವವಾಗುವದು. ಉದಾ— ಆ+ಅರಿಸಿನ= ಆ ಅರಿಸಿನ; ಆ+ಆಕಳು=ಆ ಆಕಳು; ಆ+ಐಶ್ವರ್ಯ;=ಆ ಐಶ್ವರ್ಯ; ಆ+ ಔದಾರ್ಯ=ಆ ಔದಾರ್ಯ.

(೨) ಹೊಸದು, ಹೊರಗು, ಒಳಗು ಈ ಶಬ್ದಗಳಿಗೆ ಸಮಾಸದಲ್ಲಿ ಹೊಸ, ಹೊರ, ಒಳ ಎಂಬ ರೂಪಗಳಾಗುವವು; ಇವುಗಳ ಮುಂದೆ ಸ್ವರವು ಬಂದರೆ ಪ್ರಕೃತಿಭಾವವಾಗುವದು. ಉದಾ— ಹೊಸ+ಅರಿಸಿನ=ಹೊಸ ಅರಿಸಿನ; ಹೊಸ ಅಂಗಿ, ಹೊಸ ಆಡು; ಹೊಸ ಇಲಿ, ಹೊಸ ಉಡುಗೆ; ಹೊಸ ಎತ್ತು; ಹೊಸ ಒಕ್ಕಲು; ಹೊಸ ಓಣಿ; ಹೊರ ಆಗಸೆ; ಒಳ ಅಂಗಳ; ಮುಂ.

(೩) ಸಂಬೋಧನ, ಭಾವಬೋಧಕಾವ್ಯಯ, ಅನುಕರಣಾವ್ಯಯ ಇವುಗಳ ಮುಂದೆ ಸ್ವರವು ಬಂದರೆ ಪ್ರಕೃತಿಭಾವವಾಗುವದು.

ಸಂಬೋಧನಕ್ಕೆ— ಮಗನೇ + ಓದುತ್ತಿರು = ಮಗನೇ ಓದುತ್ತಿರು. ಗೌರೀ ಅಳಬೇಡ; ಮಹಾರಾಜೇಂದ್ರ ಉಂಟು.

ಭಾವಬೋಧಕಾವ್ಯಯಕ್ಕೆ— ಅಹಹ ಎಷ್ಟು ಚೆಂದ! ಅಯ್ಯೋ ಇವನು ಹೀಗಾದನೇ! ಅಹಾ ಅವನು ಬಂದನೇ!

ಅನುಕರಣಾವ್ಯಯಕ್ಕೆ— ಗುಡುಗುಡು ಎಂದು; ಪಟಪಟ ಎನ್ನುತ್ತ; ಗುಳುಗುಳು ಎನ್ನಲು.

ಸಂಸ್ಕೃತಸಂಧಿ

(ಎರಡೂ ಸಂಸ್ಕೃತಪ್ರಕೃತಿಗಳೇ ಇದ್ದರೆ ಸಂಸ್ಕೃತಸಂಧಿಯಾಗುವ ದೆಂಬದನ್ನು ಲಕ್ಷ್ಯದಲ್ಲಿಡಬೇಕು.)

ಸಂಸ್ಕೃತಸ್ವರಸಂಧಿ

೧. **ಸವರ್ಣದೀರ್ಘಸಂಧಿ**—ಸವರ್ಣಸ್ವರಗಳು ಒಂದರ ಮುಂದೆ ಒಂದು ಬಂದರೆ ಅವೆರಡರ ಸ್ಥಳದಲ್ಲಿ ಅದೇ ಜಾತಿಯ ದೀರ್ಘಸ್ವರವು ಆದೇಶ ವಾಗುವದು. ಅ ಆ, ಇ ಈ, ಉ ಊ, ಈ ಯುಗ್ಮಗಳಲ್ಲಿ ಒಂದಕ್ಕೊಂದು ಸವರ್ಣವು. ಉದಾ—ಸಚಿವ + ಅಗ್ರಪಟ್ಟ=ಸಚಿವಾಗ್ರಪಟ್ಟ; ಕಮಲ+ ಆಸನ=ಕಮಲಾಸನ; ವಿದ್ಯಾ + ಅಭ್ಯಾಸ=ವಿದ್ಯಾಭ್ಯಾಸ; ವಿದ್ಯಾ + ಆಲಯ= ವಿದ್ಯಾಲಯ; ಮುನಿ + ಇಂದ್ರ=ಮುನೀಂದ್ರ, ಭೂಮಿ + ಈಶ=ಭೂಮೀಶ;

ಗೌರೀ+ಈಶ=ಗೌರೀಶ; ಗುರು+ಉಪದೇಶ=ಗುರೂಪದೇಶ; ವಧೂ+ಉನ್ನತಿ=ವಧೂನ್ನತಿ.

೨. **ಗುಣಸಂಧಿ**—ಅ ಆಕಾರಗಳ ಮುಂದೆ ಇ ಈಕಾರಗಳು ಬಂದರೆ ಏಕಾರವೂ, ಉ ಊಕಾರಗಳು ಬಂದರೆ ಓಕಾರವೂ, ಋಕಾರವು ಬಂದರೆ ಅರ್ ಎಂಬುದೂ ಆ ಎರಡೂ ಸ್ವರಗಳ ಸ್ಥಳದಲ್ಲಿ ಆದೇಶವಾಗಿ ಬರುವವು. ಉದಾ—ನರ+ಇಂದ್ರ=ನರೇಂದ್ರ; ಮಹಾ+ಈಶ್ವರ=ಮಹೇಶ್ವರ; ಶೀತ+ಉಪಚಾರ=ಶೀತೋಪಚಾರ; ಪಾದ + ಊನ=ಪಾದೋನ; ಸ್ತಂಭ + ಊರು=ಸ್ತಂಭೋರು; ಬ್ರಹ್ಮ+ ಋಷಿ=ಬ್ರಹ್ಮರ್ಷಿ; ಮಹಾ + ಋಷಿ = ಮಹರ್ಷಿ ಮುಂ.

೩. **ವೃದ್ಧಿಸಂಧಿ**—ಅ ಆಕಾರಗಳ ಮುಂದೆ ಏ ಐಕಾರಗಳು ಬಂದರೆ ಐಕಾರವೂ, ಓ ಔಕಾರಗಳು ಬಂದರೆ ಔಕಾರವೂ ಆ ಎರಡೂ ಸ್ವರಗಳ ಸ್ಥಳದಲ್ಲಿ ಆದೇಶವಾಗುವವು. ಉದಾ—ಲೋಕ+ ಏಕವೀರ ಲೋಕೈಕವೀರ; ವಿದ್ಯಾ + ಏಕಧನ=ವಿದ್ಯೈಕಧನ; ಅತುಲ + ಐಶ್ವರ್ಯ=ಅತುಲೈಶ್ವರ್ಯ; ಮಹಾ+ಐಶ್ವರ್ಯ=ಮಹೈಶ್ವರ್ಯ; ವನ+ಓಷಧಿ=ವನೌಷಧಿ; ಗಂಗಾ + ಓಘ=ಗಂಗೌಘ; ಘನ+ಔದಾರ್ಯ=ಘನೌದಾರ್ಯ; ಹಿತ + ಔಷ್ಣ್ಯ= ಹಿತೌಷ್ಣ್ಯ ಮುಂತಾದವು.

೪. **ಯಣ್ ಸಂಧಿ**—ಇ ಈ ಉ ಊ ಋಕಾರಗಳ ಮುಂದೆ ಸವರ್ಣಗಳಲ್ಲದ ಸ್ವರಗಳು ಬಂದರೆ ಇ ಈ ಕಾರಗಳ ಸ್ಥಳದಲ್ಲಿ ಯಕಾರವೂ, ಉ ಊ ಕಾರಗಳ ಸ್ಥಳದಲ್ಲಿ ವಕಾರವೂ, ಋಕಾರದ ಸ್ಥಳದಲ್ಲಿ ರೇಫವೂ ಆದೇಶವಾಗುವವು. ಉದಾ-ಅತಿ+ಉತ್ತಮ=ಅತ್ಯುತ್ತಮ; ನದೀ+ಉದಕ=ನದ್ಯುದಕ; ಗುರು + ಆಜ್ಞೆ=ಗುರ್ವಾಜ್ಞೆ; ಸ್ವಯಂಭೂ + ಆಕೃತಿ=ಸ್ವಯಂಭ್ವಾಕೃತಿ, ಪಿತೃ+ಆಜ್ಞೆ=ಪಿತ್ರಾಜ್ಞೆ.

ಸಂಸ್ಕೃತ ವ್ಯಂಜನ ಸಂಧಿ

೧. ವರ್ಗಗಳ ಮೊದಲನೆಯ ಅಕ್ಷರಗಳಿಗೆ ಸ್ವರವು ಇಲ್ಲವೆ ಮೃದು ವರ್ಣಗಳು ಮುಂದೆ ಬಂದರೆ ಆ ಆ ವರ್ಗಗಳ ಮೂರನೆಯ ವರ್ಣಗಳ ಆದೇಶವಾಗುವದು. ಉದಾ—ವಾಕ್ + ಇಂದ್ರಿಯ=ವಾಗಿಂದ್ರಿಯ; ವಾಕ್+ದೇವಿ=ವಾಗ್ದೇವಿ; ಷಟ್ + ಆಯತನ= ಷಡಾಯತನ; ಸಮ್ರಾಟ್+

ಗಮನ=ಸಮ್ರಾಡ್ಗಮನ ; ಸತ್+ಉಪದೇಶ=ಸದುಪದೇಶ ; ಅಪ್+ಉತ್ಪತ್ತಿ=ಅಬುತ್ಪತ್ತಿ ; ಅಪ್+ಜಾತ=ಅಬ್ಜಾತ ; ತ್ವಗ್ರೋಗ; ಈಷದ್ವಿಭೂತಿ ; ಅಬ್ಬಿಂದು ಮುಂ.

೨. ವರ್ಗಪ್ರಥಮಾಕ್ಷರಕ್ಕೆ ಕರ್ಕಶವ್ಯಂಜನವು ಪರವಾದರೆ ತೃತೀಯವರ್ಣಾದೇಶವಿಲ್ಲ. ಉದಾ— ದಿಕ್+ಪಾಲ=ದಿಕ್ಪಾಲ; ಷಟ್+ಕರ್ಣ=ಷಟ್ಕರ್ಣ ; ಸತ್+ಪಾತ್ರ=ಸತ್ಪಾತ್ರ ಮುಂ.

೩. ಸಕಾರ ತವರ್ಗಗಳಿಗೆ ಶಕಾರ ಚವರ್ಗಗಳ ಯೋಗವಿದ್ದರೆ ಸಕಾರ ತವರ್ಗಗಳಿಗೆ ಕ್ರಮದಿಂದ ಶಕಾರ ಚವರ್ಗಗಳ ಆದೇಶವಾಗುವದು. ಸಕಾರ ತವರ್ಗಗಳಿಗೆ ಷಕಾರ ಟವರ್ಗಗಳ ಯೋಗವಿದ್ದರೆ ಕ್ರಮದಿಂದ ಷಕಾರ ಟವರ್ಗಗಳ ಆದೇಶವಾಗುವದು.

ಉದಾ— ತಪಸ್+ಶಾಂತಿ=ತಪಶ್ಶಾಂತಿ ; ಯಶಸ್ + ಚಂದ್ರಿಕೆ=ಯಶಶ್ಚಂದ್ರಿಕೆ; ಲಸತ್+ಚಾಮರ=ಲಸಚ್ಚಾಮರ; ತದ್+ಜಾತಿ=ತಜ್ಜಾತಿ

ತಪಸ್+ಷಡ್ಭಾಗ=ತಪಷ್ಷಡ್ಭಾಗ; ಧನುಸ್ + ಟಂಕಾರ=ಧನುಷ್ಟಂಕಾರ; ತತ್+ಟಿಟ್ಟಭ=ತಟ್ಟಿಟ್ಟಭ; ಉಡ್+ಡಯನ=ಉಡ್ಡಯನ.

೪. ವರ್ಗಪ್ರಥಮಾಕ್ಷರಗಳಿಗೆ ಅನುನಾಸಿಕಗಳು ಪರವಾದರೆ ಆ ಆ ವರ್ಗದ ಅನುನಾಸಿಕದ ಆದೇಶವಾಗುವದು.

ಉದಾ—ದಿಕ್+ಮೂಢ=ದಿಙ್ಮೂಢ; ಷಟ್+ಮಾಸ=ಷಣ್ಮಾಸ; ಸತ್+ಮಾನ=ಸನ್ಮಾನ; ತತ್+ನರೇಂದ್ರ=ತನ್ನರೇಂದ್ರ; ಅಪ್+ಮಯ=ಅಮ್ಮಯ.

೫. ವಿಸರ್ಗದ ಹಿಂದೆ ಅಕಾರವಿದ್ದಾಗ ಮುಂದೆ ಅಕಾರವು ಇಲ್ಲವೆ ಮೃದುವ್ಯಂಜನವು ಬಂದರೆ ವಿಸರ್ಗಕ್ಕೆ ಉಕಾರಾದೇಶವಾಗುವದು. ಈ ಉಕಾರದ ಮುಂದಿನ ಅಕಾರಕ್ಕೆ ಲೋಪವಾಗುವದು. ಉದಾ— ಮನಃ+ರಥ=ಮನ+ಉ+ರಥ= (ಸಂಧಿಯಿಂದ) ಮನೋರಥ ; ಮನಃ+ಜವ ಮನೋಜವ ; ಮನಃ+ಅಭಿಲಾಷ=(ಮನ+ಉ+ಅ+ಭಿಲಾಷ=ಮನ+ಉ+ಭಿಲಾಷ=) ಮನೋಭಿಲಾಷ.

೩. ಶಬ್ದಗಳು (ಕನ್ನಡ ಭಾಷೆಯೊಳಗಿನವು)

ಶಬ್ದ:—ಅರ್ಥವುಳ್ಳ, ವಿಭಕ್ತಿಪ್ರತ್ಯಯವು ಸೇರದ ಪ್ರತ್ಯಯವಲ್ಲದ ಅಕ್ಷರಸಮುದಾಯವು ಶಬ್ದವೆನಿಸುವದು. ಉದಾ-ಮನೆ, ಹೊಲ, ಕುದುರೆ, ಕೈ, ಕಲ್ಲ, ಕಲಿ, ಕಾವೇರಿ, ಸಾವಿತ್ರಿ, ಹೋಗು, ಬರು, ಕೇಳು, ಕಾಣು ಮು.

ಪ್ರಕೃತಿ:—ಶಬ್ದಗಳಿಗೆ ವಿಭಕ್ತಿಪ್ರತ್ಯಯಗಳು ಸೇರುವಾಗ ಪ್ರಕೃತಿ ಎಂಬ ಹೆಸರೂ ಬರುವದು.

ಪ್ರಕೃತಿಗಳಲ್ಲಿ ಪ್ರಾತಿಪದಿಕ, ಧಾತು ಎಂಬ ಎರಡು ಭೇದಗಳುಂಟು. ವಿಭಕ್ತಿಪ್ರತ್ಯಯಗಳಲ್ಲಿ ನಾಮವಿಭಕ್ತಿಪ್ರತ್ಯಯ ಕ್ರಿಯಾವಿಭಕ್ತಿಪ್ರತ್ಯಯ ಎಂಬ ಎರಡು ಭೇದಗಳುಂಟು.

ಪ್ರಾತಿಪದಿಕ:—ನಾಮವಿಭಕ್ತಿ ಪ್ರತ್ಯಯಗಳು ಸೇರುವ ಪ್ರಕೃತಿಗಳು ಪ್ರಾತಿಪದಿಕಗಳು. ಉದಾ—ಹೊಲ, ಮನೆ, ಕುದುರೆ, ಕಲ್ಲ, ಕಮಲೆ, ಕರಿಯದು, ಬಿಳಿಯದು, ಅದು, ಇದು, ನೋಡಿದ, ಬಂದ, ನೋಟ, ಹೇಳಿಕೆ, ತಪ್ಪುಗಾರ, ಮಡಿವಳ, ಅರಮನೆ, ತುದಿಗಾಲು ಮು.

ಧಾತು:—ಕ್ರಿಯಾವಿಭಕ್ತಿಪ್ರತ್ಯಯಗಳು ಸೇರುವ ಪ್ರಕೃತಿಗಳು ಧಾತುಗಳು. ಉದಾ-ಮಾಡು, ಕೇಳು, ನುಡಿ, ಬಡಿ, ಪಡೆ, ಮಲಗಿಸು, ರಕ್ಷಿಸು ಮು.

ಪ್ರಾತಿಪದಿಕಗಳಿಗೆ ನಾಮವಿಭಕ್ತಿಪ್ರತ್ಯಯಗಳು ಸೇರಲು ನಾಮಪದಗಳೂ, ಧಾತುಗಳಿಗೆ ಕ್ರಿಯಾವಿಭಕ್ತಿಪ್ರತ್ಯಯಗಳು ಸೇರಲು ಕ್ರಿಯಾಪದಗಳೂ ಉಂಟಾಗುವವು.

ಕನ್ನಡಭಾಷೆಯಲ್ಲಿಯ ಮೂಲ ಪ್ರಾತಿಪದಿಕಗಳು ಅಚ್ಚಗನ್ನಡ ಶಬ್ದಗಳು ಇಲ್ಲದೆ ದೇಶ್ಯಶಬ್ದಗಳೆನಿಸುವವು. ನಮ್ಮ ಭಾಷೆಯಲ್ಲಿ ಹಲವು ಸಂಸ್ಕೃತ ಶಬ್ದಗಳು, ಇದ್ದ ತೆರದಲ್ಲಿಯೇ ಸೇರಿಕೊಂಡಿವೆ. ಹಲವು ಸಂಸ್ಕೃತ ಶಬ್ದಗಳು ವಿಕಾರಹೊಂದಿ ಸೇರಿರುವವು. ಅವನ್ನು 'ತದ್ಭವ' ಎಂದೆನ್ನುವರು. ಇವಲ್ಲದೆ ಮರಾಠಿ, ಹಿಂದುಸ್ತಾನಿ, ಇಂಗ್ಲಿಶ್ ಮೊದಲಾದ ಅನ್ಯಭಾಷೆಗಳಿಂದಲೂ ಕೆಲವು ಶಬ್ದಗಳು ಸೇರುತ್ತ ಬಂದಿವೆ. ಉದಾ—

ದೇಶ್ಯಶಬ್ದಗಳು— ಹೊಲ, ಮನೆ, ತಾಯಿ, ಅಣ್ಣ, ಅಮ್ಮ, ತಂಗಿ, ಕಾಯಿ, ಕೋಡು, ಸಿಟ್ಟು, ಕವಳಿಗೆ, ಕೈ, ಕಾಲು, ಆನೆ, ಎಲೆ, ಹೂ, ಒಂದು, ಎರಡು, ಮೂಡ (ಲು), ಮಳೆ, ಬೇಳೆ, ಚೇಳು ಕೂಳು ಮುಂ.

ಸಂಸ್ಕೃತಶಬ್ದಗಳು– ಗುಣ, ರಾತ್ರಿ, ರಾಮ, ಸಂತೋಷ, ಸಮುದ್ರ, ವಿಂಧ್ಯ, ಸ್ವರ್ಗ, ಇಂದ್ರ, ಕೋಪ, ರಕ್ಷಣ ಗೃಹ, ಗ್ರಹ, ಗ್ರಂಥ ಮುಂ.

ತದ್ಭವಶಬ್ದಗಳು— ನಿದ್ದೆ, ಸಂಜೆ, ಜಗತ್ತು, ಹನುಮಂತ, ಜಾತ್ರೆ, ಸೊಸೆ, ಬಾವಿ, ಕಟ್ಟಗೆ, ಮಸಿ, ಸಾಲೆ, ಅಡವಿ ಕಂಬ, ಕುಂಬಳ ಮುಂ.

ಅನ್ಯಭಾಷಾಶಬ್ದಗಳು— ಸರಕಾರ, ರೂಪಾಯಿ, ಕಾಯದೆ, ರೈತ, ಕಚೇರಿ, ಅಡಚಣೆ, ಬಂದೂಕು, ಮಸೀದೆ, ಕಾಗದ, ಸಾಮಾನು, ಮುದ್ದತ್ತು, ವಕೀಲ, ಖಾನಾವಳಿ, ಕೋರ್ಟು, ಸ್ಟೇಶನು, ಎಕರೆ, ಮೈಲು, ಪೋಲೀಸು, ಮೋಟಾರು, ಬ್ಯಾಂಕು, ಕಾರ್ಡು, ಗಿಲೀಟು ಮುಂ.

(ಕನ್ನಡದಲ್ಲಿ ಇಲ್ಲದ ಶಬ್ದಗಳಿಗಾಗಿ ಅನ್ಯಭಾಷಾಶಬ್ದಗಳನ್ನು ಉಪಯೋಗಿಸಬಹುದು. ಆದರೆ ಕನ್ನಡಶಬ್ದಗಳನ್ನು ಬಿಟ್ಟು ಪರಭಾಷಾಶಬ್ದಗಳನ್ನು ಉಪಯೋಗಿಸುವದು ಅನುಚಿತ.)

---

೪. ನಾಮಪದಗಳು

ಪದಗಳ ಮೂಲರೂಪಗಳನ್ನು ಪ್ರಕೃತಿಗಳೆಂದೆನ್ನುವರು. ಪ್ರಕೃತಿಗಳ ಮುಂದೆ ವಿಭಕ್ತಿಪ್ರತ್ಯಯಗಳು ಸೇರಿದರೆ ಪದಗಳಾಗುವವು. ನಾಮಪದಗಳನ್ನುಂಟುಮಾಡುವ ಮೂಲರೂಪವು ನಾಮವು ಇಲ್ಲವೆ ಪ್ರಾತಿಪದಿಕವು. ಪ್ರಾತಿಪದಿಕದ ಮುಂದೆ ನಾಮವಿಭಕ್ತಿಪ್ರತ್ಯಯಗಳು ಸೇರಿದರೆ, ನಾಮಪದಗಳಾಗುವವು. ಉದಾ– ರಾಮನು, ಮರವನ್ನು, ಕೊಡಲಿಯಿಂದ, ನೆಲಕ್ಕೆ; ಈ ನಾಮಪದಗಳ ಮೂಲರೂಪಗಳು ರಾಮ, ಮರ, ಕೊಡಲಿ, ನೆಲ ಎಂಬಿವು. ಈ ನಾಮಗಳ (ಪ್ರಾತಿಪದಿಕಗಳ) ಮುಂದೆ ಉ, ಅನ್ನು, ಇಂದ, ಕ್ಕೆ ಎಂಬ ನಾಮವಿಭಕ್ತಿಪ್ರತ್ಯಯಗಳು ಸೇರಲು ರಾಮನು, ಮರವನ್ನು, ಕೊಡಲಿಯಿಂದ, ನೆಲಕ್ಕೆ ಎಂಬ ನಾಮಪದಗಳಾಗುವವು.

ನಾಮಗಳಲ್ಲಿ ೧. ವಸ್ತುವಾಚಕ, ೨. ಸರ್ವನಾಮ, ೩. ವಿಶೇಷಣ, ೪. ಭಾವನಾಮ ಎಂಬ ನಾಲ್ಕು ಪ್ರಕಾರಗಳುಂಟು.

ವಸ್ತುವಾಚಕನಾಮ— ವಸ್ತುವನ್ನು ಹೇಳುವಂತಹ ನಾಮಗ
ವಸ್ತುವಾಚಕನಾಮಗಳು. ವಸ್ತು=ಇರುವಂತಹದು ; ಅಸ್ತಿತ್ವವು
ಪ್ರಾಣಿ ಅಪ್ರಾಣಿಗಳೆಲ್ಲವೂ ವಸ್ತುಗಳು. (ವಸ್ತುವಾಚಕ=ವಸ್ತುವನ
ಹೇಳುವ,) ಎತ್ತು ಎಂಬ ಶಬ್ದವು ವಸ್ತುವಾಚಕವು; ಎಂದರೆ ಅದು ಎತ
ಎಂಬ ವಸ್ತುವನ್ನು ಹೇಳುವದು. ಎತ್ತು ಎಂಬ ನಾಮವನ್ನು ಉಚ್ಚರಿಸಿದಾ
ನಮ್ಮ ಮನಸ್ಸಿನಲ್ಲಿ ಕೊಡು, ಹಿಣಿ,(ಇಣಿ), ಬಾಲ ಮುಂತಾದ **ಅವಯ**
ಗಳುಳ್ಳ ನಾಲ್ಕು ಕಾಲಿನ ಪ್ರಾಣಿಯು ಬರುತ್ತದೆ. ಆದುದರಿಂದ ಎತ್ತು ಎಂ
ನಾಮಕ್ಕೆ ಆ ಪ್ರಾಣಿಯು ಅರ್ಥವು. ಯಾವ ನಾಮವನ್ನು ಉಚ್ಚರಿಸಿದಾ
ಯಾವ ವಸ್ತುವು ನಮ್ಮ ಮನಸ್ಸಿನಲ್ಲಿ ಬರುವದೋ ಆ ವಸ್ತುವು
ನಾಮದ ಅರ್ಥವು. ಹೊಳೆ, ಗಿಡ, ಕುಂಟೆ, ಕೂದಲು, ರಾಮ, ಕಲ್ಲ, ಅಣ
ಅಕ್ಕ, ಸಹ್ಯಾದ್ರಿ ಮೊದಲಾದ ವಸ್ತುಗಳು ನಮ್ಮ ಕಣ್ಣಿಗೆ ಕಾಣಿಸುವವ
ಕೆಲವು ವಸ್ತುಗಳು ಮನಸ್ಸಿಗಷ್ಟೇ ತೋರುವವು. ಉದಾ—ಸಿಟ್ಟು, ಹೇ
ಕನಸು, ಆಕಾಶ, ಪೂರ್ವ, ಪಶ್ಚಿಮ, ಚಿತ್ತ, ಆತ್ಮ, ಬುದ್ಧಿ, ಕತ್ತಲೆ, ಕನಿಕ
ನಿನ್ನೆ, ನಾಳೆ ಮುಂತಾದವು.

ವಸ್ತು ವಾಚಕನಾಮಗಳಲ್ಲಿ **ರೂಢ, ಅಂಕಿತ, ಅನ್ವರ್ಥಕ ಎಂ**
ಭೇದಗಳನ್ನು ಕೆಲವರು ಹೇಳುವರು.

ರೂಢನಾಮ—ರೂಢಿಯಿಂದ ಬಂದ ಹೆಸರುಗಳು ರೂಢನಾಮಗಳ
ರೂಢಿಯೆಂದರೆ, ಅನಾದಿಕಾಲದಿಂದ ಬಂದ ವ್ಯವಹಾರವು (ಬಳಕೆಯು
ಮನೆ ಎಂಬುದು ರೂಢನಾಮವು. ಮನೆ ಎಂಬ ಹೆಸರು ಅನಾದಿಕಾಲದಿಂ
ಬಳಕೆಯಲ್ಲಿ ಬಂದಿರುವದು. ಇದೇ ಮೇರೆಗೆ ಹೊಲ, ಮಳೆ, ಕೋಲು, ಕ
ಮುಂ. ರೂಢನಾಮಗಳು. **ಜಾತಿವಾಚಕಗಳೆಲ್ಲ** ರೂಢನಾಮಗಳಾಗುವವ
ಒಂದೇ ತರದ ಆಕೃತಿಯುಳ್ಳ ಹಲವು ವಸ್ತುಗಳಲ್ಲಿರುವ ಸಾಮಾ
ಧರ್ಮವು ಜಾತಿಯು. ಜಾತಿಯನ್ನು ಹೇಳುವ ಶಬ್ದವು ಜಾತಿವಾಚಕವ
ಆನೆ ಎಂಬ ಶಬ್ದವು ಜಾತಿವಾಚಕ ಶಬ್ದವು. ಒಂದೇ ತರದ ಆಕೃತಿಯು
ಆನೆಗಳಲ್ಲಿರುವ 'ಆನೆತನ' ಎಂಬುದು ಜಾತಿಯು. ಆನೆ ಎಂಬ ಶಬ್ದವು
ಜಾತಿಯನ್ನು ಹೇಳುವದರಿಂದ ಜಾತಿವಾಚಕವು ಹೀಗೆಯೇ ಕಲ್ಲು, ಮ
ಮಣ್ಣು, ಕಟ್ಟಿಗೆ, ಕೊಡ ಮುಂತಾದವು ಜಾತಿವಾಚಕಗಳು.

ಅಂಕಿತನಾಮ:—ವ್ಯವಹಾರದ ಅನುಕೂಲತೆಗಾಗಿ ಇಟ್ಟ ಹೆಸರುಗಳು ಅಂಕಿತನಾಮಗಳು. ಉದಾ—ರಾಮ, ಕಲ್ಲ, ವಿಂಧ್ಯಾದ್ರಿ, ಗಂಗೆ, ಮೈಸೂರು ಮುಂ. ಅಂಕಿತನಾಮವು, ಒಂದು ವ್ಯಕ್ತಿಯನ್ನು ಹೇಳುವದಕ್ಕಾಗಿ ಉಪಯೋಗಿಸಲ್ಪಡುವದು.

ಅನ್ವರ್ಥಕನಾಮ:—(ಅನು+ಅರ್ಥ=ಅನ್ವರ್ಥ) ಅರ್ಥಕ್ಕೆ ಅನುಸಾರವಾಗಿ ಬಂದ ಹೆಸರುಗಳು ಅನ್ವರ್ಥಕನಾಮಗಳು. ಇವು ಅವಯವಾರ್ಥವುಳ್ಳಂಥವಿರುವವು. ಉದಾ-ಕುಂಟ+(ಕುಂಟು+ಅ); ಗಾಣಿಗ (ಗಾಣ+ಇಗ) ಮೋಸಗಾರ (ಮೋಸ+ಗಾರ) ಮುಂತಾದವು.

ಸರ್ವನಾಮ:—ಎಲ್ಲ ನಾಮಗಳ ಸ್ಥಳದಲ್ಲಿ, ಉಪಯೋಗಿಸುವ ಶಬ್ದಗಳು ಸರ್ವನಾಮಗಳು. ಅದು, ಇದು, ಯಾವದು, ನಾನು, ನೀನು, ತಾನು, ಏನು ಈ ಶಬ್ದಗಳು ಸರ್ವನಾಮಗಳು. ಸರ್ವನಾಮಗಳೆಂದರೆ, ಸರ್ವವಸ್ತುವಾಚಕಗಳು. (ಸರ್ವ=ಎಲ್ಲ ವಸ್ತುಗಳ, ನಾಮ=ವಾಚಕ) ಎಂದರೆ ಬೇಕಾದ ವಸ್ತುಗಳನ್ನು ಹೇಳುವಾಗ ಇವುಗಳನ್ನು ಉಪಯೋಗಿಸುವರು. ಉದಾ—ನಾನು ಮನುಷ್ಯನು, ನಾನು ಹೆಂಗುಸು, ನಾನು ಮರವು; ಅವನು ಮನುಷ್ಯನು, ಅವಳು ದೇವಿ, ಅದು ಕೊಡಲಿ. ಇಲ್ಲಿ ನಾನು, ಅದು (ಪು. ಲಿಂ.-ಅವ, ಸ್ತ್ರೀ. ಲಿಂ.-ಅವಳು, ನ. ಲಿಂಗ-ಅದು) ಎಂಬವು ಸರ್ವವಾಚಕಗಳೆಂದು ಕಾಣಬರುವವು. ಆದದರಿಂದ ಅವು ಸರ್ವನಾಮಗಳು.

ನಾನು—ಉತ್ತಮಪುರುಷದ ಸರ್ವನಾಮ. ನೀನು— ಮಧ್ಯಮಪುರುಷದ ಸರ್ವನಾಮ. ಉಳಿದುವೆಲ್ಲ ಪ್ರಥಮಪುರುಷದವು.

ವಿಶೇಷಣ:-*ಗುಣ, ಸಂಖ್ಯೆ, ಪರಿಮಾಣ ಇವುಗಳಿಂದ ವಸ್ತುವನ್ನು ವರ್ಣಿಸುವ (ವಿಶಿಷ್ಟ ಸ್ವರೂಪವನ್ನು ಹೇಳುವ) ಶಬ್ದವು ವಿಶೇಷಣವೆನಿಸುವದು. ಉದಾ—ಎಳೆಯ ಮರವು; ಎರಡು ಕುದುರೆಗಳು; ಅಷ್ಟು ಕೆಲಸ.

---

*=ವಸ್ತುವಿನಲ್ಲಿ ಬೇರೆ ಮಾಡಲಿಕ್ಕೆ ಬಾರದಂತೆ ಇರುವ ಧರ್ಮ. ಕಪ್ಪು, ಕರಿದು, ಬಿಳಿಪು, ಬಿಳಿದು ಇವುಗಳಲ್ಲಿಯ ಭೇದವನ್ನು ವಿದ್ಯಾರ್ಥಿಗಳು ನೋಡಬೇಕು. ಕರಿದು= ಕಪ್ಪುಳ್ಳದ್ದು, ಕಪ್ಪು=ಕರಿಯ ವಸ್ತುವಿನ ಗುಣ; ಬರಿಯ ಗುಣವನ್ನು ಹೇಳುವಂಥ ಕಪ್ಪು ಬಿಳುಪು ಮೊದಲಾದವು ತದ್ಧಿತಭಾವನಾಮಗಳಲ್ಲಿ ಸೇರುವವು. ಕರಿಯುದು ಬಿಳಿಯುದು ಮೊದಲಾದವು ವಿಶೇಷಣಗಳಾಗುವವು.

ವಿಶೇಷಣದ ಉಪಯೋಗ:–ವಿಶೇಷಣವು ಒಂದೇ ಬಗೆಯ ಹಲ
ವಸ್ತುಗಳಿಂದ ಒಂದನ್ನು ಬೇರೆ ಮಾಡುವಾಗ ಉಪಯೋಗಿಸಲ್ಪಡುವದು
ಅದರಿಂದ ವಿಶೇಷಣಕ್ಕೆ ಭೇದಕವೆಂದೂ ಹೆಸರುಂಟು. ಉದಾ— ಕರಿಯ
ಮಣ್ಣು; ಇಲ್ಲಿ ಬಿಳಿಯ ಮಣ್ಣು, ಕೆಮ್ಮಣ್ಣು, ಕರಿಯಮಣ್ಣು ಮೊದಲಾ
ಹಲವು ತರದ ಮಣ್ಣುಗಳಲ್ಲಿ ಒಂದು ಮಣ್ಣನ್ನು ಕರಿಯ ಎಂಬ ಶಬ್ದದಿಂ
ವರ್ಣಿಸಿ ಬೇರೆ ಮಾಡಿದೆ. ಆದದರಿಂದ ಕರಿಯ ಎಂಬದು ವಿಶೇಷಣವು
ಇದರಿಂದ ವಿಶೇಷಣವು ವಿಶೇಷ್ಯದ ಅರ್ಥವನ್ನು ಸುಂಕುಚಿತವಾಗಿ ಮಾಡು
ದೆಂಬುದು ಸ್ಪಷ್ಟವಾಗುವದು. ಮಣ್ಣು ಎಂಬದರ ಅರ್ಥದಲ್ಲಿ ಎಲ್ಲ ತರ
ಮಣ್ಣುಗಳು ಸೇರುವದರಿಂದ ಕರಿಯ ಮಣ್ಣು ಎಂಬದರ ಅರ್ಥಕ್ಕಿಂತ ಅದ
ವ್ಯಾಪಕವೆಂಬದು ಸ್ಪಷ್ಟವದೆ.

ವಿಶೇಷ್ಯ:— ವಿಶೇಷಣದಿಂದ ವರ್ಣಿಸಲ್ಪಡುವದು ಇಲ್ಲವೆ ಬೇ
ಮಾಡಲ್ಪಡುವದು ವಿಶೇಷ್ಯವೆನಿಸುವದು. ಆದದರಿಂದ ವಿಶೇಷ್ಯಕ್ಕೆ ಭೇದ್ಯ
ವೆಂಬ ಹೆಸರೂ ಉಂಟು. ಉದಾ— ಕರಿಯ ಮಣ್ಣು ಎಂಬಲ್ಲಿ ಮಣ್ಣು
ಎಂಬುದು ವಿಶೇಷ್ಯವು.

ವಿಶೇಷಣ ಭೇದ:— ವಿಶೇಷಣಗಳಲ್ಲಿ ಗುಣಿವಾಚಕ (ಗುಣವಾಚಕ
ಸಂಖ್ಯೇಯವಾಚಕ (ಸಂಖ್ಯಾವಾಚಕ), ಪರಿಮೇಯವಾಚಕ (ಪರಿಮಾಣ
ವಾಚಕ) ಎಂದು ಮೂರು ಭೇದಗಳುಂಟು.

ಗುಣಿವಾಚಕ ವಿಶೇಷಣ:—ಗುಣದಿಂದ ವಸ್ತುವನ್ನು ವರ್ಣಿಸು
ವಿಶೇಷಣವು ಗುಣಿವಾಚಕವೆನಿಸುವದು. (ಗುಣಿ=ಗುಣವುಳ್ಳದ್ದು) ಉದಾ—
ಕರಿಯತನ ಎಂಬ ಗುಣದಿಂದ ಒಂದು ವಸ್ತುವನ್ನು ಕರಿಯದು ಎಂದ
ಹೇಳುತ್ತೇವೆ. ಆದದರಿಂದ ಕರಿಯದು ಕಲ್ಲು ಎಂಬಲ್ಲಿ ಕರಿಯದು ಗುಣಿವಾ
ಚಕ ವಿಶೇಷಣವು. ಇದೇ ಮೇರೆಗೆ ಬಿಳಿಯದು ನಾಯಿ ಮುಂ. ಇದನ್ನು
ಗುಣವಾಚಕವೆಂದೂ ಹೇಳುವ ವಾಡಿಕೆಯುಂಟು.

ಉದಾ— ಕರಿಯದು (ಕರಿದು), ಬಿಳಿಯದು (ಬಿಳಿದು), ಹೊಸದು
ಹಳೆಯದು, ಎಳೆಯದು, ಒಳ್ಳೆಯದು, ನಿಡಿಯದು (ನಿಡಿದು), ಕಡಿದ
ಮುಂ. ಈ ಗುಣಿವಾಚಕಗಳ ಕಡೆಯಲ್ಲಿ 'ದು' ಎಂಬ ಅಕ್ಷರವಿದೆ.

ಒಳ್ಳಿತು, ಮೆಲ್ಲಿತು, ತೆಳ್ಳಿತು ಮುಂತಾದ ಗುಣವಾಚಕಗಳ ಕಡೆಯಲ್ಲಿ 'ತು' ಎಂಬ ಅಕ್ಕರವಿದೆ.

ಬೇರೆ ಉದಾಹರಣೆಗಳು—ಜಾಣ, ಹೆಳವ, ಚೆಲುವ, ಬಡವ, ಬಡಕ, ಅಗ್ಗ, ಅಗ್ಗಳ, ಹೆಡ್ಡ, ಸೋಮಾರಿ, ಕರಿಕ, ಕೆಂಚ, ಸುಂದರ, ಚತುರ ಮುಂ.

* ಸಂಖ್ಯೇಯವಾಚಕವಿಶೇಷಣ:— ಸಂಖ್ಯೆಯಿಂದ ವಸ್ತುವನ್ನು ವರ್ಣಿಸುವ ವಿಶೇಷಣವು ಸಂಖ್ಯೇಯ ವಾಚಕವೆನಿಸುವದು. ಇದನ್ನು ಸಂಖ್ಯಾವಾಚಕವೆಂದೂ ಹೇಳುವರು. ಉದಾ—ಒಂದು, ಎರಡು, ನೂರು, ಮುಕ್ಕಾಲು, ಸಾವಿರಾರು ಒಂದಾನೊಂದು ಬೇರೊಂದು, ಯಾವದೊಂದು ಮುಂತಾದವು.

ಒಂದು ಎರಡು ಎಂದರೆ ಒಂದು ಎರಡು ಸಂಖ್ಯೆಗಳಿಂದ ಎಣಿಸಲ್ಪಡುವ ಯಾವವಾದರೂ ವಸ್ತುಗಳು; ಒಂದು ಹಣ್ಣು, ಎರಡು ಹೂಗಳು ಮುಂ.

ಪರಿಮೇಯವಾಚಕ ವಿಶೇಷಣ-ಪರಿಮಾಣದಿಂದ ವಸ್ತುವನ್ನು ವರ್ಣಿಸುವ ವಿಶೇಷಣವು ಪರಿಮೇಯವಾಚಕವೆನಿಸುವದು. (ಪರಿಮಾಣ=ಅಳತೆ) ಉದಾ-ಹಿರಿಯದು, ಕಿರಿಯದು, ಚಿಕ್ಕದು, ಸಣ್ಣದು, ಪುಟ್ಟದು, ದೊಡ್ಡದು, ಅಷ್ಟು, ಇಷ್ಟು, ಎಷ್ಟು, ಹಲವು, ಕೆಲವು, ಎಲ್ಲವು, (ಎಲ್ಲ), ಮತ್ತಿಷ್ಟು, ಇನ್ನಷ್ಟು, ಗುರು, ಲಘು, ಬಹು, ಅಲ್ಪ ಮುಂ. ಇದಕ್ಕೆ ಪರಿಮಾಣ ವಾಚಕವೆಂದೂ ಹೆಸರುಂಟು.

ಇವಲ್ಲದೆ ಸರ್ವನಾಮಗಳೂ ಕೃದಂತ ಪ್ರಕರಣದಲ್ಲಿ ಹೇಳುವ ಕೃನ್ನಾಮಗಳೂ, ತದ್ಧಿತಾಂತ ಪ್ರಕರಣದಲ್ಲಿ ಹೇಳುವ ತದ್ಧಿತನಾಮಗಳೂ ಸಮಾಸ ಪ್ರಕರಣದಲ್ಲಿ ಹೇಳುವ ಕೆಲವು ಸಮಾಸಗಳೂ ವಿಶೇಷಣಗಳಾಗುವವು.†

---

*ಸಂಸ್ಕೃತದ ಸಂಖ್ಯೇಯವಾಚಕ, ಸರ್ವನಾಮ, ಇವುಗಳನ್ನು ಕನ್ನಡದಲ್ಲಿ ಉಪಯೋಗಿಸುವದಿಲ್ಲ.

†ಅದ, ಅದಂತಹ (ಅದಂಥ) ಉಳ್ಳ ಮೊದಲಾದವನ್ನು ಸೇರಿಸಿ ಹಲವು ನಾಮಗಳನ್ನು ವಿಶೇಷಣಗಳಂತೆ ಉಪಯೋಗಿಸುವದರಿಂದ ಅವು ವಿಶೇಷಣಗಳಾಗುವವು. ಅರಸನಾದ, ಹೊಲಸಾದ, ಬಿರುಸಾದ, ಪಾವನೆಯಾದ, ಸುಂದರವಾದಂತಹ, ಬಲವುಳ್ಳ, ಬಲವುಳ್ಳ ಮುಂ.

ಷಷ್ಠ್ಯಂತಗಳು ತಮಗೆ ಸಂಬಂಧಿಸಿದ ಮುಂದಿನ ಪದಗಳ ವಿಶೇಷಣಗಳಾಗುವವು. ಉದಾ-ಆ ಬಗೆಯ ನೋಟವು; ಈ ತರದ ವಿಚಾರವು; ಜಾಣತನದ ಪ್ರಶ್ನೆಯು.

ಉದಾ—

ಸರ್ವನಾಮ ವಿಶೇಷಣ— ಆ ಮನೆ, ಆ ಬಳೆ, ಈ ತೋಟ, ಈ ಹೆಸರು, ಯಾವ ಹುಡುಗ, **ಯಾವ** ಅಂಗ ಮು.

ಕೃದಂತ ವಿಶೇಷಣ—ನೋಡಿದ ಊರು; ಹೋದ ವರುಷ, ಬರುವ ಕುದುರೆ, ಕೇಳುವ ಕಿವಿ, ಕಾಣದ ಕಣ್ಣು; ಬೇಡದ ಮನುಷ್ಯ.

[ಅಹ, ಇಹ ಎಂಬಿವು ಆಗು ಇರು ಧಾತುಗಳ ಅಪ್ಪ ಇಪ್ಪ ಎಂಬ ರೂಪಗಳಿಂದ ಹುಟ್ಟಿದ ಕೃದಂತವಿಶೇಷಣಗಳು. (ಆಗ್+ವ=ಆಗ್ವ=ಅಪ್ಪ=ಅಹ; ಇರ್+ಪ=ಇರ್ಪ=ಇಪ್ಪ=ಇಹ; ಇವುಗಳ ಹಿಂದೆ ಅಂತು, ಇಂತು, ಎಂತು ಇವನ್ನು ಸೇರಿಸುವರು. ಅಂತು+ಅಹ=ಅಂತಹ; ಎಂತು+ಅಹ=ಎಂತಹ; ಅಂತಹ, ಇಂತಹ, ಎಂತಹ ಇವುಗಳಿಂದಾದ ಅಂಥ, ಇಂಥ ಎಂಥ ಎಂಬ ರೂಪಗಳು ವಾಡಿಕೆಯಲ್ಲಿವೆ.]

ಕೃದಂತವಿಶೇಷಣಗಳು ಕ್ರಿಯೆಯಿಂದ ವಸ್ತುವನ್ನು ವರ್ಣಿಸುವವು. ಉದಾ-ಓಡುವ ಕುದುರೆ; ಇಲ್ಲಿ ಓಡುವ ಎಂಬ ಕೃದಂತವಿಶೇಷಣವು ಓಡುವಿಕೆ ಎಂಬ ಕ್ರಿಯೆಯಿಂದ ಕುದುರೆಯನ್ನು ವರ್ಣಿಸುವದು.

ತದ್ಧಿತಾಂತ ವಿಶೇಷಣ- ಗುಣವಂತನಾದ ರಾಮನು; ಓದಾಳಿಯಾದ ಹುಡುಗನು; ಒಂದನೆಯ ಮನೆ; ನಾಲ್ಕನೆಯ ಮರದಲ್ಲಿ.

ಸಮಾಸ ವಿಶೇಷಣ-ಮುಕ್ಕಣ್ಣನಾದ ಶಿವನು; ಹನ್ನೆರಡು ತಿಂಗಳುಗಳು. ಹಸಿಬಿಸಿ ಲಡ್ಡುಗೆಯು.

ಭಾವನಾಮ:–ಭಾವ ಎಂದರೆ ಗುಣ (ಧರ್ಮ), ಕ್ರಿಯೆ ಎಂಬ ಅರ್ಥಗಳು. ವಸ್ತುಗಳ ಭಾವವನ್ನು ಎಂದರೆ ಗುಣಕ್ರಿಯೆಗಳನ್ನು ಹೇಳುವ ನಾಮಗಳು. ಭಾವನಾಮಗಳೆನಿಸುವವು. ಉದಾ—ಚೆಲುವಿಕೆ, ಬಾಳಿಕೆ ಮು. ಚೆಲುವಿಕೆಯೆಂದರೆ ಚೆಲುವ ವಸ್ತುವಿನ ಗುಣ; ಬಾಳಿಕೆಯೆಂದರೆ ಬಾಳುವ ಕ್ರಿಯೆ. ಮುಂದೆ ಕೃದಂತ ಪ್ರಕರಣದಲ್ಲಿಯೂ, ತದ್ಧಿತಾಂತ ಪ್ರಕರಣದಲ್ಲಿಯೂ ಭಾವಾರ್ಥಕ ಪ್ರತ್ಯಯಗಳು ಹೇಳಿವೆ. ಭಾವಾರ್ಥದಲ್ಲಿ ಪ್ರತ್ಯಯವು ಸೇರಲು ಉಂಟಾದ ಆ ನಾಮಗಳು ಭಾವನಾಮಗಳೆನಿಸುವವು. ಇಕೆ, ಅದು (ಉದು), ತ ಮೊದಲಾದವು ಕೃದಂತ ಪ್ರಕರಣದಲ್ಲಿ ಹೇಳಿದ ಭಾವಪ್ರತ್ಯಯಗಳು; ಇವು ಸೇರಿದರೆ ಬಾಳಿಕೆ, ಕೇಳುವದು (ಕೇಳುವುದು),

ಕುಣಿತ ಮೊದಲಾದವು ಕೃದ್ಭಾವನಾಮಗಳಾಗುವವು. ಇಕೆ, ತನ, ಪು ಮೊದಲಾದವು ತದ್ಧಿತಾಂತಪ್ರಕರಣದಲ್ಲಿ ಹೇಳಿದ ಭಾವಪ್ರತ್ಯಯಗಳು. ಇವು ಸೇರಿದರೆ ಗೌಡಿಕೆ, ಹಿರಿಯತನ, ನುಣುಪು ಮೊದಲಾದವು ತದ್ಧಿತಭಾವನಾಮಗಳಾಗುವವು. (ಕೃದಂತ ತದ್ಧಿತಾಂತ ಪ್ರಕರಣಗಳಲ್ಲಿ ನೋಡಿರಿ). ಸಂಸ್ಕೃತ ಭಾವನಾಮ— ಶೌರ್ಯ, ಮಹತ್ತ್ವ, ವಿದ್ವತ್ತೆ, ಸೌಜನ್ಯ, ಲಾಘವ ಮುಂ.

ನಾಮವಿಭಕ್ತಿಪ್ರತ್ಯಯಗಳು ಎಂಟು. ಅವು ಹಿಂದೆ ಹೇಳಿದ ವಸ್ತುವಾಚಕನಾಮ, ಸರ್ವನಾಮ, ವಿಶೇಷಣ, ಭಾವನಾಮ ಎಂಬ ಎಲ್ಲ ತರದ ನಾಮಗಳಮೇಲೆ ಸೇರುವವು. ಈ ಎಲ್ಲ ಪ್ರಾತಿಪದಿಕಗಳಿಗೆ ನಾಮ ಎಂಬುದು ಸಾಮಾನ್ಯವಾದ ಹೆಸರು. ವಸ್ತುವಾಚಕನಾಮ, ವಿಶೇಷಣ, ಸರ್ವನಾಮ, ಭಾವನಾಮ ಎಂಬಿವು ಅವಕ್ಕೆ ವಿಶೇಷಪ್ರಕಾರದ ಹೆಸರುಗಳು. ನಾಮವಿಭಕ್ತಿಪ್ರತ್ಯಯಗಳು ಸೇರಿದ ಆ ಎಲ್ಲ ರೂಪಗಳನ್ನೂ ನಾಮಪದಗಳೆಂದೆನ್ನುವರು. ವಸ್ತುವಾಚಕನಾಮಪದ- ಹೊಲವು, ಮರವನ್ನು, ಮನೆಯಿಂದ, ಸಿಟ್ಟಿನ ಮುಂ. ಸರ್ವನಾಮಪದ- ಅವನು, ಇವನನ್ನು, ಯಾರಿಂದ, ಏತರ ಮುಂ.

ಭಾವನಾಮಪದ— ನೋಟವು, ಮಾಟವನ್ನು ಹೇಳಿಕೆಯಿಂದ, ಕುಡಿತಕ್ಕೆ, ಕಿರಿಯತನದಿಂದ, ಜಾಣ್ಮೆಯ, ಗೌಡಿಕೆಯಲ್ಲಿ ಮುಂ.

ನಾಮವಿಭಕ್ತಿಪ್ರತ್ಯಯ	ಅದರ ಹೆಸರು	
ಉ	ಪ್ರಥಮಾವಿಭಕ್ತಿ	(ಪ್ರಥಮೆ)
ಅನ್ನು	ದ್ವಿತೀಯಾ ,,	(ದ್ವಿತೀಯೆ)
ಇಂದ	ತೃತೀಯಾ ,,	(ತೃತೀಯೆ)
ಇಗೆ, ಅಕ್ಕೆ (ಗೆ, ಕೆ)	ಚತುರ್ಥೀ ,,	(ಚತುರ್ಥಿ)
ಇಂದ	ಪಂಚಮೀ ,,	(ಪಂಚಮಿ)
ಅ	ಷಷ್ಠೀ ,,	(ಷಷ್ಠಿ)
ಅಲ್ಲಿ	ಸಪ್ತಮೀ ,,	(ಸಪ್ತಮಿ)
ಎ, ಏ,	ಸಂಬೋಧನ ,,	(ಸಂಬೋಧನ)

ಒಂದು ವಸ್ತುವನ್ನು ಹೇಳುವ ಪದವು ಏಕವಚನದ್ದು; ಒಂದಕ್ಕಿಂತ ಹೆಚ್ಚಿನ ವಸ್ತುಗಳನ್ನು ಹೇಳುವ ಪದವು ಬಹುವಚನದ್ದು. ಈ ನಾಮವಿಭಕ್ತಿ

ಪ್ರತ್ಯಯಗಳು ಒಂದು ವಸ್ತುವನ್ನು ಹೇಳಿದರೆ ಅವಕ್ಕೆ ಏಕವಚನ ಪ್ರತ್ಯಯಗಳೆಂದೂ ಒಂದಕ್ಕಿಂತ ಹೆಚ್ಚಿನ ವಸ್ತುಗಳನ್ನು ಹೇಳಿದರೆ ಅವಕ್ಕೆ ಬಹುವಚನ ಪ್ರತ್ಯಯಗಳೆಂದೂ ಹೆಸರು.

ಏಕವಚನದಲ್ಲಿಯೂ ಬಹುವಚನದಲ್ಲಿಯೂ ನಾಮವಿಭಕ್ತಿಪ್ರತ್ಯಯವು ಒಂದೇ. ಆದರೂ ನಡುವೆ ಆಗಮವು ಸೇರುವದರಿಂದ ಏಕವಚನದ ರೂಪವೂ ಬಹುವಚನದ ರೂಪವೂ ಬೇರೆ ಬೇರೆ ಆಗುವವು. ಉದಾ—'ಮರ' ಪ್ರಾತಿಪದಿಕವು; 'ಉ' ಪ್ರಥಮಾವಿಭಕ್ತಿಪ್ರತ್ಯಯವು; ವ್ ಎಂಬುದು ಏಕವಚನದ ಆಗಮವು; ಗಳ್ ಎಂಬುದು ಬಹುವಚನದ ಆಗಮವು. ಮರ+ವ್+ಉ= ಮರವು—ಏಕವಚನದ ರೂಪವು. ಮರ+ಗಳ್+ಉ=ಮರಗಳು—ಬಹುವಚನದ ರೂಪವು. (ವಚನಸೂಚಕವಾದ ವ್ ಗಳ್ ಮೊದಲಾದವು ಪ್ರತ್ಯಯಗಳಾದರೂ ಆಗಮಗಳೆಂದು ಹೇಳುವ ವಾಡಿಕೆಯುಂಟು.)

ಲಿಂಗ—ಕನ್ನಡದಲ್ಲಿ ಸಾಮಾನ್ಯವಾಗಿ **ಪುರುಷವಾಚಕ** (ಗಂಡುಸರನ್ನು ಹೇಳುವ) ನಾಮಗಳು **ಪುಲ್ಲಿಂಗದವು**, ಸ್ತ್ರೀವಾಚಕ (ಹೆಂಗುಸರನ್ನು ಹೇಳುವ) ನಾಮಗಳು **ಸ್ತ್ರೀಲಿಂಗದವು**; ಉಳಿದ ಎಲ್ಲ ನಾಮಗಳು **ನಪುಂಸಕಲಿಂಗದವು.**

ಪುಲ್ಲಿಂಗದ ನಾಮಗಳು— ಅರಸ, ಪಾರ್ವ, ಹುಡುಗ, ಚೆಲುವ, ಅಂಗಡಿಕಾರ, ಮುಕ್ಕಣ್ಣ ಮುಂ.

ಸ್ತ್ರೀಲಿಂಗದ ನಾಮಗಳು— ಅರಸಿ, ಪಾರ್ವತಿ, ಹುಡುಗಿ, ಚೆಲುವೆ, ಜಾಣೆ, ಬೀಗಿತಿ, ಕಮಲಮುಖಿ ಮುಂ.

ನಪುಂಸಕಲಿಂಗದ ನಾಮಗಳು—ಮರ, ಹೊಲ, ಮನೆ, ಧಾರವಾಡ, ಹೋಲಿಕೆ, ತಂಪು ಮುಂ.

ಜನ, ಮಹಾಜನ ಶಬ್ದಗಳು ಏಕವಚನದಲ್ಲಿ ನಪುಂಸಕಲಿಂಗವಾಗಿವೆ; ಬಹುವಚನದಲ್ಲಿ ಪುಲ್ಲಿಂಗವಾಗಿವೆ. ಕು, ಸು, ಸತ್, ದುರ್ ಇವುಗಳಿಂದ ಕೂಡಿದ ಜನಶಬ್ದವು ಎರಡೂ ವಚನಗಳಲ್ಲಿಯೂ ಪುಲ್ಲಿಂಗವಾಗಿದೆ. ಉದಾ- ಜನವು, ಮಹಾಜನವು ನೆರೆಯಿತು. ಜನರು, ಮಹಾಜನರು ನೆರೆದರು. ಕುಜನನು ಸುಜನನು ಸಜ್ಜನನು ದುರ್ಜನನು; ಕುಜನರು ಸುಜನರು ಮುಂ.

ಕೆಲವು ಶಬ್ದಗಳನ್ನು ಎರಡು ಲಿಂಗಗಳಲ್ಲಿಯೂ, ಮೂರುಲಿಂಗಗಳಲ್ಲಿಯೂ ಪ್ರಯೋಗಿಸುತ್ತಾರೆ. ಉದಾ—

ಪುನ್ನಪುಂಸಕಗಳು—ವಸಂತ, ಮಂಗಳ, ಮಲಯಾನಿಲ, ಮಾರುತ, ವರ, (ನೇಸರು=ಸೂರ್ಯ) ಮುಂ.

ಪುಲ್ಲಿಂಗದಲ್ಲಿ— | ಮಂಗಳನು ಹುಟ್ಟಿದನು; ನೇಸರು ಹೊಳೆಯುತ್ತಾನೆ.
ನಪುಂಸಕಲಿಂಗದಲ್ಲಿ— | ಮಂಗಳವು ಕಾಣಿಸುತ್ತದೆ; ನೇಸರು ಹೊಳೆಯುತ್ತದೆ.
ಪುಂಸ್ತ್ರೀಲಿಂಗಗಳು— ಅವರು ಇವರು, ಯಾರು, ಹೋದವರು, ನೋಡಿದವರು ಮುಂ.

ಪುಲ್ಲಿಂಗದಲ್ಲಿ— | ಅವರು ಹುಡುಗರು; ಹೋದವರು ಗಂಡುಸರು.
ಸ್ತ್ರೀಲಿಂಗದಲ್ಲಿ— | ಇವರು ಹುಡುಗಿಯರು; ಹೋದವರು ಹೆಂಗುಸರು
ಸ್ತ್ರೀನಪುಂಸಕಗಳು— ದೇವತೆ, ಹೆಣ್ಣು, ಹುಡುಗಿ, ತೊತ್ತು, ಸಿರಿ, ಗಂಗೆ ಮುಂ.

ಸ್ತ್ರೀಲಿಂಗದಲ್ಲಿ— | ದೇವತೆ ಒಲಿದಳು; ಹುಡುಗಿ ಓದುತ್ತಾಳೆ; ಈ ಹೆಣ್ಣು ಒಳ್ಳೆಯವಳು.
ನಪುಂಸಕಲಿಂಗದಲ್ಲಿ | ದೇವತೆ ಒಲಿಯಿತು; ಹುಡುಗಿ ಓದಿತು; ಈ ಹೆಣ್ಣು ಒಳ್ಳೆಯದು.

ನಾನು ನೀನು ತಾನು ಮು. ಸರ್ವನಾಮಗಳೂ, ಮಾಡಿದ ಮಾಡುವ ಮಾಡದ ಮುಂತಾದ ಕೃನ್ನಾಮಗಳೂ, ಆಳುಶಬ್ದವೂ ಮೂರೂ ಲಿಂಗಗಳಲ್ಲಿ ಉಪಯೋಗಿಸಲ್ಪಡುವವು

ಸರ್ವನಾಮ—ಪು—ನೀನು ಮನುಷ್ಯನು; ಸ್ತ್ರೀ—ನೀನು ಹೆಂಗುಸು; ನಪು—ನೀನು ಮರವು; ಯಾವನು ಗಂಡುಸು; ಯಾವಳು ಹೆಂಗುಸು; ಯಾವದು ಮನೆ.

ಕೃನ್ನಾಮ—ಪು— ನೋಡುವವನು; ಸ್ತ್ರೀ- ನೋಡುವವಳು; ನಪು-ನೋಡುವದು (ನೋಡುವುದು); ಆಳು-ಇವನು ಆಳು, ಇವಳು ಆಳು; ಇದು ಆಳು.

(ಎರಡು ಮೂರು ಲಿಂಗಗಳಲ್ಲಿ ಉಪಯೋಗಿಸಲ್ಪಡುವ ಶಬ್ದಗಳು ಕೂಡ ಒಂದು ವಾಕ್ಯದಲ್ಲಿ ಒಂದೊಂದೇ ಲಿಂಗದಲ್ಲಿ ಪ್ರಯೋಗಿಸಲ್ಪಡುವವು.)

ನಾಮವಿಭಕ್ತಿ ಪ್ರತ್ಯಯಗಳು ಸೇರುವಾಗ ಬರುವ ಆಗಮಗಳು
ಏಕವಚನ

(೧) ಅಕಾರಾಂತ ಪುಲ್ಲಿಂಗ ನಾಮಗಳಿಗೆ ವಿಭಕ್ತಿಪ್ರತ್ಯಯಗಳು ಸೇರುವಾಗ ನಡುವೆ ನಕಾರಾಗಮವಾಗುವದು. * ಉದಾ-ಅಣ್ಣ+ನ್+ಉ ಅಣ್ಣನು ; ಅಣ್ಣನನ್ನು, ಮಗನು, ಮಗನನ್ನು, ಅವನು, ಇವನು, ಕರಿಯನು, ಮಡಿವಳನು, ಮುಕ್ಕಣ್ಣನು ಮುಂ.

(೨) ಅಕ್ಕ, ಅವ್ವ, ಅಮ್ಮ, ಎಂಬ ಸ್ತ್ರೀಲಿಂಗ ನಾಮಗಳಿಗೂ ನಕಾರಾಗಮವಾಗುವದು. ಉದಾ-ಅಕ್ಕ+ನ್+ಉ=ಅಕ್ಕನು ; ಅಕ್ಕನನ್ನು, ಅವ್ವನು; ಅಮ್ಮನನ್ನು ಮುಂ.

(೩) ಮಂಗ, ಕೋಣ, ಬಸವ, ಕೋಡಗ, ಹಂಗ, ಗರುಡ ಮೊದಲಾದ ಕೆಲವು ನಪುಂಸಕ ನಾಮಗಳಿಗೂ ನಕಾರಾಗಮವಾಗುವದು. ಉದಾ-ಮಂಗ+ನ್+ಉ=ಮಂಗನು; ಮಂಗನನ್ನು ; ಕೋಣನಿಂದ; ಬಸವನಿಗೆ, ಕೋಡಗನಿಂದ; ಹಂಗನ; ಗರುಡನಲ್ಲಿ; ಕೋಣನೇ ಮುಂ.

(೪) ಅಕಾರಾಂತ ಸ್ತ್ರೀಲಿಂಗನಾಮಗಳ ಮುಂದೆ ಸಾಮಾನ್ಯವಾಗಿ ಳಕಾರಾಗಮವಾಗುವದು. ಉದಾ—ಒಬ್ಬ+ಳ್+ಉ=ಒಬ್ಬಳು; ಎಳೆಯ+ಳ್+ಉ=ಎಳೆಯಳು; ಹೊಸಬಳು; ವ್ಹಿಕ್ಟೋರಿಯಳು ಮುಂ.

(೫) ಅಕಾರಾಂತ ನಪುಂಸಕಲಿಂಗ ನಾಮಗಳಿಗೆ ಪ್ರಥಮಾ ದ್ವಿತೀಯಾ ಸಂಬೋಧನಗಳಲ್ಲಿ ವಕಾರಾಗಮವೂ, ಚತುರ್ಥಿಯನ್ನು ಬಿಟ್ಟು ಉಳಿದ ವಿಭಕ್ತಿಗಳಲ್ಲಿ ದಕಾರಾಗಮವೂ ಬರುವದು. ಚತುರ್ಥಿಯಲ್ಲಿ ಆಗಮವಿಲ್ಲ; ಕ್ಕೆ ಪ್ರತ್ಯಯವು ಬರುವದು. ಉದಾ—ಪ್ರ. ಮರ+ವ್+ಉ=ಮರವು; ದ್ವಿ—ಮರವನ್ನು; ಸಂ. ಮರವೇ; ತೃ. ಮರ+ದ್+ಇಂದ=ಮರದಿಂದ; ಪಂ.-ಮರದಿಂದ; ಷ.-ಮರದ; ಸ.-ಮರದಲ್ಲಿ; ಚ.-ಮರ+ಕ್ಕೆ=ಮರಕ್ಕೆ.

ವಿಭಕ್ತಿಪ್ರತ್ಯಯಗಳು ಸೇರುವಾಗ ಲೋಪ, ಯಕಾರಾಗಮ, ವಕಾರಾಗಮಗಳು ಸಂಧಿಪ್ರಕರಣದಲ್ಲಿ ಹೇಳಿದ ಸಂಧಿನಿಯಮಗಳನ್ನನುಸರಿಸಿ ಬರು

---

*ಹಳಗನ್ನಡದ ಪ್ರ. ವಿ. ಪ್ರತ್ಯಯವಾದ ಮ್ ಎಂಬುದರ ಸ್ಥಾನದಲ್ಲಿ ಬಂದ ನ್ ಎಂಬುದೇ ಪ್ರತ್ಯಯವೆಂದೂ ಕೊನೆಯ ಉ ಎಂಬುದು ಆಗಮವೆಂದೂ ಕೆಲವರ ಮತ.

ವವು. ಉದಾ:-ಲೋಪ-ಊರು+ಉ=ಊರು; ಊರು+ಅನ್ನು=ಊರನ್ನು ಕಲ್ಲು+ಉ=ಕಲ್ಲು ಮುಂ. ಯಕಾರಾಗಮ-ಸ್ತ್ರೀ+ಯ್+ಉ=ಸ್ತ್ರೀಯು; ಗೌರಿ+ಉ=ಗೌರಿಯು; ನಾಯಿ+ಅನ್ನು=ನಾಯಿಯನ್ನು; ಮನೆ+ಅನ್ನು= ಮನೆಯನ್ನು; ಕೈ+ಇಂದ=ಕೈಯಿಂದ. ವಕಾರಾಗಮ- ಗುರು+ವ್+ ಉ=ಗುರುವು; ಕರ್ತೃ+ವ್+ಅನ್ನು=ಕರ್ತೃವನ್ನು; ಗೋ+ವ್+ ಇಂದ= ಗೋವಿಂದ; ವಧು+ವ್+ಇಗೆ=ವಧುವಿಗೆ.

ಒಂದು ಸ್ವರವುಳ್ಳ ಸ್ತ್ರೀ. ಲಿಂ. ಸ್ತ್ರೀಶಬ್ದದ ವಿಭಕ್ತಿರೂಪಗಳು- ಸ್ತ್ರೀಯು, ಸ್ತ್ರೀಯನ್ನು, ಸ್ತ್ರೀಯಿಂದ, ಸ್ತ್ರೀಗೆ, ಸ್ತ್ರೀಯಿಂದ, ಸ್ತ್ರೀಯ, ಸ್ತ್ರೀಯಲ್ಲಿ, ಸ್ತ್ರೀಯೇ.

ಕೈ ಶಬ್ದದ ವಿಭಕ್ತಿರೂಪಗಳು— ಕೈಯು, ಕೈಯನ್ನು, ಕೈಯಿಂದ, ಕೈಗೆ, ಕೈಯಿಂದ, ಕೈಯ, ಕೈಯಲ್ಲಿ, ಕೈಯೇ.

(೪) ಉ, ಊ, ಋ, ಓಕಾರಾಂತ, ನಾಮಗಳ ಮುಂದೆ ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ, ವಿಭಕ್ತಿಗಳಲ್ಲಿ ಇನ್ ಆಗಮವು ವಿಕಲ್ಪದಿಂದಾಗುವದು. †(ವಿಕಲ್ಪವೆಂದರೆ ಬರುವದೂ ಉಂಟು, ಬಾರದಿರುವದೂ ಉಂಟು.) ಚತುರ್ಥಿಯಲ್ಲಿ ಇಗೆ ಪ್ರತ್ಯಯವು ಬರುವದು.

ತೃ. ಪಂ. ಕಾಲು+ಇನ್+ಇಂದ=ಕಾಲಿನಿಂದ; ಕಾಲು+ಇಂದ= ಕಾಲಿಂದ; ಗುರು+ಇನ್+ಇಂದ=ಗುರುವಿನಿಂದ; ಗುರು+ಇಂದ= ಗುರುವಿಂದ; ವಧು+ಇನ್+ಇಂದ=ವಧುವಿನಿಂದ; ವಧು+ಇಂದ=ವಧುವಿಂದ.

ಷ. ಕಾಲು+ಇನ್+ಅ=ಕಾಲಿನ; ಕಾಲು+ಅ=ಕಾಲ; ಗುರುವಿನ; ಗುರುವ; ವಧುವಿನ; ವಧುವ.

ಸ. ಕಾಲು+ಇನ್ + ಅಲ್ಲಿ=ಕಾಲಿನಲ್ಲಿ; ಕಾಲು + ಅಲ್ಲಿ=ಕಾಲಲ್ಲಿ; ಗುರುವಿನಲ್ಲಿ; ಗುರುವಲ್ಲಿ. ವಧುವಿನಲ್ಲಿ, ವಧುವಲ್ಲಿ.

ಚ. ಕಾಲು + ಇಗೆ + ಕಾಲಿಗೆ; ಗುರುವಿಗೆ ವಧುವಿಗೆ.

ಸೂ. ಕರ್ತೃ, ಗೋ ಮೊದಲಾದ ಊ, ಋ, ಓಕಾರಾಂತ ಶಬ್ದಗಳ ರೂಪಗಳು ಉಕಾರಾಂತಗಳಂತೆ ಆಗುವವು.

---

†ಹಳಗನ್ನಡ ವ್ಯಂಜನಾಂತ ಶಬ್ದಗಳ ಮುಂದೆ ಉಕಾರವು ಸೇರಿ ಉಕಾರಾಂತಗಳಾದ ನಾಮಗಳ ಮುಂದೆ ತೃತೀಯಾದಿವಿಭಕ್ತಿಗಳಲ್ಲಿ ಇನಾಗಮವನ್ನು ಮಾಡದಿರುವದುಂಟು.

(೫) ಇ, ಈ, ಎ, ಐಕಾರಾಂತ ನಾಮಗಳಿಗೆ ಚತುರ್ಥಿಯಲ್ಲಿ ಗೆ ಪ್ರತ್ಯಯವು ಬರುವದು. ಉದಾ—ಇಕಾರಾಂತಕ್ಕೆ ಪು. ಲಿಂ—ಕಲಿ+ಗೆ=ಕಲಿಗೆ; ಓದಾಳಿಗೆ; ಸ್ತ್ರೀಲಿಂ- ತಾಯಿ+ಗೆ=ತಾಯಿಗೆ, ಪಾರ್ವತಿಗೆ; ನ. ಲಿಂ. ಗುಡಿ+ಗೆ=ಗುಡಿಗೆ. ನುಡಿ+ಗೆ=ನುಡಿಗೆ. ಈಕಾರಾಂತಕ್ಕೆ, ಸ್ತ್ರೀ+ಗೆ=ಸ್ತ್ರೀಗೆ; ಶ್ರೀಗೆ; ಎಕಾರಾಂತಕ್ಕೆ-ಪು. ಲಿಂ. ತಂದೆ+ಗೆ=ತಂದೆಗೆ; ದೊರೆಗೆ; ಸ್ತ್ರೀ ಲಿಂ-ಗಂಗೆ+ಗೆ=ಗಂಗೆಗೆ; ಸೊಸೆಗೆ; ನ. ಲಿಂ.— ಮನೆ+ಗೆ=ಮನೆಗೆ, ಆನೆ+ಗೆ=ಆನೆಗೆ; ಐಕಾರಾಂತಕ್ಕೆ—ಕೈ + ಗೆ=ಕೈಗೆ, ಮೈಗೆ.

(೬) ಇ,ಉ, ಎ, ಐಕಾರಾಂತನಾಮಗಳ ಪ್ರಥ. ಏ. ವ.ದ ಉ ಪ್ರತ್ಯಯಕ್ಕೆ ಲೋಪವೂ ಬರುವದುಂಟು. ಉದಾ—ತಾಯಿಯು ಸಲಹಿದಳು-ತಾಯಿ ಸಲಹಿದಳು; ಮಗುವು ಬಂದಿತು; ಮಗು ಬಂದಿತು; ತಂದೆಯು ಕಲಿಸಿದನು; ತಂದೆ ಕಲಿಸಿದನು; ಕೈಯು ಬಡಿಯಿತು-ಕೈ ಬಡಿಯಿತು ಅಕಾರಾಂತ ನಾಮಗಳ ಮುಂದೆಯೂ ಪ್ರಥಮೆಯ ಪ್ರತ್ಯಯವನ್ನು ಲೋಪ ಮಾಡುವದುಂಟು. ಉದಾ—ಭೀಷ್ಮನು ನುಡಿದನು; ಭೀಷ್ಮ ನುಡಿದನು.

(೭) ಸಂಬೋಧನದಲ್ಲಿ ಎ, ಏ ಪ್ರತ್ಯಯಗಳಿಗೆ ಪು. ಸ್ತ್ರೀಲಿಂಗಗಳಲ್ಲಿ ಲೋಪವಾಗುವದೂ ಉಂಟು. ಲೋಪವಾದಾಗ ಕೊನೆಯ ಸ್ವರವು ವಿಕಲ್ಪವಾಗಿ ದೀರ್ಘವಾಗುವದು.

ಸಂಬೋಧನ— ರಾಮ+ಎ=ರಾಮನೆ; ರಾಮ+ಏ=ರಾಮನೇ; ಮರವೆ ಮರವೇ, ಗೌರಿಯೆ, ಗೌರಿಯೇ; ವಿಭಕ್ತಿಲೋಪಕ್ಕೆ-ಶಂಕರ, ಗೌರಿ, ದೀರ್ಘಕ್ಕೆ— ಶಂಕರಾ, ಗೌರೀ.

ಋಕಾರಾಂತ ಕರ್ತೃ ಶಬ್ದದ ವಿಭಕ್ತಿರೂಪಗಳು-ಕರ್ತೃವು; ಕರ್ತೃವನ್ನು ಕರ್ತೃವಿನಿಂದ, ಕರ್ತೃವಿಂದ; ಕರ್ತೃವಿಗೆ; ಕರ್ತೃವಿನಿಂದ ಕರ್ತೃವಿಂದ, ಕರ್ತೃವಿನ, ಕರ್ತೃವ; ಕರ್ತೃವಿನಲ್ಲಿ; ಕರ್ತೃವಲ್ಲಿ ಕರ್ತೃವೇ.

ಬಹುವಚನ

(೧) ಬಹುವಚನದಲ್ಲಿ ಸಾಮಾನ್ಯವಾಗಿ ಪ್ರಾತಿಪದಿಕಗಳ ಮುಂದೆ ಗಳ್ ಆಗಮವು ಬರುವದು. ಉದಾ-ಮರ+ಗಳ್+ಉ=ಮರಗಳು; ಗುರು=ಗಳ್ + ಉ=ಗುರುಗಳು, ತಂದೆಗಳು; ಹೆಣ್ಣುಗಳು, ಅಮ್ಮಗಳು, ತಾಯಿಗಳು, ಕಲಿಗಳು, ನುಡಿಗಳು ಮುಂ.

(೨) ಅಕಾರಾಂತ ಪುಲ್ಲಿಂಗ ನಾಮಗಳ ಮುಂದೆ ಬಹುವಚನದಲ್ಲಿ ಅರ್ ಆಗಮವು ಬರುವದು. ಉದಾ—ಮನುಷ್ಯ+ಅರ್+ಉ=ಮನುಷ್ಯರು; ಮುದುಕ + ಅರ್ + ಉ=ಮುದುಕರು; ಕುರುಡರು; ಜನರು ಮುಂ.

(೩) ಇ, ಎಕಾರಾಂತ ಪುಲ್ಲಿಂಗ ನಾಮಗಳ ಮುಂದೆ ಬಹುವಚನದಲ್ಲಿ ಗಳ್ ಆಗಮವು ಬರುವದು. ಉದಾ- ಕಲಿಗಳು; ದೊರೆಗಳು; ತಂದೆಗಳು ಮುಂ.

(೪) ಇ, ಈ, ಎಕಾರಾಂತ ಸ್ತ್ರೀಲಿಂಗ ನಾಮಗಳ ಮುಂದೆ ಅರ್ ಆಗಮವು ಬರುವದು. ಉದಾ- ಇಕಾರಾಂತ-ಮಡದಿ+ಅರ್ + ಉ=ಮಡದಿಯರು; ನಾರಿಯರು. ಈಕಾರಾಂತ—ಸ್ತ್ರೀ+ಅರ್ + ಉ=ಸ್ತ್ರೀಯರು; ಎಕಾರಾಂತ-ಅತ್ತೆ + ಅರ್ + ಉ=ಅತ್ತೆಯರು; ಸೊಸೆಯರು.

(೫) ಅಣ್ಣ, ಮಾವ, ಭಾವ, ಗಂಡ, ತಮ್ಮ, ತಾಯಿ, ಅಕ್ಕ, ಅತ್ತೆ ಸೊಸೆ ಮೊದಲಾದ ಬಂಧುವಾಚಕ (ಬಳಗದವರನ್ನು ಹೇಳುವ) ಪುಲ್ಲಿಂಗ ಸ್ತ್ರೀಲಿಂಗ ನಾಮಗಳಿಗೆ ಬಹುವಚನದಲ್ಲಿ ಅಂದಿರ್ ಆಗಮವಾಗುವದು. ಉದಾ—ಅಣ್ಣ + ಅಂದಿರ್+ಉ=ಅಣ್ಣಂದಿರು, ತಾಯಿ+ಅಂದಿರ್ + ಉ= ತಾಯಿಯಂದಿರು; (ತಾಯಂದಿರು); ಇದೇ ಮೇರೆಗೆ ಮಾವಂದಿರು ಮಾವಂದಿರನ್ನು ; ಗಂಡಂದಿರಿಂದ ; ತಮ್ಮಂದಿರಿಗೆ ; ಅಕ್ಕಂದಿರಿಂದ; ಅತ್ತೆಯಂದಿರ, ಸೊಸೆಯಂದಿರಲ್ಲಿ ಮುಂ.

(೬) ಮಗನು, ಮಗಳು, ಮಗು, ಶಬ್ದಗಳ ಬಹುವಚನದ ರೂಪವು ಮಕ್ಕಳು ಎಂದಾಗುವದು ಉದಾ—ಏ. ವ-ಮಗನು, ಮಗಳು, ಮಗು, ಬ. ವ.—ಮಕ್ಕಳು, ಮಕ್ಕಳನ್ನು ಮುಂ.

ಸಂಮಾನಾರ್ಥದಲ್ಲಿ ಶಬ್ದಗಳ ಮುಂದೆ ಇಲ್ಲವೆ ಷಷ್ಠ್ಯಂತಗಳ ಮುಂದೆ ಅವರು ಎಂಬ ಬಹುವಚನದ ರೂಪವನ್ನಿಡುವರು. ಉದಾ— ಕಲ್ಲಣ್ಣ+ಅವರು=ಕಲ್ಲಣ್ಣವರು; ಸ್ವಾಮಿಗಳವರು. ಸ್ವಾಮಿಯವರು ಷ.— ಅಮ್ಮನ + ಅವರು=ಅಮ್ಮನವರು; ಅಪ್ಪನವರು ಮುಂ.

(೭) ಸಂಬೋಧನದಲ್ಲಿ ಬಹುವಚನದ ಆಗಮದ ಮುಂದೆ ಎ ಏ ಪ್ರತ್ಯಯಗಳು ಬರುವಂತೆ ಇರ, ಇರಾ, ಅ, ಆ ಪ್ರತ್ಯಯಗಳೂ ಬರುವವು.

ಉದಾ—ಮರ+ಗಳ್+ಏ=ಮರಗಳೇ; ಮಕ್ಕಳು+ಇರ=ಮಕ್ಕಳಿ... ಕರುಗಳಿರ; ತಂದೆಗಳಿರ; ಸ್ತ್ರೀಗಳಿರ; ಮರಗಳಿರ; ತಂದೆಗಳಿರಾ; ಸ್ತ್ರೀಗಳಿರ... ಮುಂತಾದವು. ಅ ಆ ಗಳಿಗೆ-ಅಣ್ಣಂದಿರ; ತಾಯಂದಿರಾ.

	ಗುರು ಶಬ್ದದ ರೂಪಗಳು ಏ. ವ.	ಬ. ವ.	ಅಕ್ಕ ಶಬ್ದದ ರೂಪಗಳು ಏ. ವ.	ಬ. ವ.
ಪ್ರ.	ಗುರುವು, ಗುರು	ಗುರುಗಳು	ಅಕ್ಕನು	ಅಕ್ಕಂದಿರು
ದ್ವಿ.	ಗುರುವನ್ನು	ಗುರುಗಳನ್ನು	ಅಕ್ಕನನ್ನು	ಅಕ್ಕಂದಿರನ್ನು
ತೃ.	ಗುರುವಿಂದ ಗುರುವಿನಿಂದ	ಗರುಗಳಿಂದ	ಅಕ್ಕನಿಂದ	ಅಕ್ಕಂದಿರಿಂದ
ಚ.	ಗುರುವಿಗೆ	ಗುರುಗಳಿಗೆ	ಅಕ್ಕನಿಗೆ	ಅಕ್ಕಂದಿರಿಗೆ
ಪಂ.	ಗುರುವಿಂದ, ಗುರುವಿನಿಂದ	ಗುರುಗಳಿಂದ	ಅಕ್ಕನಿಂದ	ಅಕ್ಕಂದಿರಿಂದ
ಷ.	ಗುರುವ, ಗುರುವಿನ	ಗುರುಗಳ	ಅಕ್ಕನ	ಅಕ್ಕಂದಿರ
ಸ.	ಗುರುವಲ್ಲಿ, ಗುರುವಿನಲ್ಲಿ	ಗುರುಗಳಲ್ಲಿ	ಅಕ್ಕನಲ್ಲಿ	ಅಕ್ಕಂದಿರಲ್ಲಿ
ಸಂ.	ಗುರುವೇ	ಗುರುಗಳೇ	ಅಕ್ಕನೇ	ಅಕ್ಕಂದಿರೇ

ಸರ್ವನಾಮ ವಿಭಕ್ತಿ ರೂಪಗಳು

ಏಕವಚನ

(೧) ಅದು, ಇದು, ಯಾವದು (ಯಾವುದು) ಶಬ್ದಗಳು ಪುಲ್ಲಿಂಗ-ಸ್ತ್ರೀ... ಲಿಂಗಗಳ ಏಕವಚನದಲ್ಲಿ ಕೆಳಗೆ ಹೇಳುವ ರೂಪಗಳನ್ನು ಹೊಂದುವವು.

ಅದು, ಪು. ಲಿಂ.—ಅವ ಆತ ಸ್ತ್ರೀ. ಲಿಂ.—ಅವಳು, ಆಕೆ

ಇದು, ಪು. ಲಿಂ.—ಇವ ಈತ ಸ್ತ್ರೀ. ಲಿಂ.—ಇವಳು. ಈಕೆ

ಯಾವದು (ಯಾವುದು)— ಪು. ಲಿಂ.—ಯಾವ, ಯಾವಾತ.

ಸ್ತ್ರೀ. ಲಿಂ. ಯಾವಳು, ಯಾವಾಕೆ

(೨) ಅವ, ಇವ, ಯಾವ, ಆತ, ಈತ, ಯಾವಾತ, ಶಬ್ದಗಳ ರೂಪಗಳು ಅಕಾರಾಂತ ಪುಲ್ಲಿಂಗ ಶಬ್ದಗಳಂತೆ ಆಗುವವು. ಅವಳು, ಇವಳು, ಯಾವಳು, ಯಾವಾಕೆ ಶಬ್ದಗಳ ರೂಪಗಳು ಸಾಮಾನ್ಯ ನಿಯಮಗಳಂತೆ ಆಗುವವು. ಚತುರ್ಥಿಯಲ್ಲಿ ಇಗೆ ಪ್ರತ್ಯಯವು ಬರುವದು, ಉದಾ— ಅವನು ಅವನನ್ನು ಅವನಿಂದ; ಅವಳು, ಅವಳನ್ನು, ಅವಳಿಂದ; ಚ. — ಅವನಿಗೆ, ಅವಳಿಗೆ.

(೩) ಅದು, ಇದು, ಯಾವದು (ಯಾವುದು) ಶಬ್ದಗಳ ಮುಂದೆ ನಪುಂಸಕಲಿಂಗದಲ್ಲಿ ತೃತೀಯಾ ಪಂಚಮೀ ಷಷ್ಠೀ ಸಪ್ತಮೀ ವಿಭಕ್ತಿಗಳಲ್ಲಿ ಅರ್ ಆಗಮವಾಗುವುದು. ಚತುರ್ಥಿಯಲ್ಲಿ ಅಕ್ಕೆ ಪ್ರತ್ಯಯವು ಬರುವದು. ಉದಾ— ತೃ. ಪಂ. ಅದು+ಅರ್+ಇಂದ=ಅದರಿಂದ ; ಷ. ಇದು+ಅರ್+ಅ=ಇದರ; ಸ. ಯಾವದು+ಅರ್+ಅಲ್ಲಿ=ಯಾವದರಲ್ಲಿ; ಚ. ಅದು+ಅಕ್ಕೆ= ಅದಕ್ಕೆ, ಯಾವುದಕ್ಕೆ.

ನಾನು ಶಬ್ದದ ವಿಭಕ್ತಿರೂಪಗಳು—ನಾನು, ನನ್ನನ್ನು, ನನ್ನಿಂದ, ನನಗೆ, ನನ್ನಿಂದ, ನನ್ನ, ನನ್ನಲ್ಲಿ. ಹೀಗೆಯೇ ನೀನು, ತಾನು ಶಬ್ದಗಳ ರೂಪಗಳಾಗುವವು.

ಏನು ಶಬ್ದದ ಏಕವಚನದ ರೂಪಗಳಷ್ಟೇ ಉಂಟು. ಉದಾ-ಏನು ಏನನ್ನು. ಏನು ಶಬ್ದಕ್ಕೆ ತೃತೀಯಾದಿ ವಿಭಕ್ತಿಗಳಲ್ಲಿ ಏತರ್ ಎಂಬಾದೇಶ ವಾಗುವದು—ಏತರಿಂದ, ಏತಕ್ಕೆ, ಏತರಿಂದ ಏತರ, ಏತರಲ್ಲಿ.

ಏತರಿಂದ ಮೊದಲಾದ ರೂಪಗಳನ್ನು ಯಾತರಿಂದ, ಯಾತಕ್ಕೆ ಎಂದು ವಾಡಿಕೆಯಲ್ಲಿ ಉಚ್ಚರಿಸುವರು.

ಆಕೆ, ಈಕೆ, ಯಾವಾಕೆ ಶಬ್ದಗಳ ಏಕವಚನದ ರೂಪಗಳಷ್ಟೇ ಬಳಕೆಯಲ್ಲಿವೆ. ಉದಾ—ಆಕೆಯು, ಆಕೆಯನ್ನು ಈಕೆಗೆ ಮುಂ.

ಬಹುವಚನ

(೧) ಅದು, ಇದು ಶಬ್ದಗಳಿಗೆ ಪುಲ್ಲಿಂಗ, ಸ್ತ್ರೀಲಿಂಗ ಬಹುವಚನದಲ್ಲಿ ಅವ, ಇವ, ಎಂಬ ರೂಪಗಳಾಗುವವು. ಈ ರೂಪಗಳಿಗೂ ವಿಭಕ್ತಿಪ್ರತ್ಯಯಕ್ಕೂ ನಡುವೆ ಅರ್ ಆಗಮವಾಗುವದು. ಪುಲ್ಲಿಂಗ ಸ್ತ್ರೀಲಿಂಗ ಬಹುವಚನ—ಅವ+ಅರ್+ಉ=ಅವರು, ಅವರನ್ನು ಮುಂ.

(೨) ಯಾವದು (ಯಾವುದು) ಶಬ್ದಕ್ಕೆ ಪು. ಸ್ತ್ರೀಲಿಂಗಗಳಲ್ಲಿ ಯಾರು ಎಂಬ ರೂಪವಾಗುವದು. ಉದಾ- ಯಾರು, ಯಾರನ್ನು, ಯಾರಿಂದ ಮುಂ.

(೩) ಅವ, ಇವ, ಯಾರು ಶಬ್ದಗಳಿಗೆ ಚತುರ್ಥಿಯಲ್ಲಿ ಇಗೆ ಪ್ರತ್ಯಯವು ಬರುವದು. ಉದಾ—ಅವರಿಗೆ, ಇವರಿಗೆ, ಯಾರಿಗೆ.

(೪) ಅದು, ಇದು, ಯಾವದು ಶಬ್ದಗಳಿಗೆ ನಪುಂಸಕಲಿಂಗದ
ಅವು, ಇವು, ಯಾವವು (ಯಾವುವು) ಎಂಬ ರೂಪಗಳಾಗುವವು. ಇವುಗ
ಮುಂದೆ ಪ್ರಥಮಾ ದ್ವಿತೀಯಾ ಚತುರ್ಥಿಗಳಲ್ಲಿ ಗಳ್ ಆಗಮವೂ ಬರ
ವದು. ಉದಾ—ಪ್ರ-ಅವು, ಅವುಗಳು; ಇವು, ಇವುಗಳು; ಯಾವವು
ಯಾವವುಗಳು; ದ್ವಿ. ಅವನ್ನು, ಅವುಗಳನ್ನು; ಚ. ಅವಕ್ಕೆ, ಅವುಗಳಿಗೆ.

(೫) ತೃತೀಯಾದಿ ವಿಭಕ್ತಿಗಳಲ್ಲಿ ಗಳ್ ಆಗಮವು ನಿತ್ಯವಾಗಿ ಆಗ
ವದು. ಉದಾ—ತೃ. ಪಂ. ಅವುಗಳಿಂದ; ಷ. ಅವುಗಳ ಸ. ಅವುಗಳಲ್ಲಿ.

ನಾನು ಶಬ್ದದ ವಿಭಕ್ತಿರೂಪಗಳು— ನಾವು, ನಮ್ಮನ್ನು, ನಮ್ಮಿಂದ
ನಮಗೆ, ನಮ್ಮಿಂದ, ನಮ್ಮ, ನಮ್ಮಲ್ಲಿ. ಇದೇ ಮೇರೆಗೆ ನೀನು ತಾನ
ಶಬ್ದಗಳ ರೂಪಗಳಾಗುವವು.

ಏನು ಶಬ್ದದ ಬಹುವಚನದ ರೂಪಗಳಿಲ್ಲ. ಯಾವದು ಶಬ್ದ
ನಪುಂಸಕಲಿಂಗದ ಬಹುವಚನದ ರೂಪಗಳನ್ನೇ ಏನು ಶಬ್ದದ ಬಹುವಚನ
ರೂಪಗಳಂತೆ ಉಪಯೋಗಿಸಬಹುದು.

ಉದಾ— ಏ. ವ.—ಏನು ಬ. ವ.—ಯಾವವು.
,, ಏನನ್ನು ,, ಯಾವವನ್ನು ಯಾವವುಗಳನ್ನು

ಸರ್ವನಾಮಗಳ ಸಂಬೋಧನರೂಪಗಳು ವಾಡಿಕೆಯಲ್ಲಿಲ್ಲ.

ವಿಶೇಷಣಗಳ ವಿಭಕ್ತಿರೂಪಗಳು

ಏಕವಚನ

(೧) ದು ಕಡೆಯಲ್ಲಿರುವ ಗುಣವಾಚಕ, ಪರಿಮೇಯವಾಚಕ
ಗಳಿಗೆ ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ಅವನು, ಅವಳು, ಎಂಬ ಸರ್ವನಾಮಗ
ವಿಭಕ್ತಿರೂಪಗಳು ಸೇರುವವು, ಆಗ ಅವುಗಳ ದು ಲೋಪವಾಗುವದು. ಉ

ಗುಣವಾಚಕ ಪು. ಲಿಂ.— ಕರಿಯದು+ಅವನು, ದು ಲೋಪ
ಕರಿಯ+ಅವನು=ಕರಿಯವನು; ಕರಿಯದು + ಅವನನ್ನು=ಕರಿಯವನನ
ಬಿಳಿಯವನಿಂದ; ಬಿಳಿಯವನಿಗೆ, ಬಿಳಿಯವನ, ಬಿಳಿಯವನಲ್ಲಿ ಮುಂ.

ಸ್ತ್ರೀ. ಲಿಂ.—ಕರಿಯದು+ಅವಳು, ದು ಲೋಪ, ಕರಿಯ+ಅವಳು=
ಕರಿಯವಳು, ಬಿಳಿಯವಳಿಂದ ಮುಂ.

ಪರಿಮೇಯವಾಚಕ, **ಪು.** ಲಿಂ— ಹಿರಿಯದು + ಅವನು, ದು ಲೋಪ; ಹಿರಿಯ+ಅವನು ಹಿರಿಯವನು; ಕಿರಿಯವನು; ದೊಡ್ಡವನಿಂದ ಮುಂ.

ಸ್ತ್ರೀಲಿಂ. ಹಿರಿಯದು+ಅವಳು=ಹಿರಿಯವಳು; ಕಿರಿಯವಳನ್ನು ಮುಂ.

(೨) ದು ಕಡೆಯಲ್ಲಿರುವ ಗುಣವಾಚಕ, ಪರಿಮೇಯವಾಚಕ, ಉಕಾರಾಂತ ಸಂಖ್ಯೇಯವಾಚಕ ಇವುಗಳಿಗೆ ನಪುಂಸಕಲಿಂಗದಲ್ಲಿ ತೃತೀಯಾ-ಪಂಚಮೀ-ಷಷ್ಠೀ-ಸಪ್ತಮೀ ವಿಭಕ್ತಿಗಳಲ್ಲಿ ಅರ್ ಆಗಮವು ಬರುವದು. ಚತುರ್ಥಿಯಲ್ಲಿ ಅಕ್ಕೆ ಪ್ರತ್ಯಯವು ಬರುವದು. ಉದಾ—

ಗುಣವಾಚಕ— ತೃ. ಪಂ. ಹೊಸದು+ಅರ್ (ಆಗಮ)+ ಇಂದ= ಹೊಸದರಿಂದ; ಷ. ಹೊಸದು+ಅರ್+ ಅ=ಹೊಸದರ; ಸ. ಹೊಸದು+ ಅರ್+ಅಲ್ಲಿ=ಹೊಸದರಲ್ಲಿ; ಇದೇ ಮೇರೆಗೆ ಕರಿಯದರಿಂದ, ಕರಿಯದರ, ಕರಿಯದರಲ್ಲಿ.

ಪರಿಮೇಯವಾಚಕ—ತೃ. ಪಂ. ಹಿರಿಯದು + ಅರ್ + ಇಂದ=ಹಿರಿಯದರಿಂದ; ಷ. ಹಿರಿಯದರ; ಸ. ಹಿರಿಯದರಲ್ಲಿ; ಇದೇ ಮೇರೆಗೆ ದೊಡ್ಡದರಿಂದ, ಚಿಕ್ಕದರಲ್ಲಿ, ಕಿರಿಯದರ ಮುಂ.

ಸಂಖ್ಯೇಯವಾಚಕ—ತೃ. ಪಂ. ಒಂದು ಅರ್+ಇಂದ=ಒಂದರಿಂದ ಒಂದರ, ಎರಡರಿಂದ ಮೂರರ ನಾಲ್ಕರಲ್ಲಿ ಮುಂ.

ಚತುರ್ಥಿ- ಹೊಸದು+ಅಕ್ಕೆ=ಹೊಸದಕ್ಕೆ; ಕರಿಯದಕ್ಕೆ; ಹಿರಿಯದಕ್ಕೆ; ಒಂದಕ್ಕೆ, ಮೂರಕ್ಕೆ ಮುಂ.

(೩) ಕರಿಯದು, ಎಳೆಯದು, ಹಿರಿಯದು ಮೊದಲಾದ ಗುಣವಾಚಕ ಪರಿಮೇಯವಾಚಕಗಳ ಪ್ರಕೃತಿರೂಪಗಳು ಪುಲ್ಲಿಂಗಸ್ತ್ರೀಲಿಂಗಗಳಲ್ಲಿ ಕರಿಯ ಎಳೆಯ, ಹಿರಿಯ, ಎಂದೂ; ನಪುಂಸಕಲಿಂಗದಲ್ಲಿ ಕರಿದು, ಎಳದು, ಹಿರಿದು ಎಂದೂ ಆಗುವವು. ಆಗ ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ಅಕಾರಾಂತ ನಾಮಗಳಂತೆಯೂ ನಪುಂಸಕಲಿಂಗದಲ್ಲಿ ಅದು ಎಂಬ ಸರ್ವನಾಮದಂತೆಯೂ ಅವುಗಳ ವಿಭಕ್ತಿರೂಪಗಳಾಗುವವು. ಉದಾ— ಪು. ಲಿಂ. ಕರಿಯನು, ಕರಿಯನನ್ನು; ಹಿರಿಯನಿಂದ, ಹಿರಿಯನಿಗೆ; ಎಳೆಯನಿಂದ, ಎಳೆಯನಲ್ಲಿ.

ಸ್ತ್ರೀ. ಲಿಂ.—ಕರಿಯಳು, ಕರಿಯಳನ್ನು, ಹಿರಿಯಳಿಂದ, ಹಿರಿಯಳಿಗೆ; ಎಳೆಯಳಿಂದ, ಎಳೆಯಳ, ಎಳೆಯಳಲ್ಲಿ, ಎಳೆಯಳೇ.

ನ. ಲಿಂ.—ಕರಿದು, ಕರಿದನ್ನು, ಹಿರಿದರಿಂದ, ಹಿರಿದರ, ಎಳದ
ಬಿಳಿದರ, ಬಿಳಿದರಲ್ಲಿ, ಬಿಳಿದೇ, ಕರಿಯುದು, ಕರಿಯುದನ್ನು ಮುಂ.

(೪) ಹೊಸದು, ಹಳದು ಎಂಬ ಗುಣಿವಾಚಕಗಳಿಗೆ ಪುಲ್ಲಿಂಗ—
ಲಿಂಗಗಳಲ್ಲಿ ಹೊಸಬ, ಹಳಬ ಎಂಬ ರೂಪಗಳಾಗುವವು. ಉದಾ—
ಹೊಸಬನು, ಹೊಸಬನನ್ನು, ಹೊಸಬನಿಂದ; ಸ್ತ್ರೀ. ಹೊಸಬಳಿಗೆ; ಹೊಸ
ಪು. ಲಿಂ. ಹಳಬನು; ಹಳಬನನ್ನು. ಸ್ತ್ರೀ. ಲಿಂ.— ಹಳಬಳ, ಹಳ

(೫) ಅನೆಯ ಪ್ರತ್ಯಯಾಂತ ತದ್ಧಿತನಾಮಗಳ ಮುಂದೆ ಅ
ಅವಳು, ಅದು ಎಂಬ ಸರ್ವನಾಮಗಳ ವಿಭಕ್ತಿರೂಪಗಳು ಸೇರು
ಉದಾ—ಪು. ಲಿಂ. ಒಂದನೆಯ+ಅವನು=ಒಂದನೆಯವನು; ಒಂದನೆ
ನನ್ನು; ಸ್ತ್ರೀ. ಲಿಂ. ಒಂದನೆಯ+ಅವಳು=ಒಂದನೆಯವಳು; ನ.
ಒಂದನೆಯ-ಅದು=ಒಂದನೆಯುದು; ಒಂದನೆಯುದನ್ನು;

ಮೂರನೆಯವನನ್ನು; ನಾಲ್ಕನೆಯವಳಿಗೆ; ಐದನೆಯುದಕ್ಕೆ

ಒಂದು ಶಬ್ದದ ರೂಪವು ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ಒಬ್ಬ ಎಂ
ವದು. ಉದಾ—ಒಬ್ಬನು, ಒಬ್ಬನನ್ನು, ಒಬ್ಬಳು, ಒಬ್ಬಳನ್ನು ಮು

ಬಹುವಚನ

(೧) ಏಕವಚನದಲ್ಲಿ ಅವನು, ಅವಳು, ಅದು ಶಬ್ದಗಳ ರೂ
ಸೇರುವ ಗುಣಿವಾಚಕ, ಪರಿಮೇಯವಾಚಕ, ಅನೆಯ ಪ್ರತ್ಯ
ತದ್ಧಿತನಾಮ ಇವುಗಳಿಗೆ ಬಹುವಚನದಲ್ಲಿ ಪು. ಸ್ತ್ರೀಲಿಂಗಗಳಲ್ಲಿ ಅ
ನಪುಂಸಕಲಿಂಗದಲ್ಲಿ ಅವು ಶಬ್ದಗಳ ವಿಭಕ್ತಿರೂಪಗಳು ಸೇರುವವು.

ಉದಾ—ಪು. ಸ್ತ್ರೀ. ಲಿಂ. ಕರಿಯುವರು, ಬಿಳಿಯುವರನ್ನು, ದ
ರಿಂದ, ಚಿಕ್ಕವರಿಗೆ, ಒಂದನೆಯುವರ ಎರಡನೆಯುವರಲ್ಲಿ ಮುಂ.

ನ. ಲಿಂ—ಒಂದನೆಯುವು; ಒಂದನೆಯುವನ್ನು, ಎರಡನೆಯುವುಗ

(೨) ನಪುಂಸಕಲಿಂಗದಲ್ಲಿ ದು ಕಡೆಯಲ್ಲಿರುವ ಗುಣಿವಾಚಕ
ಮೇಯವಾಚಕಗಳ ಕಡೆಯ ದಕಾರಕ್ಕೆ ವಕಾರಾದೇಶವಾಗುವದು.
'ಅವು' ಎಂಬ ಸರ್ವನಾಮದಂತೆ ರೂಪಗಳಾಗುವವು. ಉದಾ—

ಗುಣವಾಚಕ— ಕರಿಯವು ; ಕರಿಯವುಗಳು ; ಕರಿಯುವನ್ನು ;
ಯವುಗಳನ್ನು, ಬಿಳಿಯವುಗಳಿಂದ; ಎಳೆಯವುಗಳಿಗೆ ಮುಂ.

ಪರಿಮೇಯವಾಚಕ— ದೊಡ್ಡವು, ದೊಡ್ಡವುಗಳು, ದೊಡ್ಡವನ್ನು
ಡ್ಡವುಗಳನ್ನು; ಚಿಕ್ಕವುಗಳಿಗೆ; ಕಿರಿಯವು ಮುಂ,

(೩) ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ಕರಿಯ, ಬಿಳಿಯ, ಎಳೆಯ, ಎಂಬ
ಕೃತಿಗಳ ರೂಪಗಳು ಅಕಾರಾಂತ ಪುಲ್ಲಿಂಗನಾಮಗಳಂತೆಯೂ ಆಗು
ವು. ಉದಾ-ಕರಿಯರು, ಬಿಳಿಯರು, ಎಳೆಯರನ್ನು ; ಹೊಸಬ ; ಹಳಬ
ಗಳ ವಿಭಕ್ತಿರೂಪಗಳು ಅಕಾರಾಂತ ನಾಮಗಳಂತೆ ಆಗುವವು.
ದಾ—ಹೊಸಬರು, ಹಳಬರನ್ನು.

(೪) ಎರಡು, ಮೂರು, ನಾಲ್ಕು, ಐದು ಈ ಸಂಖ್ಯೇಯ ವಾಚಕಗಳಿಗೆ
ಲ್ಲಿಂಗ ಸ್ತ್ರೀಲಿಂಗಗಳಲ್ಲಿ, ಇಬ್ಬ, ಮೂವ, ನಾಲ್ವ, ಐವ ರೂಪಗಳಾಗುವವು.
ವುಗಳ ಮುಂದೆ ಅರ್ ಆಗಮವಾಗುವದು. ಉದಾ— ಇಬ್ಬರು, ಮೂವ
ನ್ನು ನಾಲ್ವರಿಂದ, ಐವರಿಗೆ. ಕೆಲವರು ಎಂಬ ಅರ್ಥದಲ್ಲಿ ಒಬ್ಬ ಶಬ್ದದ
ಹುವಚನದ ರೂಪವೂ ಉಂಟು. ಉದಾ—ಒಬ್ಬರು ನಗುವರು;
ಬ್ಬರು ಅಳುವರು.

(೫) ಹಲವು, ಕೆಲವು, ಎಲ್ಲವು ಎಂಬ ಪರಿಮೇಯವಾಚಕಗಳ ಮುಂದೆ
ಲ್ಲಿಂಗ ಸ್ತ್ರೀಲಿಂಗಗಳಲ್ಲಿ ಅರ್ ಆಗಮವು ಬರುವದು. ಉದಾ—ಹಲವರು,
ಲವರು, ಎಲ್ಲವರು; ಹಲವರನ್ನು ಮುಂ. ಎಲ್ಲವು ಶಬ್ದದ ರೂಪವು ಎಲ್ಲರು
ದೂ ಆಗುವದು. ಎಲ್ಲರು, ಎಲ್ಲರನ್ನು, ಎಲ್ಲರಿಂದ ಮುಂ.

(೬) ಅಷ್ಟು ಇಷ್ಟು ಎಷ್ಟು ಹಲವು ಕೆಲವು ಎಂಬೀ ಪರಿಮೇಯ
ಚಕಗಳ ಮತ್ತು ಸಂಖ್ಯೇಯ ವಾಚಕಗಳ ಪುಲ್ಲಿಂಗ ಬಹುವಚನದ
ಪಗಳನ್ನು ಮಾಡುವಾಗ ಜನ ಶಬ್ದದ ಬಹುವಚನದ ರೂಪಗಳನ್ನು ಅವು
ಮುಂದೆ ಸೇರಿಸುವದೂ ಉಂಟು. ಉದಾ—ಹಲವು ಜನರು; ಇಷ್ಟು
ನರನ್ನು; ಎಷ್ಟು ಜನರಿಂದ ನಾಲ್ಕು ಜನರು ಹತ್ತು ಜನರಿಂದ ಮುಂ

ವಿಶಿಷ್ಟರೂಪಗಳು

ಕೆಲವು ನಾಮಗಳ ಎಲ್ಲ ವಿಭಕ್ತಿಗಳ ರೂಪಗಳು ಬಳಕೆಯಲ್ಲಿಲ್ಲ.
ವು ವಿಭಕ್ತಿಗಳ ರೂಪಗಳಷ್ಟೇ ಬಳಕೆಯಲ್ಲಿವೆ.

ಮೂಡ (ಪೂರ್ವದಿಕ್ಕು)- ಪ್ರ. ದ್ವಿ. ಮೂಡಲು; ತೃ. ಪಂ. ಮೂ
ಲಿಂದ, ಚ. ಮೂಡಲಿಗೆ, ಷ. ಮೂಡಲ (ಮೂಡಣ) ಸ. ಮೂಡಲು. ಇ
ಮೇರೆಗೆ ಪಡುವ (ಪಶ್ಚಿಮ); ತೆಂಕ (ದಕ್ಷಿಣ); ಬಡಗ (ಉತ್ತರ) ಈ ಶ
ಗಳ ರೂಪಗಳೂ ಆಗುವವು. ಬಡಗಲು, ಬಡಗಲಿಂದ, ಬಡಗಲಿಗೆ. ಬಡ
(ಬಡಗಣ), ಬಡಗಲು.

ಅತ್ತ—ತೃ. ಪಂ. ಅತ್ತಲಿಂದ; ಷ. ಅತ್ತಲಿನ; ಸ. ಅತ್ತಲು; ಅ
ಇದೇ ಮೇರೆಗೆ ಇತ್ತ ಎತ್ತ.

ಅಂದು—ಪ್ರ ಅಂದು; ತೃ. ಅಂದಿನಿಂದ; ಚ. ಅಂದಿಗೆ; ಪ. ಅಂದಿನಿ
ಷ. ಅಂದಿನ; ಸ. ಅಂದು, ಹೀಗೆಯೇ ಇಂದು, ಎಂದು.

ಹಿಂದು—ಪ್ರ. ಹಿಂದು, ತೃ. ಹಿಂದಿನಿಂದ ಚ. ಹಿಂದಕ್ಕೆ, ಷ. ಹಿಂ
(ಹಿಂದಣ), ಸ. ಹಿಂದೆ ಇದೇ ಮೇರೆಗೆ ಮುಂದು, ಮೇಲು, ನಡು.

ಕೆಳಗು-ತೃ. ಕೆಳಗಿನಿಂದ, ಚ. ಕೆಳಕ್ಕೆ ಪಂ. ಕೆಳಗಿನಿಂದ, ಷ. ಕೆಳ
(ಕೆಳಗಣ), ಸ. ಕೆಳಗೆ. ಇದೇ ಮೇರೆಗೆ ಹೊರಗು, ಒಳಗು ಮೇಗು.

*ನಿನ್ನೆ—ಪ್ರ. ನಿನ್ನೆ. ತೃ. ನಿನ್ನೆಯಿಂದ, (ನಿನ್ನಿನಿಂದ), ಚ. ನಿನ್ನೆ
ಷ. ನಿನ್ನೆಯ (ನಿನ್ನಿನ) ಈ ಮೇರೆಗೆ ನಾಳೆ, ಮೊನ್ನೆ, ನಾಡಿದು.

ಅಲ್ಲಿ—ತೃ. ಪಂ. ಅಲ್ಲಿಂದ, ಚ. ಅಲ್ಲಿಗೆ, ಷ. ಅಲ್ಲಿಯ (ಅಲ್ಲಿಯ
ಅಲ್ಲಿನ; ಇದೇ ಮೇರೆಗೆ ಇಲ್ಲಿ, ಎಲ್ಲಿ†

ಆಗ (ಆಗಳು)—ಪ್ರ. ಆಗ, ತೃ. ಆಗಳಿನಿಂದ, ಆಗಳಿಂದ, ಆಗಿನಿ
ಷ. ಆಗಳಿನ (ಆಗಿನ). ಹೀಗೆಯೇ ಈಗ (ಈಗಳು). ಯಾವಾಗ (ಯಾ
ಗಳು).

ಹಳಗನ್ನಡದ ಪೆಂಡ (ಪೆಂಡ=ಹೆಂಗುಸು) ಎಂಬ ಶಬ್ದಕ್ಕೆ ಹೊ
ಗನ್ನಡದಲ್ಲಿ ಹೆಂಡ ಎಂಬ ರೂಪವಾಗುವದು. ಈ ಶಬ್ದದ ಬಹುವಚ
ರೂಪಗಳಷ್ಟೇ ಬಳಕೆಯಲ್ಲಿವೆ. ಉದಾ- ಹೆಂಡಿರು, ಹೆಂಡಂದಿರು, ಹೆಂಡಿರ
ಹೆಂಡಂದಿರನ್ನು; ಹೆಂಡಿರಿಂದ, ಹೆಂಡಂದಿರಿಂದ ಮುಂ.

---

*ನಿನ್ನೆ ನಾಳೆ, ಮೊನ್ನೆ, ನಾಡಿದು ಈ ಶಬ್ದಗಳು ಅವ್ಯಯಗಳೆಂದು ಪ್ರಾಚೀನ
ದಲ್ಲಿ ಹೇಳಿದ್ದರೂ ನಿನ್ನೆಯಿಂದ ನಿನ್ನೆಗೆ ಮುಂ ವಿಭಕ್ತಿರೂಪಗಳು ಬಳಕೆಯಲ್ಲಿ
ರುವದರಿಂದ ಅವನ್ನು ನಾಮಪದಗಳೆಂದು ಇಲ್ಲಿ ಹೇಳಿದೆ. ವಿಭಕ್ತಿಪ್ರತಿರೂಪಕಾವ್ಯ
ಗಳೆಂದು ಕೆಲವರು ಹೇಳುವರು.

†ಅಲ್ಲಿ, ಇಲ್ಲಿ, ಎಲ್ಲಿ, ಇವು ಸಪ್ತಮ್ಯರ್ಥದ ಅವ್ಯಯಗಳಾಗಿಯೂ ಇವೆ.

೪. ಕ್ರಿಯಾಪದಗಳು

ಧಾತು—ಹೋಗುವಿಕೆ, ಬರುವಿಕೆ, ಹೇಳುವಿಕೆ, ಕೇಳುವಿಕೆ, ಮೊದಲಾದವು ಕ್ರಿಯೆಗಳು. ಕ್ರಿಯೆಯನ್ನು ಹೇಳುವ ಹೋಗು, ಬರು, ಹೇಳು, ಕೇಳು ಮೊದಲಾದವು ಧಾತುಗಳೆನಿಸುವವು. ಇವು **ಸಹಜಧಾತುಗಳು***.

ಪ್ರತ್ಯಯಾಂತ ಧಾತುಗಳು— ನಾಮಗಳ ಮುಂದೆ ಅದನ್ನು ಮಾಡು ಇಲ್ಲವೆ ಹೊಂದು ಎಂಬ ಅರ್ಥದಲ್ಲಿ ಇಸು ಪ್ರತ್ಯಯವು ಸೇರಿದರೆ ಧಾತುಗಳಾಗುವವು. ಉದಾ—ಅದನ್ನು ಮಾಡು ಎಂಬ ಅರ್ಥಕ್ಕೆ. ಅಬ್ಬರವನ್ನು ಮಾಡು— ಅಬ್ಬರ+ಇಸು=ಅಬ್ಬರಿಸು ; ಕನ್ನಡಿಸು ; ಸಿಂಗರಿಸು. ಹೊಂದು ಎಂಬ ಅರ್ಥಕ್ಕೆ– ಕಳವಳವನ್ನು ಹೊಂದು–ಕಳವಳ+ಇಸು= ಕಳವಳಿಸು; ತಲ್ಲಣಿಸು; ಉಮ್ಮಳಿಸು; ಸಿಂಗರಿಸು.

ಸಂಸ್ಕೃತದ ಅ, ಅನ, ಪ್ರತ್ಯಯಾಂತಭಾವನಾಮಗಳ ಮುಂದೆ ಅದನ್ನು ಮಾಡು ಇಲ್ಲವೆ ಹೊಂದು ಎಂಬ ಅರ್ಥದಲ್ಲಿ ಇಸು ಸೇರಿದರೆ ಧಾತುಗಳಾಗುವವು. ಉದಾ—

ಅ ಪ್ರತ್ಯಯಾಂತಕ್ಕೆ– ಯತ್ನ+ಇಸು=ಯತ್ನಿಸು ; ಭಾವ+ಇಸು= ಭಾವಿಸು; ನಿರ್ಣಯಿಸು; ಸುಖಿಸು; ಭೋಗಿಸು ಮುಂ.

ಅನ (ಅಣ ಪ್ರತ್ಯಯಾಂತಕ್ಕೆ — ತ್ಯಜನ+ಇಸು=ತ್ಯಜಿಸು; ಗಮನ+ ಇಸು=ಗಮಿಸು; ಗಮನಿಸು; ಭಜಿಸು; ರಕ್ಷಣ+ಇಸು=ರಕ್ಷಿಸು; ಭಕ್ಷಿಸು ; ಸ್ಮರಿಸು ಮುಂತಾದವು.

ಪ್ರೇರಣಾರ್ಥಕ ಧಾತುಗಳು—ಮೇಲೆ ಹೇಳಿದ ಧಾತುಗಳಮುಂದೆ ಇಸು ಪ್ರತ್ಯಯವು ಸೇರಲು ಪ್ರೇರಣಾರ್ಥಕ ಧಾತುಗಳಾಗುವವು.

ಪ್ರೇರಣೆಯೆಂದರೆ, ಇನ್ನೊಬ್ಬರಿಂದ ಕ್ರಿಯೆಯನ್ನು ಮಾಡಿಸುವದು.

---

*ಕೆಲವು ಉಪಯುಕ್ತ ಧಾತುಗಳು:—ಕಾ, ಬೇ, ಮೀ, ನೋ, ಉಲುಕು, ಬಳುಕು, ಮಡುಗು, ಹುದುಗು, ಅಲುಗು, ಮಿನುಗು, ಹೊಂಚು, ಮೋಚು, ಬಿಸುಡು, ಬಡಿ, ನಡು, ತಣಿ, ನಂದು, ಮಿದಿ, ಈನುತರುಬು, ತಬ್ಬು, ಹಮ್ಮು, ಸರಿ, ಜರೆ, ಬೀರು, ಜೊರೆ, ಹೊಲಿ, ಮಲೆ, ನೀವು, ಗುಡಿಸು, ಬಳಸು, ಮುಕ್ಕುಳಿಸು, ಕುಪ್ಪಳಿಸು, ಕೊಸೆ, ಗೀಚು, ಕಳಿ, ತಳಿ, ಬಗುಳು, ಕೆರಳು.

†ಸಕರ್ಮಕಾಕರ್ಮಕ ವಿಚಾರವನ್ನು ೬೭ ನೆಯ ಪುಟದಲ್ಲಿ ನೋಡು.

ಉದಾ— ಕೂಸು ಮಲಗುತ್ತದೆ, ಇಲ್ಲಿ ಕೂಸು ಮಲಗುವ ಕ್ರಿಯೆಯನ್ನು ಮಾಡುತ್ತದೆ. ತಾಯಿ ಕೂಸನ್ನು ಮಲಗಿಸುತ್ತಾಳೆ; ಇಲ್ಲಿ ಮಲಗುವ ಕ್ರಿಯೆಯನ್ನು ಕೂಸು ಮಾಡುತ್ತದೆ. ತಾಯಿಯು ಮಲಗುವದನ್ನು ಪ್ರೇರಿಸುವವಳು. ಆದದರಿಂದ ಮಲಗಿಸು (ಮಲಗು+ಇಸು) ಪ್ರೇರಣಾರ್ಥಕ ಧಾತುವು. ಹೀಗೆಯೇ ಕಲಿಸು ಮುಂತಾದವು.

ಕೆಲವು ಧಾತುಗಳ ಮುಂದೆ ಪ್ರೇರಣಾರ್ಥದಲ್ಲಿ ಸು ಚು ಹು ಪ್ರತ್ಯಯಗಳು ಸೇರುವವು. ಉದಾ-ಕರೆ+ಸು=ಕರೆಸು; ಅಮರು+ಚು=ಅಮರ್ಚು—ಅವಚು; ತೋರು+ಚು=ತೋರ್ಚು-ತೋಚು; ಕೆಡೆ+ಹು=ಕೆಡೆಹು-ಕೆಡಹು ನೆರೆ+ಹು=ನೆರೆಹು; ತಿಳಿಹು, ತಿಳುಹು, ಇಳುಹು, ಮುಂ. (ಇವು ಕೃದಂತ ಧಾತುಗಳು.)

ಕೆಲವು ಸಂಯುಕ್ತ-[ಎರಡು ಅವಯವಗಳುಳ್ಳ] ಧಾತುಗಳುಂಟು. ಉದಾ-ನಡೆತರು, ಅಲ್ಲಾಡು, ಓಡಾಡು, ತಿರುಗಾಡು, ಕುಳ್ಳಿರು, ಸೇರ್ಪಡು, ಬೇರ್ಪಡು, ನೇರ್ಪಡು, ಮಾರ್ಪಡು, ಒಡಂಬಡು ಮುಂ.

ಕೆಲವು ನಾಮಗಳ ಮುಂದೆ ಆಗು ಧಾತು ಸೇರಲು ಹೊಸ ಧಾತುಗಳಾಗುವವು. ಉದಾ—ಸಿಟ್ಟು+ಆಗು=ಸಿಟ್ಟಾಗು; ಬೆರಗು+ಆಗು+ಬೆರಗಾಗು; ನಾಶವಾಗು, ಮಾಯವಾಗು; ಬಯಲಾಗು. ಪ್ರಯೋಗ-ಭೀಮನು ಸಿಟ್ಟಾದನು; ಬಕನು ಬೆರಗಾದನು; ವೈರವು ನಾಶವಾಯಿತು; ಕಳ್ಳರು ಮಾಯವಾದರು; ದುಃಖವು ಬಯಲಾಯಿತು. ಆಗು ಸೇರಿದ ಬೇರೆ ಧಾತುಗಳು—ಉಂಟಾಗು, ಬೇಕಾಗು.

ಕ್ರಿಯಾಪದ-ಧಾತುಗಳಿಗೆ ಕ್ರಿಯಾವಿಭಕ್ತಿಪ್ರತ್ಯಯಗಳು ಸೇರಿದರೆ ಕ್ರಿಯಾಪದಗಳಾಗುವವು. ಕ್ರಿಯಾವಿಭಕ್ತಿಪ್ರತ್ಯಯಗಳಿಗೆ ಆಖ್ಯಾತಪ್ರತ್ಯಯಗಳೆಂಬ ಹೆಸರೂ ಉಂಟು. ಉದಾ-ಮಾಡು [ಧಾತು]+ಅನು [ಕ್ರಿಯಾವಿಭಕ್ತಿಪ್ರತ್ಯಯ]=ಮಾಡನು ಕ್ರಿಯಾಪದವು.

ಕ್ರಿಯಾಪದಗಳ ಭೇದಗಳು— ಕ್ರಿಯಾಪದಗಳಲ್ಲಿ **ಕಾಲಾರ್ಥಕ ಸಂಭಾವನಾರ್ಥಕ** [ಸಂಶಯಾರ್ಥಕ], **ವಿಧ್ಯರ್ಥಕ, ನಿಷೇಧಾರ್ಥಕ** ಎಂಬ ನಾಲ್ಕು ಭೇದಗಳುಂಟು.

ಕಾಲಾರ್ಥಕ ಕ್ರಿಯಾಪದಗಳು— ಕಾಲವನ್ನು ಸೂಚಿಸುವ ಕ್ರಿಯಾಪದಗಳು ಕಾಲಾರ್ಥಕ ಕ್ರಿಯಾಪದಗಳು.

ಕಾಲಭೇದಗಳು—ವರ್ತಮಾನಕಾಲ, ಭೂತಕಾಲ, ಭವಿಷ್ಯತ್ಕಾಲ, ಎಂದು ಮೂರು ಕಾಲಗಳು. ಕ್ರಿಯೆ ನಡೆಯುತ್ತಿರುವ ಕಾಲವು ವರ್ತಮಾನ ಕಾಲವು; ಹೋದಕಾಲವು ಭೂತಕಾಲವು; ಬರುವ ಕಾಲವು ಭವಿಷ್ಯತ್ಕಾಲವು. (ಭೂತ ಭವಿಷ್ಯತ್ಕಾಲಗಳು ಅಪರಿಮಿತವಾದಂಥವು; ವರ್ತಮಾನ ಕಾಲವು ಬಹಳ ಅಲ್ಪವಾದದ್ದು.)

ಪುರುಷಗಳು— ನಾನು, ನಾವು ಇವಕ್ಕೆ ಸಂಬಂಧಿಸಿ ಬರುವ ಆಖ್ಯಾತ ಪ್ರತ್ಯಯಗಳು **ಉತ್ತಮಪುರುಷದವೆಂದೂ,** ನೀನು, ನೀವು ಇವಕ್ಕೆ ಸಂಬಂಧಿಸಿ ಬರುವ ಆಖ್ಯಾತಪ್ರತ್ಯಯಗಳು **ಮಧ್ಯಮಪುರುಷದವೆಂದೂ** ನಾನು, ನಾವು, ನೀನು, ನೀವು, ಇವುಗಳನ್ನು ಬಿಟ್ಟು ಉಳಿದ ಅವನು, ಅವಳು, ಅವರು, ಅದು, ಅವು, ಕಲ್ಲನು, ಸೀತೆ ಮುಂತಾದ ಎಲ್ಲ ಪದಗಳಿಗೆ ಸಂಬಂಧಿಸಿ ಬರುವ ಆಖ್ಯಾತಪ್ರತ್ಯಯಗಳು **ಪ್ರಥಮಪುರುಷದವೆಂದೂ** ಹೇಳುವರು.

ಪ್ರಥಮಪುರುಷ—ಅವನು ನಗುತ್ತಾನೆ; ಅವರು ನಗುತ್ತಾರೆ.

ಮಧ್ಯಮಪುರುಷ—ನೀನು ನಗುತ್ತೀಯೆ; ನೀವು ನಗುತ್ತೀರಿ.

ಉತ್ತಮಪುರುಷ—ನಾನು ನಗುತ್ತೇನೆ; ನಾವು ನಗುತ್ತೇವೆ.

ಕ್ರಿಯಾಪದಗಳ ಲಿಂಗಗಳು— ಪ್ರಥಮಪುರುಷದ ಆಖ್ಯಾತಪ್ರತ್ಯಯಗಳಲ್ಲಿ ಲಿಂಗಭೇದವುಂಟು. ಮಧ್ಯಮ ಉತ್ತಮ ಪುರುಷಗಳಲ್ಲಿ ಲಿಂಗಭೇದವಿಲ್ಲ.

ಉದಾ- ಪ್ರಥಮಪುರುಷ ಪುಲ್ಲಿಂಗ—ಓಡುತ್ತಾನೆ; ಸ್ತ್ರೀಲಿಂಗ—ಓಡುತ್ತಾಳೆ; ನಪುಂಸಕಲಿಂಗ—ಓಡುತ್ತದೆ.

ಮಧ್ಯಮಪುರುಷ—ಮೂರೂ ಲಿಂಗಗಳಲ್ಲಿ—ಓಡುತ್ತೀ; ಓಡುತ್ತೀಯೆ.

ಉತ್ತಮಪುರುಷ— ,, ,, -ಓಡುತ್ತೇನೆ.

ಕ್ರಿಯಾಪದಗಳ ವಚನಗಳು- ಏಕವಚನದ ಆಖ್ಯಾತಪ್ರತ್ಯಯಗಳೂ ಬಹುವಚನದ ಆಖ್ಯಾತಪ್ರತ್ಯಯಗಳೂ ಬೇರೆಬೇರೆ ಇರುವದರಿಂದ ಏಕವಚನದ ರೂಪಗಳೂ ಬಹುವಚನದ ರೂಪಗಳೂ ಬೇರೆಬೇರೆ ಆಗುವವು. ಉದಾ—

ಏಕವಚನ—ಕೇಳುತ್ತಾನೆ.	ಬಹುವಚನ—ಕೇಳುತ್ತಾರೆ.
,, ಕೇಳುತ್ತೀ; ಕೇಳುತ್ತೀಯೆ.	,, ಕೇಳುತ್ತೀರಿ.
,, ಕೇಳುತ್ತೇನೆ.	,, ಕೇಳುತ್ತೇವೆ.

೧—ನು.

೧. ಕಾಲಾರ್ಥಕ ಕ್ರಿಯಾಪದಗಳು

ವರ್ತಮಾನಕಾಲದ ರೂಪಗಳು

ವರ್ತಮಾನಕಾಲದ ಆಖ್ಯಾತಪ್ರತ್ಯಯಗಳು

ಪುರುಷ.		ಏಕವಚನ	ಬಹುವಚನ
ಪ್ರಥಮ ಪುರುಷ	ಪು. ಲಿಂ.	ಆನೆ	ಆರೆ
	ಸ್ತ್ರೀ. ಲಿಂ.	ಆಳೆ	ಆರೆ
	ನ. ಲಿಂ.	ಅದೆ, ಇದೆ,	ಅವೆ, ಇವೆ
ಮಧ್ಯಮಪುರುಷ—	ಪು. ಸ್ತ್ರೀ. ನ.	ಈ, ಈಯೆ	ಈರಿ
ಉತ್ತಮಪುರುಷ—	,,	ಏನೆ	ಏವೆ

ವರ್ತಮಾನಕಾಲದಲ್ಲಿ ಧಾತುವಿಗೂ ಆಖ್ಯಾತಪ್ರತ್ಯಯಕ್ಕೂ ನಡುವೆ ಉತ್ತ್ ಎಂಬುದು ಆಗಮವಾಗಿ ಬರುತ್ತದೆ ಉದಾ—ಹೊಳೆ+ಉತ್ತ್+ಆನೆ= ಹೊಳೆಯುತ್ತಾನೆ; ಇಲ್ಲಿ ಉತ್ತ್ ಎಂಬುದು ಆಗಮವು.

ಕಲಿ ಧಾತುವಿನ ವರ್ತಮಾನಕಾಲದ ರೂಪಗಳು

		ಏಕವಚನ	ಬಹುವಚನ
ಪ್ರಥಮಪುರುಷ	ಪು. ಲಿಂ.	ಕಲಿಯುತ್ತಾನೆ	ಕಲಿಯುತ್ತಾರೆ
	ಸ್ತ್ರೀ. ಲಿಂ.	ಕಲಿಯುತ್ತಾಳೆ	ಕಲಿಯುತ್ತಾರೆ
	ನ. ಲಿಂ.	ಕಲಿಯುತ್ತದೆ	ಕಲಿಯುತ್ತವೆ
		ಕಲಿಯುತ್ತಿದೆ	ಕಲಿಯುತ್ತಿವೆ
ಮಧ್ಯಮಪುರುಷ		ಕಲಿಯುತ್ತೀ	ಕಲಿಯುತ್ತೀರಿ
		ಕಲಿಯುತ್ತೀಯೆ	,,
ಉತ್ತಮಪುರುಷ		ಕಲಿಯುತ್ತೇನೆ	ಕಲಿಯುತ್ತೇವೆ

(ಸೂಚನೆ—ಸಂಧಿನಿಯಮಗಳ ಮೇರೆಗೆ ಲೋಪಸಂಧಿ, ಯಕಾರಾಗಮ ಸಂಧಿಗಳಾಗುವಲ್ಲಿ ಮಾಡಬೇಕು)

ಇರು ಧಾತುವಿನ ವರ್ತಮಾನಕಾಲದ ರೂಪಗಳು ಇರುತ್ತಾನೆ, ಇರುತ್ತಾರೆ ಮೊದಲಾದವಲ್ಲದೆ ಬೇರೆ ವಿಕೃತರೂಪಗಳೂ ಉಂಟು. ಅವು—

ಪ್ರ. ಪು.	ಇದ್ದಾನೆ, ಇದ್ದಾಳೆ, ಇದೆ	ಇದ್ದಾರೆ; ಇವೆ.
ಮ. ಪು.	ಇದ್ದೀ, ಇದ್ದೀಯೆ.	ಇದ್ದೀರಿ.
ಉ. ಪು.	ಇದ್ದೇನೆ.	ಇದ್ದೇವೆ.

ಭೂತಕಾಲದ ರೂಪಗಳು

ಭೂತಕಾಲದ ಆಖ್ಯಾತಪ್ರತ್ಯಯಗಳು

		ಏಕವಚನ	ಬಹುವಚನ
ಪ್ರಥಮಪುರುಷ	ಪು. ಲಿಂ.	ಅನು	ಅರು
	ಸ್ತ್ರೀ. ಲಿಂ.	ಅಳು	ಅರು
	ನ. ಲಿಂ.	ಇತು	ಅವು, ಉವು
ಮಧ್ಯಮಪುರುಷ		ಎ	ಇರಿ
ಉತ್ತಮಪುರುಷ		ಎನು	ಎವು

ಭೂತಕಾಲದಲ್ಲಿ ಧಾತುವಿಗೂ ಆಖ್ಯಾತಪ್ರತ್ಯಯಕ್ಕೂ ನಡುವೆ ದ ಆಗಮವು ಬರುವದು. ಉದಾ—ನುಡಿ+ದ+ಅನು=ನುಡಿದನು.

ಭೂತಕಾಲದ ದ ಆಗಮವು ಮುಂದೆ ಬರಲು [ವಿಕಾರಹೊಂದುವ ಧಾತುಗಳನ್ನು ಬಿಟ್ಟು ಉಳಿದ] ಉಕಾರಾಂತ ಧಾತುಗಳ ಕೊನೆಯ ಉಕಾರಕ್ಕೆ ಇಕಾರಾದೇಶವಾಗುವದು. ಉದಾ—ಕೇಳು+ದ+ಅನು=ಕೇಳಿ+ದ+ಅನು=ಕೇಳಿದನು.

ದ ಆಗಮವು ಬಂದಾಗ ಹಲವು ಧಾತುಗಳು ಇನ್ನೂ ಕೆಲವು ವಿಕಾರಗಳನ್ನು ಹೊಂದುವವು. ಆಗ ದ ಆಗಮವೂ ವಿಕಾರಹೊಂದುವದು. ದ ಸೇರಿದಾಗ ಹಾಗೆ ವಿಕಾರಹೊಂದಿದ ಹಲವು ರೂಪಗಳು ಇಲ್ಲಿ ತೋರಿಸಿವೆ. ಈ ವಿಕಾರಗಳು ಮುಂದೆ ಕೃದಂತ ಪ್ರಕರಣದಲ್ಲಿ ಹೇಳಿದ ದು ಮೊದಲಾದ ದಕಾರಾದಿ [ದಕಾರವು ಮೊದಲಲ್ಲಿ ಉಳ್ಳ] ಪ್ರತ್ಯಯಗಳು ಬಂದಾಗಲೂ ಆಗುವವು.

ಧಾತು.	ದ ಸೇರಲು ಆಗುವ ರೂಪವೂ	ಅದರಂತೆ ಆಗುವ ಕೆಲವು ಧಾತುಗಳೂ.
ಮಾಡು	ಮಾಡಿದ,	ನೋಡು, ಬೇಡು, ಕಾಡು, ಓಡು.
ಮಿಗು	ಮಿಕ್ಕ,	ನಗು, ಹೊಗು, ತಗು.
ಆಗು	ಆದ	ಹೋಗು.
ಕೊಡು	ಕೊಟ್ಟ,	ಬಿಡು, ಪಡು, ಇಡು, ನೆಡು, ಕೆಡು, ಒಡಂಬಡು, ಬೇರ್ಪಡು, ಮೊರೆಯಿಡು.
ತೆರು	ತೆತ್ತ,	ಹೊರು, ಹೆರು.
ಒದೆ	ಒದೆದ	ಥೊದೆ, ಪಡೆ, ನಡೆ, ತೊರೆ, ಎರೆ, ಸುಳಿ, ಮಿದಿ.
ಮರೆ	ಮರೆತ,	ಕಲೆ, ನಲೆ, ಹೆರೆ, ಒರೆ, ಕೊಳೆ.

ಹೊರಡು	ಹೊರಟ,	ಬಿಸುಡು.
ಬೀಳು	ಬಿದ್ದ,	ಏಳು.
ಕಾಣು	ಕಂಡ,	ಉಣ್ಣು.
ಕೊಳ್ಳು	ಕೊಂಡ	
ಕೀಳು,	ಕಿತ್ತ,	ಉಳು.
ಹೋಲು	ಹೋತ,	ಸೋಲು, ಜೋಲು, ನೂಲು, ಸೀನು, ಆನು,
ಈನು	ಈದ	
ಈ	ಇತ್ತ	
ಸಾ	ಸತ್ತ	
ಮಿಾ	ಮಿಂದ,	ಬೇ, ನೋ.
ಕೀ	ಕೀತ,	ಬಾ.
ಕೊಲ್ಲು	ಕೊಂದ,	ಸಲ್ಲು, ತಿನ್ನು, ಎನ್ನು, ತರು, ಬರು.
ಮೆಲ್ಲು	ಮೆದ್ದ,	ಗೆಲ್ಲು.
ನಿಲ್ಲು	ನಿಂತ.	
ಕಲಿ	ಕಲಿತ,	ಬಲಿ, ಹುಳಿ, ಕಳಿ, ಕುರಿ, ಬಿರಿ.
ಕುಳು	ಕುಳಿತ	
ಇರು	ಇದ್ದ,	ಕಳು.
ತಳಿರು	ತಳಿತ,	ಚಿಗುರು, ಬೆವರು.
ಎಚ್ಚರು	ಎಚ್ಚತ್ತ,	ಆಸರು, ಬೇಸರು.
ಬಯ್ಯು	ಬಯ್ದ,	ಸುಯ್ಯು, ನೆಯ್ಯು, ಕೊಯ್ಯು, ಹೊಯ್ಯು, ಅಯ

ಕೇಳು, ಕಾಣು ಧಾತುಗಳ ಭೂತಕಾಲದ ರೂಪಗಳು.

	ಏ. ವ.	ಬ. ವ.	ಏ. ವ.	ಬ. ವ.
ಪ್ರ. ಪು.	ಕೇಳಿದನು	ಕೇಳಿದರು	ಕಂಡನು	ಕಂಡರು
,,	ಕೇಳಿದಳು	ಕೇಳಿದರು	ಕಂಡಳು	ಕಂಡರು
,,	ಕೇಳಿತು	ಕೇಳಿದ(ದು)ವು	ಕಂಡಿತು	ಕಂಡ(ಡು)ವು
ಮ. ಪು.	ಕೇಳಿದೆ	ಕೇಳಿದಿರಿ	ಕಂಡೆ	ಕಂಡಿರಿ
ಉ. ಪು.	ಕೇಳಿದೆನು	ಕೇಳಿದೆವು	ಕಂಡೆನು	ಕಂಡೆವು

ಭೂತನಪುಂಸಕ ಏಕವಚನದ ಇತು ಪ್ರತ್ಯಯವು ಸೇರುವಾಗ ದ್ವಿಲಘು *[ಎರಡು ಲಘುಗಳುಳ್ಳ] ಉಕಾರಾಂತ ಧಾತುಗಳ ಹೊರತು ಉಳಿದ ಎಲ್ಲ ಧಾತುಗಳ ಮುಂದೆಯೂ ದ ಆಗಮವು ಬರುವದಿಲ್ಲ.

ಇಕಾರಾಂತ ಧಾತುವಿಗೆ—ಕಲಿ+ಇತು=ಕಲಿಯಿತು. (ದ ಆಗಮವು ಇಲ್ಲ.) ಕುಣಿಯಿತು; ಬಸಿಯಿತು ಮುಂ.

ಎಕಾರಾಂತ ಧಾತುಗಳಿಗೆ–ಹೊಸೆ+ಇತು=ಹೊಸೆಯಿತು; ಸವೆಯಿತು; ಕೊಳೆಯಿತು ಮುಂ. (ದ ಆಗಮವಿಲ್ಲ.)

ದ್ವಿಲಘುವಲ್ಲದ ಉಕಾರಾಂತ ಧಾತುಗಳಿಗೆ–ಕೆರಳು+ಇತು=ಕೆರಳಿತು; ಕದಡಿತು; ಕಲಕಿತು; ತುಂಬಿತು; ಮುತ್ತಿತು; ಕುಕ್ಕಿತು; ಹೊರಟಿತು, ಓಲಯಿಸಿತು; ಸಂಚಲಿಸಿತು; ಮರೆಯಿಸಿತು ಮುಂ. (ದ ಆಗಮವಿಲ್ಲ.)

ಒಂದೇಸ್ವರವುಳ್ಳ ಧಾತುಗಳಿಗೆ-ಕಾ+ಇತು=ಕಾಯಿತು; ಮೂಯಿತು; ತೋಯಿತು ಮುಂ. (ದ ಆಗಮವಿಲ್ಲ)

ಆಗು ಹೋಗು ಧಾತುಗಳಿಗೆ ಇತು ಪ್ರತ್ಯಯವು ಸೇರುವಾಗ ಗು ಲೋಪವಾಗುವದು. ಉದಾ— ಆಗು+ ಇತು=ಆ + ಇತು =ಆಯಿತು; ಹೋಗು+ಇತು=ಹೋ+ಇತು=ಹೋಯಿತು. (ದ ಆಗಮವಿಲ್ಲ.)

ಒಂದು ಸ್ವರವುಳ್ಳ ಕೆಲವು ಧಾತುತಗಳ ಮುಂದೆ ಇತು ಪ್ರತ್ಯಯವು ಸೇರುವಾಗ ದ ಆಗಮವು ಬರುವದು. ಉದಾ— ಸಾ+ದ+ಇತು=ಸತ್ತಿತು; ಬೇ + ದ + ಇತು=ಬೆಂದಿತು; ನೊಂದಿತು.

ಬೀಳು, ಏಳು, ಕೀಳು, ಕಾಣು, ಉಣ್ಣು, ಕೊಳ್ಳುಧಾತುಗಳ ಮುಂದೆ ಇತು ಪ್ರತ್ಯಯವು ಸೇರುವಾಗ ದ ಆಗಮವು ಬರುವದು.

ಉದಾ— ಬೀಳು+ದ+ಇತು=ಬಿದ್ದಿತು; ಏಳು+ದ+ಇತು=ಎದ್ದಿತು ಇದೇ ಮೇರೆಗೆ ಕಿತ್ತಿತು; ಕಂಡಿತು; ಉಂಡಿತು; ಕೊಂಡಿತು.

---

*....ಹ್ರಸ್ವಸ್ವರವೂ,ಹ್ರಸ್ವಸ್ವರವುಸೇರಿದ ವ್ಯಂಜನಗಳೂ ಲಘುಗಳೆನಿಸುವವು. ಗುರು–ದೀರ್ಘಸ್ವರವೂ, ದೀರ್ಘಸ್ವರವು ಸೇರಿದರೆ ವ್ಯಂಜನಗಳೂ, ಅನುಸ್ವಾರ, ವಿಸರ್ಗ, ಸಂಯುಕ್ತಾಕ್ಷರಗಳು ಮುಂದೆ ಇರುವ ಲಘುಗಳೂ ಗುರುಗಳೆನಿಸುವವು. ಉದಾ— ಲಘು—ಅ, ಇ, ಕ, ಕ್ತ, ಮುಂ. ಗುರು— ಆ, ಈ, ಕೀ. ಸ್ತ್ರೀ, ಅಂ, ಕಂ, ಕುಃ ಎಂಬಿವೂ ಅಕ್ಕ ಅತ್ತೆ ಮುಂತಾದ ಶಬ್ದಗಳಲ್ಲಿದ್ದ ಅಕಾರವೂ ಗುರುವಾಗಿವೆ.

ಎರಡು ಲಘುಗಳುಳ್ಳ ಉಕಾರಾಂತ ಧಾತುಗಳಿಗೆ ಇತು ಪ್ರತ್ಯಯವು ಸೇರುವಾಗ ದ ಆಗಮವು ಬರುವದು. ಉದಾ— ನಗು+ದ+ಇತು=ನಕ್ಕಿತು; ಹೊಗು+ದ+ಇತು=ಹೊಕ್ಕಿತು; ಮುಕ್ಕಿತು; ನೆಟ್ಟಿತು; ಬಿಟ್ಟಿತು.

ಭವಿಷ್ಯತ್ಕಾಲದ ರೂಪಗಳು

ಭವಿಷ್ಯತ್ಕಾಲದ ಆಖ್ಯಾತಪ್ರತ್ಯಯಗಳು

		ಏ. ವ.	ಬ. ವ.
ಪ್ರಥಮ ಪುರುಷ	ಪು. ಲಿಂ.	ಅನು	ಅರು
,,	ಸ್ತ್ರೀ. ಲಿಂ.	ಅಳು	ಅರು
,,	ನ. ಲಿಂ.	ಅದು, ಉದು	ಅವು, ಉವು
ಮ. ಪು.		ಎ	ಇರಿ
ಉ. ಪು.		ಎನು	ಎವು

ಭವಿಷ್ಯತ್ಕಾಲದ ಧಾತುವಿಗೂ ಆಖ್ಯಾತಪ್ರತ್ಯಯಕ್ಕೂ ನಡುವೆ ಉವ ಆಗಮವು ಬರುವದು. ಉದಾ—ಕರೆ+ಉವ+ಅನು=ಕರೆಯುವನು; ಕರೆ+ಉವ+ಅಳು=ಕರೆಯುವಳು; ಕರೆ+ಉವ+ಅದು=ಕರೆಯುವದು; ಕರೆ + ಉವ + ಉದು=ಕರೆಯುವುದು.

ಕಲಿ ಧಾತುವಿನ ಭವಿಷ್ಯತ್ಕಾಲದ ರೂಪಗಳು

	ಏ. ವ.	ಬ. ವ.	
ಪ್ರ. ಪು.	ಕಲಿಯುವನು	ಕಲಿಯುವರು	ಪು. ಲಿ.
,,	ಕಲಿಯುವಳು	ಕಲಿಯುವರು	ಸ್ತ್ರೀ. ಲಿಂ.
,,	ಕಲಿಯುವದು	ಕಲಿಯುವವು	ನ. ಲಿಂ.
,,	ಕಲಿಯುವುದು	ಕಲಿಯುವುವು	,,
ಮ. ಪು.	ಕಲಿಯುವೆ	ಕಲಿಯುವಿರಿ	
ಉ. ಪು.	ಕಲಿಯುವೆನು	ಕಲಿಯುವೆವು	

ಭೂತಭವಿಷ್ಯತ್ಕಾಲಗಳ ಉತ್ತಮಪುರುಷದ ಏಕವಚನದಲ್ಲಿ ಎನು ಪ್ರತ್ಯಯಕ್ಕೆ ಪ್ರತಿಯಾಗಿ ಎ ಪ್ರತ್ಯಯವನ್ನೂ ಪ್ರಯೋಗಿಸುವದುಂಟು. ಉದಾ—ನಾನು ಕಲಿತೆ; ನಾನು ಕಲಿಯುವೆ.

೨. ಸಂಭಾವನಾರ್ಥಕ (ಸಂಶಯಾರ್ಥಕ) ರೂಪಗಳು—

ಸಂಭಾವನೆ ಎಂದರೆ ಸಂಶಯವು ಇಲ್ಲವೆ ತರ್ಕವು; ತಿಳಿದಾನು ಎಂದು ಹೇಳಿದಾಗ ತಿಳಿಯುವನೋ ಇಲ್ಲವೋ ಎಂಬ ಸಂಶಯವಾಗಲಿ ತಿಳಿಯಬಹುದು ಎಂಬ ತರ್ಕವಾಗಲಿ ತೋರುವದು. ಈ ಅರ್ಥಗಳನ್ನು ಹೇಳುವ ರೂಪಗಳು ಸಂಭಾವನಾರ್ಥಕ ರೂಪಗಳೆನಿಸುವವು. ಇವನ್ನು ಸಂಶಯಾರ್ಥಕ ರೂಪಗಳೆಂದೂ ಕೆಲವರು ಹೇಳುವರು.

ಸಂಭಾವನಾರ್ಥಕ (ಸಂಶಯಾರ್ಥಕ) ಆಖ್ಯಾತಪ್ರತ್ಯಯಗಳು

		ಏ. ವ.	ಬ. ವ.
ಪ್ರಥಮ ಪುರುಷ	ಪು. ಲಿಂ.	ಆನು	ಆರು
,,	ಸ್ತ್ರೀ. ಲಿಂ.	ಆಳು	ಆರು
,,	ನ. ಲಿಂ.	ಈತು	ಆವು
ಮಧ್ಯಮ ಪುರುಷ		ಈ, ಈಯೆ	ಈರಿ
ಉತ್ತಮ ಪುರುಷ		ಏನು	ಏವು

(೧) ಸಂಭಾವನಾರ್ಥದಲ್ಲಿ ಆಖ್ಯಾತಪ್ರತ್ಯಯಗಳು ಸೇರುವಾಗ ಹಲವು ಧಾತುಗಳ ಮುಂದೆ ದ ಆಗಮವು ಬರುವದು; ದ ಆಗಮವು ಬರಲು ಧಾತುಗಳಿಗೂ ದ ಆಗಮಕ್ಕೂ ಭೂತಕಾಲದಲ್ಲಿ ಆಗುವ ವಿಕಾರಗಳೆಲ್ಲ ಆಗುವವು. ಉದಾ—ಕಲಿ+ದ+ಆನು=ಕಲಿತಾನು; ನಿಲ್ಲು+ದ+ಆನು=ನಿಂತಾನು; ಹೋಗು+ದ+ಆನು=ಹೋದಾನು; ಈ+ದ+ಆನು=ಇತ್ತಾನು; ಗೆದ್ದಾನು; ಕೆತ್ತಾನು; ಕಂಡಾರು; ಎದ್ದೀಯೆ; ಬಿದ್ದೀರಿ; ಕೊಂಡೇನು; ಉಂಡೇವು.

(೨) ದ ಆಗಮವು ಬಂದಾಗ ವಿಕಾರಹೊಂದದ ಉಕಾರಾಂತ ಧಾತುಗಳ ಕೊನೆಯ ಉಕಾರಕ್ಕೆ ಇಕಾರಾದೇಶವಾಗುವದು. ಇಂತಹ ಧಾತುಗಳ ಮುಂದೆ ಸಂಭಾವನಾರ್ಥದಲ್ಲಿ ದ ಆಗಮವು ಬರುವದಿಲ್ಲ. ಉದಾ-ನೋಡು=ಆನು=ನೋಡಿ+ಆನು=ನೋಡಿಯಾನು; ಕೇಳು+ಆನು=ಕೇಳಿ+ಆನು=ಕೇಳಿಯಾನು; ಕೆರಳು+ಆನು=ಕೆರಳಿ+ಆನು=ಕೆರಳಿಯಾನು.

ವಿಕಾರವಾಗುವ ಧಾತುಗಳಿಗೆ ಇಕಾರಾದೇಶವಿಲ್ಲ. ಉದಾ—ಹೊರಡು=ದ+ಆನು=ಹೊರಟಾನು; ಬಿಡು+ದ+ಆನು=ಬಿಟ್ಟಾನು.

ಕೊಲ್ಲು, ಸಲ್ಲು, ಸೋಲು ಮುಂತಾದ ಧಾತುಗಳನ್ನು ಬಿಟ್ಟು ಉಳಿದ ಎರಡಕ್ಕಿಂತ ಹೆಚ್ಚಿಗೆ ಮಾತ್ರೆಗಳುಳ್ಳ ಧಾತುಗಳ ಮುಂದೆ ದ ಆಗಮವು ಬರುವದಿಲ್ಲ. ಉದಾ— ಮರುಗಿಯಾನು; ಬಡಿಸಿಯಾನು; ಓಲಯಿಸಿಯಾನು; ದ ಬರುವದಕ್ಕೆ– ಕೊಂದಾನು; ಸಂದಾನು; ಸೋತಾನು.

ನಿಲ್ಲು ಧಾತುವಿನ ಸಂಭಾವನಾರ್ಥಕ ರೂಪಗಳು

		ಏ. ವ.	ಬ. ವ.
ಪ್ರ. ಪು.	ಪು. ಲಿಂ.	ನಿಂತಾನು	ನಿಂತಾರು
,,	ಸ್ತ್ರೀ. ಲಿಂ.	ನಿಂತಾಳು	ನಿಂತಾರು
,,	ನ. ಲಿಂ.	ನಿಂತೀತು	ನಿಂತಾವು
ಮ. ಪು.		ನಿಂತೀ, ನಿಂತೀಯೆ	ನಿಂತೀರಿ
ಉ ಪು		ನಿಂತೇನು	ನಿಂತೇವು

೪. ವಿಧ್ಯರ್ಥಕ ರೂಪಗಳು

ವಿಧಿ ಎಂದರೆ ಆಜ್ಞೆ (ಅಪ್ಪಣೆ), ವಿಜ್ಞಾಪನೆ (ಬಿನ್ನಹ), ಆಶೀರ್ವಾದ ಎಂಬ ಅರ್ಥಗಳು ಈ ಅರ್ಥವನ್ನು ಹೇಳುವ ಕ್ರಿಯಾಪದಗಳು ವಿಧ್ಯರ್ಥಕ ಕ್ರಿಯಾಪದಗಳೆನಿಸುವವು. ಉದಾ—

ಆಜ್ಞೆಗೆ—ಆಳು ಹೊಲವನ್ನು ಹರಗಲಿ; ಕಲ್ಲನು ಊರಿಗೆ ಹೋಗಲಿ; ನೀನು ಬೇಗ ಬಾ.

ವಿಜ್ಞಾಪನೆಗೆ— ಗುರುಗಳು ಮನೆಗೆ ಬರಲಿ; ತಂದೆಗಳು ಊಟವ ಮಾಡಲಿ; ರಾಯರು ಇತ್ತ ದಯಮಾಡಿಸಲಿ.

ಆಶೀರ್ವಾದಕ್ಕೆ— ಹಿರಿಯರು (ನಿನಗೆ) ದಯದೋರಲಿ; ದೇವರು ನಿಮಗೆ ವರವ ಕೊಡಲಿ.

ವಿಧ್ಯರ್ಥಕ ಆಖ್ಯಾತಪ್ರತ್ಯಯಗಳು

	ಏ. ವ.	ಬ. ವ.
ಪ್ರಥಮಪುರುಷ-ಮೂರೂ ಲಿಂಗಗಳಲ್ಲಿ-	ಅಲಿ	ಅಲಿ
ಮಧ್ಯಮಪುರುಷ—	ಉವ(ವು)ದು	ಉವ(ವು)ದು, ಇರಿ
ಉತ್ತಮಪುರುಷ—	ಉವೆ	ಉವ

ಗೆಲ್ಲು ಧಾತುವಿನ ವಿಧ್ಯರ್ಥಕ ರೂಪಗಳು

	ಏ. ವ.	ಬ. ವ.
ಪ್ರಥಮಪುರುಷ ೧	ಗೆಲ್ಲಲಿ	ಗೆಲ್ಲಲಿ
ಮಧ್ಯಮಪುರುಷ ೨	ಗೆಲ್ಲುವದು, ಗೆಲ್ಲುವುದು	ಗೆಲ್ಲುವ(ವು)ದು ಗೆಲ್ಲಿರಿ
ಉತ್ತಮಪುರುಷ ೩	ಗೆಲ್ಲುವೆ	ಗೆಲ್ಲುವ

(೧) ವಿಧ್ಯರ್ಥಕ ಮಧ್ಯಮಪುರುಷ ಏಕವಚನದಲ್ಲಿ ಪ್ರತ್ಯಯುವನ್ನು ಲೋಪಮಾಡುವ ವಾಡಿಕೆಯುಂಟು.

ಉದಾ—ನೀನು ಗೆಲ್ಲುವದು; ಗೆಲ್ಲುವುದು—ನೀನು ಗೆಲ್ಲು,
ನೀನು ಮಾಡುವದು; ಮಾಡುವುದು—ನೀನು ಮಾಡು.

(೨) ಬಯ್ಯು, ಒಯ್ಯು, ನೆಯ್ಯು, ಕೊಯ್ಯು, ಸುಯ್ಯು, ಆಯು ಧಾತುಗಳಿಗೂ ಏಕಾಕ್ಷರಧಾತುಗಳಿಗೂ ಮಧ್ಯಮ ಪುರುಷದ ಏಕವಚನದಲ್ಲಿ ಇ ಪ್ರತ್ಯಯುವು ಸೇರುವದು.

ಉದಾ—ಬಯ್ಯು+ಇ=ಬಯ್ಯಿ, ಒಯ್ಯಿ, ನೆಯ್ಯಿ, ಕೊಯ್ಯಿ, ಆಯಿ.
ಏಕಾಕ್ಷರಧಾತುಗಳಿಗೆ—ಬೇ+ಇ=ಬೇಯಿ. ಸಾಯಿ, ಮೀಯಿ.

(೩) ತರು ಬರು ಧಾತುಗಳ ಮಧ್ಯಮಪುರುಷದ ರೂಪಗಳು ಏಕವಚನದಲ್ಲಿ ತಾ, ಬಾ (ತಾರ, ಬಾರ) ಎಂದೂ ಬಹುವಚನದಲ್ಲಿ ತರ್ರಿ, ತನ್ನಿ, ಬರ್ರಿ, ಬನ್ನಿ, ಎಂದೂ ವಾಡಿಕೆಯುಲ್ಲಿವೆ. ಇರು ಧಾತುವಿನ ಮಧ್ಯಮಪುರುಷ ಬಹುವಚನದ ರೂಪಗಳು ಇರಿ, ಇರ್ರಿ ಎಂದಾಗುವವು.

(೪) ಧಾತುಗಳ ಮುಂಬೆ ಬೇಕು, ಬಹುದು ಎಂಬಿವನ್ನು ಸೇರಿಸಿದರೂ ವಿಧ್ಯರ್ಥಕ ಕ್ರಿಯಾಪದಗಳಾಗುವವು; ಇವು ಸೇರುವಾಗ ಧಾತುಗಳ ಮುಂದೆ ಅ ಬರುವದು. ಈ ರೂಪಗಳಿಗೆ ಪುರುಷ-ಲಿಂಗ ವಚನ ಭೇದಗಳಿಲ್ಲ. ಉದಾ—ಅವನು, ಅವಳು, ಅವರು, ಅದು, ಅವು—ಮಾಡಬೇಕು, ಮಾಡಬಹುದು. ನೀನು, ನೀವು ನಾನು, ನಾವು—ಮಾಡಬೇಕು, ಮಾಡಬಹುದು.

೪. ನಿಷೇಧಾರ್ಥಕ ರೂಪಗಳು

ನಿಷೇಧವೆಂದರೆ ಕ್ರಿಯೆ ನಡೆಯುವದಿಲ್ಲವೆಂಬ ಅರ್ಥವು. ನೋಡನು ಎಂದರೆ ನೋಡುವದಿಲ್ಲ; ನೋಡುವ ಕ್ರಿಯೆ ನಡೆಯುವದಿಲ್ಲವೆಂಬ ಅರ್ಥವು.

ನಿಷೇಧಾರ್ಥಕ ಆಖ್ಯಾತಪ್ರತ್ಯಯಂಗಳು

		ಏ. ವ.	ಬ. ವ.
ಪ್ರಥಮಪುರುಷ	ಪು ಲಿಂ.	ಅನು	ಅರು
,,	ಸ್ತ್ರೀ. ಲಿಂ.	ಅಳು	ಅರು
,,	ನ. ಲಿಂ.	ಅದು	ಅವು
ಮಧ್ಯಮಪುರುಷ		ಎ	ಅರಿ
ಉತ್ತಮಪುರುಷ		ಎನು	ಎವು

ಕಲಿ ಧಾತುವಿನ ನಿಷೇಧಾರ್ಥಕ ರೂಪಗಳು

		ಏ. ವ.	ಬ. ವ.
ಪ್ರಥಮಪುರುಷ	ಪು. ಲಿಂ.	ಕಲಿಯುನು	ಕಲಿಯುರು
,,	ಸ್ತ್ರೀ. ಲಿಂ.	ಕಲಿಯುಳು	ಕಲಿಯುರು
,,	ನ. ಲಿಂ.	ಕಲಿಯುದು	ಕಲಿಯುವು
ಮಧ್ಯಮಪುರುಷ		ಕಲಿಯೆ	ಕಲಿಯುರಿ
ಉತ್ತಮಪುರುಷ		ಕಲಿಯೆನು	ಕಲಿಯೆವು

ನಿಷೇಧಾರ್ಥದಲ್ಲಿ ತರು, ಬರು ಧಾತುಗಳ ಅಕಾರಕ್ಕೆ ಆಕಾರಾದೇ ವಾಗುವದು. ಉದಾ— ತಾರನು, ತಾರರು; ತಾರಳು, ತಾರದು; ಬಾರದು ಬಾರವು; ಬಾರ, ಬಾರರಿ; ಬಾರೆನು, ಬಾರೆವು.

ಕಾಲಾರ್ಥಕ, ಸಂಭಾವನಾರ್ಥಕ (ಸಂಶಯಾರ್ಥಕ) ವಿಧ್ಯರ್ಥ ಕ್ರಿಯಾಪದಗಳ ನಿಷೇಧರೂಪಗಳು ಕೆಳಗೆ ಹೇಳಿದ ಮೇರೆಗೆ ಆಗುವವು.

ಕಾಲಾರ್ಥಕ ನಿಷೇಧರೂಪಗಳು

ವರ್ತಮಾನಕಾಲ ಭವಿಷ್ಯತ್ಕಾಲಗಳ ನಿಷೇಧರೂಪ— ಧಾತುಗ ಮುಂದೆ ಉವದು(ಉವುದು) ಎಂಬುದನ್ನು ಸೇರಿಸಿ ಅದರ ಮುಂದೆ ಇಲ್ಲ ಎಂ ದನ್ನಿಟ್ಟರೆ ವರ್ತಮಾನ ಭವಿಷ್ಯತ್ಕಾಲಗಳ ನಿಷೇಧರೂಪಗಳಾಗುವವು. ಉದ

ವರ್ತಮಾನಕಾಲನಿಷೇಧ–ನಗುತ್ತಾಳೆ(ವರ್ತಮಾನರೂಪ). ಇದ ನಿಷೇಧರೂಪ-ನಗು+ಉವದು+ಇಲ್ಲ=ನಗುವದಿಲ್ಲ; ನಗು=ಉವುದು+ಇಲ್ಲ= ನಗುವುದಿಲ್ಲ; ತಿಳಿಯುವದಿಲ್ಲ ಮುಂ. ನಗು+ಉತ್ತ+ಇಲ್ಲ=ನಗುತ್ತಿಲ್ಲ. ಈ ತರದ ರೂಪಗಳೂ ವಾಡಿಕೆಯಲ್ಲಿವೆ.

ಭವಿಷ್ಯತ್ಕಾಲ ನಿಷೇಧ—ನಗುವನು ಭವಿಷ್ಯತ್ಕಾಲರೂಪ, ಇದರ ನಿಷೇಧರೂಪ—ನಗು + ಉವದು + ಇಲ್ಲ=ನಗುವದಿಲ್ಲ; ನಗು+ ಉವುದು+ ಇಲ್ಲ=ನಗುವುದಿಲ್ಲ; ಹೋಗುವುದಿಲ್ಲ; ಬರುವುದಿಲ್ಲ. ಮುಂ.

ಭೂತಕಾಲ ನಿಷೇಧ— (೧) ಮಾಡಿ, ಕೇಳಿ, ಬಂದು, ಕೊಟ್ಟು ಮುಂತಾದ ಭೂತಕೃದಂತಾವ್ಯಯಗಳ ಮುಂದೆ ಇಲ್ಲ ಎಂಬದನ್ನು ಸೇರಿಸಿದರೆ ಭೂತಕಾಲದ ನಿಷೇಧರೂಪಗಳಾಗುವವು; ಇಲ್ಲವೆ (೨) ಧಾತುಗಳ ಮುಂದೆ ಅಲ್ ಎಂಬದನ್ನು ಸೇರಿಸಿ ಅದರ ಮುಂದೆ ಇಲ್ಲ ಎಂಬದನ್ನು ಸೇರಿಸಿದರೆ ಭೂತಕಾಲದ ನಿಷೇಧರೂಪಗಳಾಗುವವು. (ಭೂತಕೃದಂತಾವ್ಯಯಗಳನ್ನು ಕೃದಂತ ಪ್ರಕರಣದಲ್ಲಿ ನೋಡಿರಿ.)

	ಧಾತು.	ಭೂ. ಕೃ. ಅವ್ಯಯ	ನಿಷೇಧರೂಪ
೧ನೆಯ ಪ್ರಕಾರದ ರೂಪಗಳು—	ನಗು	ನಕ್ಕು	ನಕ್ಕಿಲ್ಲ
	ಬರು	ಬಂದು	ಬಂದಿಲ್ಲ
	ತಿನ್ನು	ತಿಂದು	ತಿಂದಿಲ್ಲ
	ಕಲಿ	ಕಲಿತು	ಕಲಿತಿಲ್ಲ

೨ನೆಯ ಪ್ರಕಾರದ ರೂಪಗಳು—ನಗು + ಅಲ್ + ಇಲ್ಲ=ನಗಲಿಲ್ಲ
ಬರು + ಅಲ್ + ಇಲ್ಲ+ಬರಲಿಲ್ಲ
ತಿನ್ನು+ಅಲ್+ ಇಲ್ಲ= ತಿನ್ನಲಿಲ್ಲ
ಕಲಿ +ಅಲ್ + ಇಲ್ಲ=ಕಲಿಯಲಿಲ್ಲ

ಭೂತಕಾಲದ ಕ್ರಿಯಾಪದ— ನಕ್ಕನು; ಇದರ ನಿಷೇಧರೂಪ-೧. ನಕ್ಕಿಲ್ಲ
,, ,, ೨. ನಗಲಿಲ್ಲ
,, ,, ಕೊಟ್ಟನು ,, ೧. ಕೊಟ್ಟಿಲ್ಲ
,, ,, ೨. ಕೊಡಲಿಲ್ಲ

ಸಂಭಾವನಾರ್ಥಕ ನಿಷೇಧರೂಪ— ಧಾತುಗಳ ಮುಂದೆ ಅಲಿಕ್ಕೆ ಎಂಬದನ್ನು ಸೇರಿಸಿ ಅದರ ಮುಂದೆ ಇಲ್ಲ ಎಂಬದನ್ನಿಟ್ಟರೆ ಸಂಭಾವನಾರ್ಥದ ನಿಷೇಧರೂಪಗಳಾಗುವವು.

ಸಂಭಾವನಾರೂಪ-	ಮಾಡಿಯಾನು	ಮಾಡಿಯಾರು	ಇವುಗಳ ನಿಷೇ
	ಮಾಡಿಯಾಳು	ಮಾಡಿಯಾರು	ರೂಪ-ಮಾಡ
	ಮಾಡೀತು	ಮಾಡಿಯಾವು	ಕಿಲ್ಲ (ಮಾಡು)
	ಮಾಡೀ ಮಾಡೀಯೆ	ಮಾಡೀರಿ	ಅಲಿಕ್ಕೆ + ಇಲ್ಲ
	ಮಾಡೇನು	ಮಾಡೇವು	

ವಿಧ್ಯರ್ಥಕ ನಿಷೇಧರೂಪಗಳು—ಬಾರದು, ಕೂಡದು, ಆಗದು ಬೇಡ ಬೇಡಿರಿ ಎಂಬ ರೂಪಗಳನ್ನು ಧಾತುಗಳ ಮುಂದೆ ಸೇರಿಸಿದರೆ ವಿಧ್ಯರ್ಥಕ ನಿಷೇಧರೂಪಗಳಾಗುವವು. ಇವು ಸೇರುವಾಗ ಧಾತುಗಳ ಮುಂದೆ ಅಕಾರವು ಬರುವದು. ಮ. ಪು. ದಲ್ಲಿ ಇರಿ ಬ. ವ. ಸೂಚಕವು.

	ವಿಧ್ಯರ್ಥಕ ರೂಪ—ಏ. ವ.	ಬ. ವ.	ನಿಷೇಧರೂಪ—ಏ. ವ.	ಬ. ವ.
ಪ್ರ. ಮ.	ಮಾಡಲಿ ಮಾಡಬೇಕು		ಮಾಡಬಾರದು. ಮಾಡಕೂಡದು, ಮಾಡಲಾಗದು	
	ಏ. ವ.	ಬ. ವ.	ಏ. ವ.	ಬ. ವ.
ಮ. ಪು.	ಮಾಡುವದು ಮಾಡುವುದು ಮಾಡು	ಮಾಡಿರಿ	ಮಾಡಬೇಡ ಮಾಡಬಾರದು ಮುಂ.	ಮಾಡಬೇಡಿರಿ ಮಾಡಬಾರದು ಮು.
ಉ. ಪು.	ಮಾಡುವೆ	ಮಾಡುವ	ಮಾಡಬಾರದು, ಮಾಡಕೂಡದು ಮಾಡಲಾಗದು.	

ವಿಶಿಷ್ಟ ರೂಪಗಳು

ಕೆಲವು ಧಾತುಗಳ ಎಲ್ಲ ರೂಪಗಳು ಬಳಕೆಯಲ್ಲಿಲ್ಲ. ಅಂತಹ ಕೆಲವ ಕೆಳಗೆ ತೋರಿಸಿವೆ.

(೧)ಒಲ್ (ಪ್ರೀತಿಸು) ಧಾತುವಿನ ನಿಷೇಧಾರ್ಥಕ ರೂಪಗಳಷ್ಟೆ ಬಳಕೆಯಲ್ಲಿವೆ—ಒಲ್ಲನು,ಒಲ್ಲಳು,ಒಲ್ಲರು, ಒಲ್ಲದು, ಒಲ್ಲವು, ಒಲ್ಲೆ, ಒಲ್ಲಿರಿ ಒಲ್ಲೆನು, ಒಲ್ಲೆವು.

(೨) ಆರು (ಸಮರ್ಥನಾಗು) ಎಂಬ ಧಾತುವಿನ ಭವಿಷ್ಯತ್ಕಾಲದ ಮತ್ತು ನಿಷೇಧಾರ್ಥದ ರೂಪಗಳಷ್ಟೇ ಬಳಕೆಯಲ್ಲಿವೆ.

ಭವಿಷ್ಯತ್ಕಾಲ— ಆಪನು, ಆಪಳು, ಆಪರು, ಆಪದು, ಆಪವು; ಆಪೆ, ಆಪಿರಿ, ಆಪೆನು, ಆಪೆವು; (ಆರು+ಪ+ಅನ=ಆರ್ಪನು; ಇದು ವಿಕೃತವಾಗಿ ಆಪನು ಎಂದಾಗಿದೆ) ಮಾಡಲಾಪನು, ಕೇಳಲಾಪನು; ಕೊಲ್ಲಲಾಪರು.

ನಿಷೇಧಾರ್ಥ— ಆರನು, ಆರಳು, ಆರರು; ಆರದು; ಆರವು, ಆರೆ, ಆರಿರಿ, ಆರೆನು, ಆರೆವು; ಮಾಡಲಾರೆನು, ಕೇಳಲಾರೆನು; ಹಮ್ಮಲಾರೆನು.

ಪ್ರಯೋಗ— ಮಲ್ಲನು, ಕಲ್ಲನನ್ನು ಒಗೆಯಲಾಪನು; ಈ ಹುಡುಗನು ಪುಸ್ತಕವನ್ನು ಓದಲಾಪನು, [ಒಗೆಯಲು+ಆಪನು; ಓದಲು+ಆಪನು.]

ಕಲ್ಲನು ಕುದುರೆಯನ್ನು ಏರಲಾರನು [ಏರಲು + ಆರನು] ಗೋವಿಂದನು ಪ್ರಾಣಿಯನ್ನು ಕೊಲ್ಲಲಾರನು [ಕೊಲ್ಲಲು + ಆರನು].

(೩) ಬಲ್ (ತಿಳಿ) ಧಾತುವಿನ ಭೂತಕಾಲದ ರೂಪಗಳಷ್ಟೇ ಬಳಕೆಯಲ್ಲಿ ಉಂಟು. ಈ ಧಾತುವಿಗೂ ಆಖ್ಯಾತಪ್ರತ್ಯಯಗಳಿಗೂ ನಡುವೆ ಕಾಲಸೂಚಕವಾದ ದ ಆಗಮವು ಬರುವದಿಲ್ಲ. ಉದಾ— ಬಲ್ಲನು, ಬಲ್ಲಳು, ಬಲ್ಲರು ಬಲ್ಲದು (ಬಲ್ಲುದು), ಬಲ್ಲವು(ಬಲ್ಲುವು), ಬಲ್ಲೆ, ಬಲ್ಲಿರಿ, ಬಲ್ಲೆನು, ಬಲ್ಲೆವು.

ಈ ರೂಪಗಳಿಗೆ ವರ್ತಮಾನಕಾಲದ ಅರ್ಥವೂ ಕೆಲವೆಡೆಯಲ್ಲಿ ಉಂಟು ಉದಾ— ರಾಮನು ಆ ವಿಷಯವನ್ನು ಬಲ್ಲನು; ಇಲ್ಲಿ ಬಲ್ಲನು ಎಂದರೆ ತಿಳಿದನು ಇಲ್ಲವೆ ತಿಳಿಯುತ್ತಾನೆ ಎಂಬ ಅರ್ಥವು.

ಉಳ್ (ಇರು) ಧಾತುವಿನ ಪ್ರ. ಪು. ನ. ಲಿಂಗದ ಏಕವಚನದ ಉಂಟು ಎಂಬ ರೂಪವೊಂದು ಬಳಕೆಯಲ್ಲಿದೆ. ಅದು ವರ್ತಮಾನ-ಭೂತಕಾಲಗಳಲ್ಲಿ ಎಲ್ಲ ಲಿಂಗಗಳಲ್ಲಿಯೂ ಎಲ್ಲ ವಚನಗಳಲ್ಲಿಯೂ ಪ್ರಯೋಗಿಸಲ್ಪಡುವದು; ಉದಾ— ರಾಮನು ಉಂಟು; ಅಕ್ಕನು ಉಂಟು; ಮನುಷ್ಯರು ಉಂಟು. ಅಕ್ಕಂದಿರು ಉಂಟು; ಮನೆಯು ಉಂಟು; ಮನೆಗಳು ಉಂಟು.

---

೬. ಕೃದಂತಗಳು

ಧಾತುಗಳ ಮುಂದೆ ಸೇರುವ ಪ್ರತ್ಯಯಗಳು ಎರಡು ಪ್ರಕಾರದವು.
೧. ಕ್ರಿಯಾವಿಭಕ್ತಿಪ್ರತ್ಯಯಗಳು ಇಲ್ಲವೆ ಆಖ್ಯಾತಪ್ರತ್ಯಯಗಳು.
೨. ಕೃತ್‌ಪ್ರತ್ಯಯಗಳು.

ಕೃತ್‌ಪ್ರತ್ಯಯಂ-ಕ್ರಿಯಾವಿಭಕ್ತಿಪ್ರತ್ಯಯಗಳನ್ನು ಬಿಟ್ಟು, ಧಾತುಗ ಮುಂದೆ ಸೇರುವ ಎಲ್ಲ ಪ್ರತ್ಯಯಗಳು ಕೃತ್‌ಪ್ರತ್ಯಯಗಳೆನಿಸುವವು.

ಕೃದಂತ— ಧಾತುಗಳ ಮುಂದೆ ಕೃತ್‌ಪ್ರತ್ಯಯಗಳು ಸೇರಿದ ಉಂಟಾಗುವ ರೂಪಗಳು ಕೃದಂತಗಳೆನಿಸುವವು.

ಕೃದಂತಭೇದಗಳು-ಕೃದಂತಗಳಲ್ಲಿ **ಕೃನ್ನಾಮಂ**, ಕೃದ್ಭಾವನಾಮ **ಕೃದಂತಾವ್ಯಯಂ** ಎಂಬ ಮೂರು ತರದ ರೂಪಗಳಾಗುವವು.

ಕೃನ್ನಾಮಂ— ಧಾತುಗಳಿಗೆ ದ ಮೊದಲಾದ ಕೃತ್‌ಪ್ರತ್ಯಯಗಳ ಸೇರಲು ಉಂಟಾದ ನಾಮಗಳು ಕೃನ್ನಾಮಗಳೆನಿಸುವವು. ಉದಾ-ಮಾಡಿ ಮಾಡುವ, ಮಾಡದ ಮುಂ. [ಕೃನ್ನಾಮ=ಕೃದಂತನಾಮ]

ಕೃನ್ನಾಮಂಗಳಲ್ಲಿ (೧) **ಭೂತಕೃನ್ನಾಮಂ**, (೨) **ವರ್ತಮಾನ ಕೃನ್ನಾಮಂ**, (೩) **ಭವಿಷ್ಯತ್‌ಕೃನ್ನಾಮಂ**, (೪) **ನಿಷೇಧಕೃನ್ನಾಮ** ಎಂಬ ನಾಲ್ಕು ಪ್ರಕಾರಗಳುಂಟು.

೧. **ಭೂತಕೃನ್ನಾಮಂ**-ಕರ್ತೃಕರ್ಮಾರ್ಥಗಳಲ್ಲಿ ಧಾತುಗಳಮುಂದ ದ ಪ್ರತ್ಯಯವು ಸೇರಿದರೆ ಭೂತಕೃನ್ನಾಮಗಳಾಗುವವು. ಉದಾ: ನೋಡು+ ದ=ನೋಡಿದ; ನೋಡಿದ=ನೋಡುವ ಕ್ರಿಯೆಯ ಕರ್ತೃ, ಇಲ್ಲವೆ ಕರ್ಮ; ತರು+ದ=ತಂದ; ಕೊಡು+ದ=ಕೊಟ್ಟ ಮುಂ.

'ದ' ಪ್ರತ್ಯಯವು ಸೇರಲು ಭೂತಕಾಲದ ಕ್ರಿಯಾಪದಗಳಾಗುವಾಗ ಧಾತುಗಳಿಗೆ ಉಂಟಾಗುವ ವಿಕಾರಗಳು ಇಲ್ಲಿಯೂ ಆಗುವವು. (ಆ ರೂಪ ಗಳನ್ನು ಕ್ರಿಯಾಪದ ಪ್ರಕರಣದಲ್ಲಿ ನೋಡಿರಿ.)

೨. **ವರ್ತಮಾನಕೃನ್ನಾಮ**—ಕರ್ತೃಕರ್ಮಾರ್ಥಗಳಲ್ಲಿಧಾತುಗಳ ಮುಂದೆ ಉವ ಪ್ರತ್ಯಯವು ಸೇರಿದರೆ ವರ್ತಮಾನಕೃನ್ನಾಮಗಳಾಗುವವು. ಉದಾ—ಮಾಡು+ಉವ=ಮಾಡುವ; ತರು+ಉವ=ತರುವ; ಮೀ+ಉವ= ಮೀಯುವ ಮುಂ.

೩. **ಭವಿಷ್ಯತ್‌ಕೃನ್ನಾಮ**—ವರ್ತಮಾನಕೃನ್ನಾಮಗಳೇ ಭವಿಷ್ ತ್ಕಾಲದ ಅರ್ಥವನ್ನೂ ಹೇಳುವವು. ಉದಾ— ಮಾಡುವ; ನಡೆಯುವ; ಮೀಯುವ ಮುಂ.

೪. **ನಿಷೇಧಕೃನ್ನಾಮ**-ಕರ್ತೃಕರ್ಮಾರ್ಥಗಳಲ್ಲಿ ಧಾತುಗಳಮುಂದೆ

ಆದ ಪ್ರತ್ಯಯವು ಸೇರಿದರೆ ನಿಷೇಧಕೃನ್ನಾಮಗಳಾಗುವವು. ಉದಾ—ಮಾಡು+ಆದ=ಮಾಡದ; ಕೊಡು+ಅದ=ಕೊಡದ ಮುಂ.

ತರು ಬರು, ಧಾತುಗಳ ಮುಂದೆ ಅದ ಪ್ರತ್ಯಯವು ಸೇರಲು ತಾರದ ಬಾರದ ಎಂಬ ರೂಪಗಳಾಗುವವು.

ಕೃನ್ನಾಮಗಳ ವಿಭಕ್ತಿರೂಪಗಳು

ಕೃನ್ನಾಮಗಳ ಮುಂದೆ ಅವನು ಎಂಬ ಸರ್ವನಾಮದ ವಿಭಕ್ತಿರೂಪಗಳು ಸೇರಿದರೆ ಪುಲ್ಲಿಂಗದ ರೂಪಗಳಾಗುವವು. ಅವಳು ಎಂಬ ಸರ್ವನಾಮದ ವಿಭಕ್ತಿರೂಪಗಳು ಸೇರಿದರೆ ಸ್ತ್ರೀಲಿಂಗದ ರೂಪಗಳಾಗುವವು.

ಉದಾ—ಪು. ಲಿ —ಮಾಡಿದ+ಅವನು=ಮಾಡಿದವನು.

ಸ್ತ್ರೀ.ಲಿಂ.—ಮಾಡಿದ+ಅವಳು=ಮಾಡಿದವಳು.

'ಮಾಡಿದ' ಕೃನ್ನಾಮದ ಪು. ಸ್ತ್ರೀ. ಲಿಂಗದ ವಿಭಕ್ತಿರೂಪಗಳು

ಪುಲ್ಲಿಂಗ—ಏ. ವ.	ಬ. ವ.	ಸ್ತ್ರೀ —ಏ. ವ.	ಬ. ವ.
ಪ್ರ. ಮಾಡಿದವನು	ಮಾಡಿದವರು	ಮಾಡಿದವಳು	ಬಹುವಚನದ
ದ್ವಿ. ಮಾಡಿದವನನ್ನು	ಮಾಡಿದವರನ್ನು	ಮಾಡಿದವಳನ್ನು	ರೂಪಗಳು
ತೃ. ಮಾಡಿದವನಿಂದ	ಮಾಡಿದವರಿಂದ	ಮಾಡಿದವಳಿಂದ	ಪುಲ್ಲಿಂಗದಂತೆ
ಚ. ಮಾಡಿದವನಿಗೆ	ಮಾಡಿದವರಿಗೆ	ಮಾಡಿದವಳಿಗೆ.	
ಪಂ. ಮಾಡಿದವನಿಂದ	ಮಾಡಿದವರಿಂದ	ಮಾಡಿದವಳಿಂದ	
ಷ. ಮಾಡಿದವನ	ಮಾಡಿದವರ	ಮಾಡಿದವಳ	
ಸ. ಮಾಡಿದವನಲ್ಲಿ	ಮಾಡಿದವರಲ್ಲಿ	ಮಾಡಿದವಳಲ್ಲಿ	
ಸಂ. ಮಾಡಿದವನೇ	ಮಾಡಿದವರೇ	ಮಾಡಿದವಳೇ	

ಕೃನ್ನಾಮಗಳ ಮುಂದೆ ಅದು ಶಬ್ದದ ವಿಭಕ್ತಿರೂಪಗಳು ಸೇರಿದರೆ ನಪುಂಸಕಲಿಂಗದ ವಿಭಕ್ತಿರೂಪಗಳಾಗುವವು.

ಉದಾ-ಮಾಡಿದ+ಅದು=ಮಾಡಿದದು; ಬೇಡಿದ+ಅದು=ಬೇಡಿದದು; ಇವುಗಳನ್ನು ಮಾಡಿದ್ದು, ಬೇಡಿದ್ದು ಎಂದು ಉಚ್ಚರಿಸುವದೇ ವಾಡಿಕೆಯಾಗಿದೆ.

ಮಾಡಿದ್ದು ಎಂಬ ಕೃನ್ನಾಮದ ವಿಭಕ್ತಿರೂಪಗಳು

	ಏ. ವ.	ಬ. ವ.
ಪ್ರ.	ಮಾಡಿದ್ದು	ಮಾಡಿದವು
ದ್ವಿ.	ಮಾಡಿದ್ದನ್ನು	ಮಾಡಿದವನ್ನು
ತೃ.	ಮಾಡಿದ್ದರಿಂದ	ಮಾಡಿದವುಗಳಿಂದ
ಚ.	ಮಾಡಿದ್ದಕ್ಕೆ	ಮಾಡಿದವುಗಳಿಗೆ
ಪಂ.	ಮಾಡಿದ್ದರಿಂದ	ಮಾಡಿದವುಗಳಿಂದ
ಷ.	ಮಾಡಿದ್ದರ	ಮಾಡಿದವುಗಳ
ಸ.	ಮಾಡಿದ್ದರಲ್ಲಿ	ಮಾಡಿದವುಗಳಲ್ಲಿ
ಸಂ.	ಮಾಡಿದ್ದೇ	ಮಾಡಿದವುಗಳೇ

ನಪುಂಸಕಲಿಂಗದಲ್ಲಿ ಅದು ಶಬ್ದದ ರೂಪಗಳನ್ನು ಸೇರಿಸಿದಂತೆ ಉದ ಉವು ಎಂಬ ರೂಪಗಳನ್ನು ಸೇರಿಸಿಯೂ ವಿಭಕ್ತಿರೂಪಗಳನ್ನು ಮಾಡು ದುಂಟು— ಮಾಡಿದ+ಉದು=ಮಾಡಿದುದು; ಮಾಡಿದ+ಉವು=ಮಾಡಿದು ತಕ್ಕ+ಉದು=ತಕ್ಕುದು; ಕೊಟ್ಟ+ಉದು=ಕೊಟ್ಟುದು; ಹೋದ+ಉದು ಹೋದುದು ಮುಂ.

ಮಾಡಿದುದು ಎಂಬ ಕೃನ್ನಾಮದ ವಿಭಕ್ತಿರೂಪಗಳು

ಪ್ರ. ಮಾಡಿದುದು, ಮಾಡಿದುವು; ದ್ವಿ.— ಮಾಡಿದುದನ್ನು, ಮಾ ದುವನ್ನು; ತೃ.—ಮಾಡಿದುದರಿಂದ, ಮಾಡಿದುವುಗಳಿಂದ; ಚ.— ಮಾಡಿ ದಕ್ಕೆ, ಮಾಡಿದುವುಗಳಿಗೆ; ಪ.— ಮಾಡಿದುದರಿಂದ, ಮಾಡಿದುವುಗಳಿಂ ಷ.— ಮಾಡಿದುದರ, ಮಾಡಿದುವುಗಳ; ಸ.– ಮಾಡಿದುದರಲ್ಲಿ, ಮಾಡಿದು ಗಳಲ್ಲಿ; ಸಂ.— ಮಾಡಿದುದೇ, ಮಾಡಿದುವುಗಳೇ. ಇದೇಮೇರೆಗೆ ಮಾಡು ವನು, ಮಾಡುವವಳು, ಮಾಡುವದು, ಮಾಡುವುದು; ನೋಡಿದವನ ನೋಡಿದವಳು ಮುಂತಾದವುಗಳ ವಿಭಕ್ತಿರೂಪಗಳನ್ನು ತಿಳಿಯಬೇಕು.

ಧಾತುಗಳ ಮುಂದೆ ಅ, ಅಕ, ಕ, ಕುಳಿ, ಮೊದಲಾದ ಪ್ರತ್ಯಯಗ ಸೇರಿದರೆ ಕಾಲಾರ್ಥವಿಲ್ಲದ ಕೃನ್ನಾಮಗಳಾಗುವವು. ಉದಾ—

ಅ ಪ್ರತ್ಯಯಕ್ಕೆ— ಕಳು (ಕಳ್) + ಅ=ಕಳ್ಳ; ತುಂಟ.
ಅಕ ,, ಹರಿ + ಅಕ=ಹರಕ; ನೋಟಕ; ಮುರಕ.
ಕ ,, ತಿರಿ + ಕ=ತಿರಿಕ, ಕುಡಕ, (ಕುಡಿಕ).
ಹೊಯ್ಕ (ತಲೆಹೊಯ್ಕ), ಮುದುಕ, ಬಡಿಕ
(ಬಾಯ್ಬಡಕ).
ಕುಳಿ ,, ಇರಿ+ಕುಳಿ=ಇರಿಕುಳಿ, ತಿರಿಕುಳಿ (ತಿರುಕುಳಿ).

ಇವಲ್ಲದೆ ತಿನ್ನಾಳಿ, ಏರಾಳಿ, ನೆಯ್ಯಾರ, ಉಂಡಾಡಿ ಮೊದಲಾದ ಕೆಲವು ಕೃನ್ನಾಮಗಳುಂಟು.

ಕೃದಂತ ವಿಶೇಷಣ— ಕೃನ್ನಾಮಗಳನ್ನು ವಿಶೇಷಣಗಳಂತೆಯೂ ಉಪಯೋಗಿಸುವರು. ಆಗ ಇವುಗಳನ್ನು ಕೃದಂತವಿಶೇಷಣಗಳೆಂದೆನ್ನುವರು. ಉದಾ—ನೋಡಿದ ಕುದುರೆ; ಓದಿದ ಪುಸ್ತಕವು; ಕೇಳಿದ ಮಾತು. ಕಳ್ಳ ಹುಡುಗನು; ನೋಟಕರಾದ ಜನರು; ಇರಿಕುಳಿ ಆಕಳು ಮುಂ.

ಕಾಲಾರ್ಥವುಳ್ಳ ಕೃನ್ನಾಮಗಳು ಕರ್ತೃಕರ್ಮಾರ್ಥಗಳಲ್ಲಲ್ಲದೆ ಎಲ್ಲ ಕಾರಕಾರ್ಥಗಳಲ್ಲಿಯೂ ಉಪಯೋಗಿಸಲ್ಪಡುವವು.

ಕರ್ತ್ರರ್ಥದಲ್ಲಿ— ಓಡುವ ಕುದುರೆ; ಓಡುವ=ಓಡುವ ಕ್ರಿಯೆಯ ಕರ್ತೃ.
ಆಳಿದ ಅರಸನು; ಆಳಿದ= ಆಳುವ ,, ,,
ಕರ್ಮಾರ್ಥದಲ್ಲಿ-ಓದುವ ಪುಸ್ತಕ; ಓದುವ=ಓದುವ ,, ಕರ್ಮ
ಕಟ್ಟಿದ ಮನೆ. ಕಟ್ಟಿದ=ಕಟ್ಟುವ ,, ,,
ಕರಣಾರ್ಥದಲ್ಲಿ- ನೋಡುವ ಕಣ್ಣು; ನೋಡುವ=ನೋಡುವ ,, ಕರಣ.
ಸಂಪ್ರದಾನಾರ್ಥದಲ್ಲಿ-ಭಿಕ್ಷೆಯಿಕ್ಕಿದ ಜಂಗಮನು.
ಇಕ್ಕಿದ=ಇಕ್ಕುವ ಕ್ರಿಯೆಯ ಸಂಪ್ರದಾನ.
ಆಕಳು ಕೊಟ್ಟ ಬ್ರಾಹ್ಮಣ; ಕೊಟ್ಟ=ಕೊಡುವ ,, ,,
ಅಪಾದಾನಾರ್ಥದಲ್ಲಿ— ಕಲ್ಲನು ಬಿದ್ದ ಕುದುರೆ; ,, ,,
ಬಿದ್ದ=ಬೀಳುವ ,, ಅಪಾದಾನ.
ಎಲೆ ಉದಿರಿದ ಮರವು ಉದಿರಿದ=ಉದಿರುವ ,, ,,
ಅಧಿಕರಣಾರ್ಥದಲ್ಲಿ-ಇಳಿದ ಬಾವಿ;
ಇಳಿದ=ಇಳಿಯುವ ,, ಅಧಿಕರಣ.
ಇದ್ದ ಊರು; ಇದ್ದ=ಇರುವ ,, ,,

ಕೃದ್‌ಭಾವನಾಮ- ಭಾವವೆಂದರೆ ಕ್ರಿಯೆ; ಕ್ರಿಯೆಯನ್ನು ಹೇಳುವ ಕೃದಂತಗಳು ಕೃದ್ಭಾವನಾಮಗಳಾಗುವವು. (ಕೃದ್ಭಾವನಾಮ=ಕೃದಂತ ಭಾವನಾಮ.)

ಎಲ್ಲ ಧಾತುಗಳ ಮುಂದೆ ಇಕೆ, ಅದು ಇಲ್ಲವೆ ಉದು ಎಂಬ ಪ್ರತ್ಯಯಗಳು ಸೇರಿದರೆ ಕೃದ್ಭಾವನಾಮಗಳಾಗುವವು. ಈ ಪ್ರತ್ಯಯಗಳು ಸೇರುವಾಗ ಧಾತುಗಳ ಮುಂದೆ ವ್ ಆಗಮವಾಗುವದು. ಉದಾ—

ಇಕೆ ಸೇರಿದ ಕೃದ್ಭಾವನಾಮ — ಬರು + ವ್ + ಇಕೆ + ಬರುವಿಕೆ; ಕೂಗು + ವ್ + ಇಕೆ = ಕೂಗುವಿಕೆ; ಹರಡುವಿಕೆ; ಹತ್ತುವಿಕೆ; ಮುಂ. (ಬರುವಿಕೆ + ಬರುವ ಕ್ರಿಯೆ.)

ಅದು ಇಲ್ಲವೆ ಉದು ಸೇರಿದ ಕೃದ್‌ಭಾವನಾಮ — ತರು + ವ್ + ಅದು = ತರುವದು; ಹೇಳುವದು; ಕಾಣುವದು; ಹಬ್ಬುವದು ಮುಂ. (ಹಬ್ಬುವದು=ಹಬ್ಬುವ ಕ್ರಿಯೆ) ತರು+ವ್+ಉದು=ತರುವುದು, ಹೇಳುವುದು, ಕಾಣುವುದು, ಹಬ್ಬುವುದು ಮುಂ. (ತರುವುದು = ತರುವ ಕ್ರಿಯೆ);

ಇಕೆ ಪ್ರತ್ಯಯವು ಸೇರುವಾಗ ವ್ ಆಗಮವು ಬಾರದಿರುವದೂ ಉಂಟು. ಉದಾ—ನೋಡು+ಇಕೆ=ನೋಡಿಕೆ; ಕಾಣಿಕೆ, ಕೇಳಿಕೆ, ಕಲಿಕೆ, ಸೇರಿಕೆ, ಕೋರಿಕೆ, ಹಂಚಿಕೆ.

ಭಾವಾರ್ಥಕ ಕೃತ್ ಪ್ರತ್ಯಯಗಳು— ಇಗೆ (ಗೆ), ಅವು, ವು, ತ, ವಳಿ, ಲು, ಅ, ಅತೆ, ಕೆ, ಅಪು ಮಣಿಗೆ ಮೊದಲಾದವು; ಈ ಪ್ರತ್ಯಯಗಳು ಸೇರಿದರೆ ಕೃದ್‌ಭಾವನಾಮಗಳಾಗುವವು. ಉದಾ—

ಇಗೆ ಇಲ್ಲವೆ ಗೆ— ಉಡು + ಇಗೆ = ಉಡಿಗೆ; ಉಡು+ಗೆ=ಉಡುಗೆ; ತೊಡಿಗೆ, ತೊಡುಗೆ; ನಂಬಿಗೆ ನಂಬುಗೆ; ಹಾಸಿಗೆ, ಹಾಸುಗೆ ಮುಂ.

ಅವು—ಕಳು+ಅವು=ಕಳವು, ಸೆಳವು, ಮರವು, ಗೆಲವು, ನಿಲವು, ಒಲವು.

ವು— ನೋ + ವು = ನೋವು, ದಣಿವು, ಸಾವು, ಅರಿವು, ಸುಳಿವು, ಬಿಡುವು, ಹಸಿವು, ಮರೆವು.

ತ— ಕುಣಿ+ತ=ಕುಣಿತ, ಇರಿತ, ಒದೆತ, ಕುದಿತ, ಮಣಿತ, ಗೆಯ್ತ, ಮುಗಿತ.

ವಳಿ— ನಡೆ+ವಳಿ=ನಡೆವಳಿ, ಸಲುವಳಿ, ನುಡಿವಳಿ (ಪ್ರತಿಜ್ಞೆ).

ಲು— ಕೊಯ್ಯು+ಲು=ಕೊಯ್ಲು, ಹೊಯ್ಲು, ಸುಯ್ಲು, ಅಡಕಿಲು, ಮುಗ್ಗಲು, ತುಳಿಕಲು (ಲು ಸೇರಿದಾಗ ಉಂಟಾದ ಸಂಧಿಕಾರ್ಯಗಳನ್ನು ಸಂದರ್ಭದಿಂದ ತಿಳಿದುಕೊಳ್ಳಬೇಕು.)

ಅ— ಆಡು + ಅ= ಆಟ, ನೋಟ, ಮಾಟ; ಊಡು + ಅ=ಊಟ, ಬೇಡು + ಅ= ಬೇಟ; ಕೂಡು+ಅ=ಕೂಟ, ಕಾಟ, ಓಟ, ಎಚ್ಚರ, ಬೇಸರ, ಆಸರ.

ಅತೆ— ನಡೆ+ ಅತೆ=ನಡತೆ, ಅಳತೆ.

ಕೆ— ಕಲಿ+ಕೆ=ಕಲಿಕೆ, ಹರಸು+ಕೆ=ಹರಕೆ, (ಸು ಕಡೆಯಲ್ಲುಳ್ಳ ಕೆಲ ಧಾತುಗಳ ಸು ಲೋಪವಾಗುವದು.) ಬಯಸು+ಕೆ=ಬಯಕೆ, ಬೆರಸು+ಕೆ= ಬೆರಕೆ.

ಅಪು—ನೆನೆ+ಅಪು=ನೆನಪು; ಹೊಳಪು; ತೆರಪು.

ವಣಿಗೆ—ಬರೆ+ವಣಿಗೆ=ಬರೆವಣಿಗೆ; ಮೆರೆವಣಿಗೆ, ಉರಿವಣಿಗೆ, ಬೆಳೆವಣಿಗೆ.

ಧಾತುಸ್ವರೂಪದಲ್ಲಿಯೇ ಕೆಲವು ಧಾತುಗಳ ಕೃದ್ ಭಾವನಾಮಗಳಾಗುವವು. ಉದಾ—ಹುಟ್ಟು, ತಪ್ಪು, ನಡೆ, ನುಡಿ ಬೆಳೆ, ಕಟ್ಟು, ಗುದ್ದು, ಉರಿ, ಓದು, ಕುದಿ ಮುಂ.

ಪ್ರಯೋಗ—ಹುಟ್ಟಿನಿಂದ ಕಿವುಡನು; ಆತನು ತಪ್ಪನ್ನು ಮಾಡಿದನು; ನಡೆನುಡಿಗಳು ಒಳ್ಳೆಯವಿರಬೇಕು; ಮುಂತಾದ ವಾಕ್ಯಗಳಲ್ಲಿ ಹುಟ್ಟು ತಪ್ಪು ಮುಂತಾದವು ಕೃದ್ ಭಾವನಾಮಗಳಾಗಿವೆ.

ಇವಲ್ಲದೆ ನಗೆ, ಬೇಗೆ, ಮುನಿಸು, ತಾಳ್ಮೆ, ಮೊಳಕೆ, ಕಾಣಿಕೆ, ಸೈರಣೆ, ತಿಳಿವಳಿಕೆ, ಕಾವಲು, ಮೊದಲಾದ ಹಲವು ಕೃದ್ ಭಾವನಾಮಗಳುಂಟು. (ಉದಾಹರಣಗಳಿಂದ ಪ್ರತ್ಯಯವನ್ನೂ ಸಂಧಿಕಾರ್ಯಗಳನ್ನೂ ತಿಳಿದುಕೊಳ್ಳಬೇಕು.)

ಭಾವಾರ್ಥಕ ಪ್ರತ್ಯಯಗಳು ಸೇರಿದ ಈ ಎಲ್ಲ ರೂಪಗಳು ಕೇವಲ ಕ್ರಿಯೆಯನ್ನು ಹೇಳಬೇಕಾಗಿದ್ದರೂ ಕೆಲವು ರೂಪಗಳು ವಸ್ತುವಾಚಕಗಳೂ ಆಗಿವೆ. ಆಗ ಅವುಗಳನ್ನು ಕೃನ್ನಾಮಗಳೆಂದು ಹೇಳಬೇಕು.

ಉದಾ—ಉಡಿಗೆ=ಉಡುವಿಕೆ ಎಂಬ ಅರ್ಥ; ಮತ್ತು ಬಟ್ಟೆ ಎಂಬ ಅರ್ಥ; ಉಡುವಿಕೆ ಎಂಬ ಅರ್ಥದಲ್ಲಿ ಇದು ಕೃದ್‌ಭಾವನಾಮವು; ಬಟ್ಟೆ ಎಂಬ ಅರ್ಥದಲ್ಲಿ ಕೃನ್ನಾಮವು. ಇದೇ ಮೇರೆಗೆ ಕೊಡಿಗೆ, ಮುಗ್ಗಲು, ಕಾಣಿಕೆ, ಉರಿ, ಮಾಟ, ಬೆಳೆ ಮುಂತಾದವು ಕೃನ್ನಾಮಗಳೂ ಆಗುವವು.

ಕೃದಂತಾವ್ಯಯ—ಅವ್ಯಯದಂತೆ ರೂಪಭೇದವಿಲ್ಲದ ಕೃದಂತಗಳು ಕೃದಂತಾವ್ಯಯಗಳೆನಿಸುವವು.

ಕೃದಂತಾವ್ಯಯಭೇದಗಳು—(೧) ವರ್ತಮಾನಕೃದಂತಾವ್ಯಯ, (೨) ಭೂತಕೃದಂತಾವ್ಯಯ, (೩) ನಿಷೇಧಕೃದಂತಾವ್ಯಯ, (೪) ಭಾವಲಕ್ಷಕ ಕೃದಂತಾವ್ಯಯ, (೫) ಪಕ್ಷಾರ್ಥಕಕೃದಂತಾವ್ಯಯ ಎಂಬ ಐದು ಉಂಟು.

ವರ್ತಮಾನಕೃದಂತಾವ್ಯಯ— ಅನೇಕ ಕ್ರಿಯೆಗಳು ನಡೆದಾಗ ಕೊನೆಗೆ ಹೇಳಿದ ಕ್ರಿಯೆ ಉತ್ತರಕಾಲಕ್ರಿಯೆ; ಮೊದಲು ಹೇಳಿದ ಕ್ರಿಯೆ ಪೂರ್ವಕಾಲ ಕ್ರಿಯೆ. ಪೂರ್ವಕಾಲಕ್ರಿಯೆಯಲ್ಲಿ ವರ್ತಮಾನಕಾಲವು ಇಲ್ಲವೆ ಸಹಭಾವವು ತೋರಿದರೆ ಆ ಧಾತುವಿನ ಮುಂದೆ ಉತ್ತ ಉತ್ತಾ ಪ್ರತ್ಯಯಗಳು ಸೇರುವವು. ಈ ರೂಪಗಳಿಗೆ ವರ್ತಮಾನಕೃದಂತಾವ್ಯಯಗಳೆಂಬ ಹೆಸರು. ಉದಾ—ಸದಾಶಿವನು **ನಗುತ್ತ** ಹೋದನು. ಇಲ್ಲಿ ನಗುವಿಗೆ ಹೋಗುವಿಕೆ ಎಂಬ ಕ್ರಿಯೆಗಳು ನಡೆದಿವೆ. ಹೋಗುವಿಕೆ ಉತ್ತರಕಾಲಕ್ರಿಯೆ. ನಗುವಿಕೆ ಪೂರ್ವಕಾಲಕ್ರಿಯೆ. ಇಲ್ಲಿ ಪೂರ್ವಕಾಲಕ್ರಿಯೆಯಲ್ಲಿ ವರ್ತಮಾನಕಾಲವು (ಸಹಭಾವವು) ತೋರುವದು. ಎಂದರೆ ಹೋಗುವುದೂ ನಗುವುದೂ ಏಕಕಾಲದಲ್ಲಿ (ಕೂಡಿ) ನಡೆದಿವೆ. ಆದುದರಿಂದ ನಗು ಧಾತುವಿನ ಮುಂದೆ ಉತ್ತ ಪ್ರತ್ಯಯವು ಬಂದಿತು. ಇದೇ ಮೇರೆಗೆ— ಮಲ್ಲನು **ಹರಟುತ್ತಾ** ವೇಳೆಯನ್ನು ಕಳೆಯುವನು. ಹುಡುಗರು **ನಗುತ್ತ ಕೆಲೆಯುತ್ತ** ಸಾಲೆಗೆ ಹೋಗುವರು.

ಭೂತಕೃದಂತಾವ್ಯಯ— ಪೂರ್ವಕಾಲಕ್ರಿಯೆಯಲ್ಲಿ ಭೂತಕಾಲವು ತೋರಿದರೆ ಆ ಧಾತುವಿನ ಮುಂದೆ ದು ಇಲ್ಲವೆ ಇ ಪ್ರತ್ಯಯವು ಸೇರುವದು. ಈ ರೂಪಗಳಿಗೆ ಭೂತ ಕೃದಂತಾವ್ಯಯಗಳೆಂಬ ಹೆಸರು. ಉದಾ—ಸದಾಶಿವನು ನಕ್ಕು ಹೇಳಿದನು; (ನಗು+ದು=ನಕ್ಕು). ಸುಬ್ಬನು ಮಲಗಿ ಎದ್ದನು. (ಮಲಗು+ಇ=ಮಲಗಿ) ಹುಡುಗರು ನಕ್ಕು ಕೆಲೆದು ಸಾಲೆಗೆ ಹೋದರು.

ಭೂತಕಾಲದ ದ ಆಗಮವು ಬಂದಾಗ ವಿಕಾರಹೊಂದುವ ಧಾತುಗಳನ್ನು ಬಿಟ್ಟು ಉಳಿದ ದ್ವಿಲಘುಗಳಲ್ಲದ ಉಕಾರಾಂತ ಧಾತುಗಳ ಮುಂದೆ, ಇ ಪ್ರತ್ಯಯವು ಸೇರುವುದು. ಉಳಿದ ಎಲ್ಲ ಧಾತುಗಳ ಮುಂದೆ ದು ಪ್ರತ್ಯಯವು ಸೇರುವದು. ಉದಾ—

ಇ ಪ್ರತ್ಯಯಕ್ಕೆ— ಕದಡು+ಇ=ಕದಡಿ ; ಕೊರಗು+ಇ=ಕೊರಗಿ ; ಬಾಳು+ಇ=ಬಾಳಿ; ಗುದ್ದು+ಇ=ಗುದ್ದಿ; ನುಂಗು+ಇ=ನುಂಗಿ.

ದು ಪ್ರತ್ಯಯಕ್ಕೆ— ಬರು+ದು=ಬಂದು; ಕೊಡು+ದು=ಕೊಟ್ಟು; ಕೊಲ್ಲು+ದು=ಕೊಂದು; ತೋ+ದು=ತೋದು; ಸಲ್ಲು+ದು=ಸಂದು.

ಭೂತಕಾಲದ ದ ಆಗಮವು ಬಂದಾಗ ಆಗುವ ವಿಕಾರಗಳು ದು ಪ್ರತ್ಯಯವು ಬಂದಾಗಲೂ ಆಗುವವು. (ದ ಆಗಮವು ಬಂದಾಗ ಆಗುವ ವಿಕಾರಗಳನ್ನು ಕ್ರಿಯಾಪದ ಪ್ರಕರಣದಲ್ಲಿ ನೋಡಿರಿ.)

ನಗು+ದು=ನಕ್ಕು ; ಹೊರು+ದು+ಹೊತ್ತು ; ಸಾ+ದು=ಸತ್ತು ; ಮೀ+ದು=ಮಿಂದು; ಬಿಸುಡು+ದು=ಬಿಸುಟು; ಹೊರಡು+ದು=ಹೊರಟು; ಬೇ+ದು=ಬೆಂದು; ಗೆಲ್ಲು+ದು=ಗೆದ್ದು; ಕೀಳು+ದು=ಕಿತ್ತು; ಕಾಣು+ದು=ಕಂಡು ಮುಂ.

(೩) **ನಿಷೇಧಕೃದಂತಾವ್ಯಯ**—ಪೂರ್ವಕಾಲಕ್ರಿಯೆಯ ನಿಷೇಧವು ಎಂದರೆ ಪೂರ್ವಕಾಲಕ್ರಿಯೆ ನಡೆಯುವದಿಲ್ಲವೆಂಬ ಅರ್ಥವು ತೋರಿದರೆ ಆ ಧಾತುವಿನ ಮುಂದೆ ಅದೆ ಪ್ರತ್ಯಯವು ಸೇರುವದು. ಈ ರೂಪಗಳಿಗೆ ನಿಷೇಧ ಕೃದಂತಾವ್ಯಯಗಳೆಂಬ ಹೆಸರು. ಉದಾ— ಸದಾಶಿವನು **ನಗದೆ** ಹೋದನು. (ನಗು+ಅದೆ). ಹುಡುಗರು **ನಗದೆ ಕೆಲೆಯದೆ** ಸಾಲೆಗೆ ಹೋದರು. ನೆಯ್ಕಾರರು **ಬೇಸರದೆ ಹರಟೆದೆ** ಕೆಲಸವ ಮಾಡುವರು.

ತರು, ಬರು ಧಾತುಗಳ ರೂಪಗಳು ತಾರದೆ, ಬಾರದೆ ಎಂದು ಆಗುವವು.

(೪) **ಭಾವಲಕ್ಷಕಕೃದಂತಾವ್ಯಯ**—ಒಂದು ಕ್ರಿಯೆ ಇನ್ನೊಂದು ಕ್ರಿಯೆಗೆ ಸೂಚಕವಾಗಿದ್ದರೆ ಇಲ್ಲವೆ ಕಾರಣವಾಗಿದ್ದರೆ ಇಲ್ಲವೆ ಉದ್ದೇಶ್ಯವಾಗಿದ್ದರೆ ಪೂರ್ವಕಾಲ ಕ್ರಿಯಾವಾಚಕ (ಮೊದಲು ನಡೆದ ಕ್ರಿಯೆಯನ್ನು ಹೇಳುವ) ಧಾತುವಿನ ಮುಂದೆ ಅಲು, ಎ ಪ್ರತ್ಯಯಗಳು ಸೇರುವವು. ಇವಕ್ಕೆ ಭಾವಲಕ್ಷಕಕೃದಂತಾವ್ಯಯಗಳೆಂಬ ಹೆಸರು. (ಭಾವಲಕ್ಷಕ= ಇನ್ನೊಂದು ಕ್ರಿಯೆಯನ್ನು ಸೂಚಿಸುವ ;) ಉದಾ—

ಸೂಚಕಕ್ರಿಯೆಗೆ— ಅಲುಪ್ರತ್ಯಯಕ್ಕೆ— ಗಾಯಕನು **ಹಾಡಲು** ಅರಸನು ಎದ್ದನು. (ಹಾಡುವ ಕ್ರಿಯೆಯು, ಏಳುವ ಕ್ರಿಯೆಗೆ ಸೂಚಕವು. ಹಾಡುವಾಗ ಎದ್ದನೆಂದು ಅರ್ಥವು.) ಆಕಳು **ಹಿಂಡಲು** ಬಂದ ಭಿಕ್ಷುಕನು. (ಆಕಳು ಹಿಂಡುವಾಗ ಬಂದ ಎಂಬ ಅರ್ಥವು.) ಎ ಪ್ರತ್ಯಯಕ್ಕೆ—ಕಣ್ಣಾರೆ (ಕಣ್ಣು+ಆರೆ) ಕಂಡನು; ವೈಯುರಿಯೆ ಹೊಡೆದನು.

ಕಾರಣಕ್ರಿಯೆಗೆ—ಮಳೆ **ಆಗಲು** ಬೆಳೆ ಬಂದಿತು. ಇಲ್ಲಿ ಆಗುವ ಕ್ರಿಯೆ, ಬರುವ ಕ್ರಿಯೆಗೆ ಕಾರಣವು ವಿದ್ಯೆಯನ್ನು **ಕಲಿಯಲು** ಬುದ್ಧಿ ಬಂದಿತು (ಕಲಿಯುವ ಕ್ರಿಯೆಯು, ಬರುವ ಕ್ರಿಯೆಗೆ ಕಾರಣವು.)

ಉದ್ದೇಶ್ಯಕ್ರಿಯೆಗೆ—ಪುಸ್ತಕವನ್ನು **ತರಲು** ಮನೆಗೆ ಹೋದನು. (ತರುವ ಕ್ರಿಯೆಯು, ಹೋಗುವ ಕ್ರಿಯೆಯ ಉದ್ದೇಶ್ಯವಾಗಿದೆ.) ಭಿಕ್ಷುಕನು ಬಟ್ಟೆಯ **ಬೇಡಲು** ಬಂದನು. (ಬೇಡುವ ಕ್ರಿಯೆಯು, ಬರುವ ಕ್ರಿಯೆಯ ಉದ್ದೇಶ್ಯವಾಗಿದೆ.)

ಈ ಉದ್ದೇಶ್ಯಕ್ರಿಯಾರ್ಥದಲ್ಲಿ ಅಲಿಕ್ಕೆ ಪ್ರತ್ಯಯವೂ ಸೇರುವದು. ಉದಾ—ಪುಸ್ತಕವನ್ನು ತರಲಿಕ್ಕೆ ಮನೆಗೆ ಹೋದನು. ಭಿಕ್ಷುಕನು ಬಟ್ಟೆಯ ಬೇಡಲಿಕ್ಕೆ ಬಂದನು.

ಅಲು ಪ್ರತ್ಯಯದ ಲು ಎಂಬುದು ಕೆಲವೆಡೆಯಲ್ಲಿ ಲೋಪಹೊಂದು ವದು. ಉದಾ— ಬೇಡಲು ಬಂದನು-ಬೇಡಬಂದನು, ಕಾಣಲು ಬರುವದು-ಕಾಣಬರುವದು, ಹೋಗಲು ಹೇಳಿದನು-ಹೋಗಹೇಳಿದನು; ಬರ ಮಾಡಿದರು ಮುಂ.

(೬) **ಪಕ್ಷಾರ್ಥಕಕೃದಂತಾವ್ಯಯ**— ಧಾತುಗಳ ಮುಂದೆ ಆರೆ ಪ್ರತ್ಯಯವು ಸೇರಿದರೆ ಪಕ್ಷಾರ್ಥಕಕೃದಂತಾವ್ಯಯಗಳಾಗುವವು. ಅಲ್ಲಿ ಭೂತಕಾಲವು ತೋರುತ್ತಿದ್ದರೆ ಆರೆ ಪ್ರತ್ಯಯದ ಹಿಂದೆ ದ ಆಗಮವೂ ವರ್ತಮಾನ ಭವಿಷ್ಯತ್ಕಾಲಗಳು ತೋರುತ್ತಿದ್ದರೆ ವ ಆಗಮವೂ ಬರುವವು.

ಭೂತಕಾಲದ ಪಕ್ಷಾರ್ಥಕಾವ್ಯಯ — ಹೋಗು + ದ + ಆರೆ = **ಹೋದರೆ**; (ಹೋದರೆ=ಹೋದಪಕ್ಷದಲ್ಲಿ). (ದ ಬಂದಾಗ ಆಗುವ ವಿಕಾರಗಳನ್ನು ಕ್ರಿಯಾಪದ ಪ್ರಕರಣದಲ್ಲಿ ನೋಡಿರಿ.) ಬರು+ದ+ಆರೆ=ಬಂದರೆ; ಕೊಟ್ಟರೆ; ನಕ್ಕರೆ; ಕಿತ್ತರೆ ಮುಂ.

ವರ್ತಮಾನಭವಿಷ್ಯತ್ಕಾಲಗಳ ಪಕ್ಷಾರ್ಥಕಾವ್ಯಯ— ಹೋಗು+ವ+ಅರೆ=ಹೋಗುವರೆ (ಹೋಗುವರೆ=ಹೋಗುವ ಪಕ್ಷದಲ್ಲಿ.) ಬರು+ವ+ಅರೆ=ಬರುವರೆ; ಮಾಡುವರೆ; ಕೇಳುವರೆ ಮುಂ.

ಬೇರೆ ಕಾಲಾರ್ಥಕ ಕೃದಂತಾವ್ಯಯಗಳು— ಧಾತುವಿನ ಮುಂದೆ ಉವದೂ ಎಂಬ ಪ್ರತ್ಯಯವು ಸೇರಿದರೆ ಕೂಡಲೆ ಇನ್ನೊಂದು ಕ್ರಿಯೆ ನಡೆಯಿತೆಂಬ ಅರ್ಥವಾಗುವದು. ಉದಾ— ನಾನು ಹೋಗುವದೂ ಅವನು ಎದ್ದನು. (ನಾನು ಹೋದ ಕೂಡಲೆ ಅವನು ಎದ್ದನೆಂಬ ಅರ್ಥವು.)

ಬಂದಲ್ಲಿ—(ಭೂತಪಕ್ಷಾರ್ಥಕ); ಬರುವಲ್ಲಿ- (ಭವಿ, ಪಕ್ಷಾರ್ಥಕ)

ತದ್ಧಿತಾಂತಗಳು

ನಾಮಗಳ ಮುಂದೆ ಎರಡು ತರದ ಪ್ರತ್ಯಯಗಳು ಕಾಣಬರುವವು. ಅವು—೧. **ನಾಮವಿಭಕ್ತಿಪ್ರತ್ಯಯಗಳು.** ೨. **ತದ್ಧಿತಪ್ರತ್ಯಯಗಳು.**

ತದ್ಧಿತಪ್ರತ್ಯಯ—ನಾಮವಿಭಕ್ತಿಪ್ರತ್ಯಯಗಳನ್ನು ಬಿಟ್ಟು ನಾಮಗಳ ಮುಂದೆ ಕಾಣಬರುವ ಎಲ್ಲ ಪ್ರತ್ಯಯಗಳಿಗೆ ತದ್ಧಿತಪ್ರತ್ಯಯಗಳೆಂಬ ಹೆಸರು.

ತದ್ಧಿತಾಂತ—ತದ್ಧಿತಪ್ರತ್ಯಯಗಳು ನಾಮಪದಗಳ ಮುಂದೆ ಸೇರುವವು. ತದ್ಧಿತಪ್ರತ್ಯಯಗಳು ಸೇರಲು ಉಂಟಾಗುವ ರೂಪಗಳು ತದ್ಧಿತಾಂತಗಳೆನಿಸುವವು. ಉದಾ— ಸಾಲವನ್ನು ಎಂಬ ನಾಮಪದದ ಮುಂದೆ ಮಾಡುವವನು ಎಂಬ ಅರ್ಥದಲ್ಲಿ ಗಾರ ಎಂಬ ಪ್ರತ್ಯಯವು ಸೇರಲು (ಸಾಲವನ್ನು+ಗಾರ) ಸಾಲಗಾರ ಎಂಬ ತದ್ಧಿತಾಂತವಾಗುವದು. ತದ್ಧಿತಪ್ರತ್ಯಯವು ಸೇರುವಾಗ ಹಿಂದಿನ ವಿಭಕ್ತಿಪ್ರತ್ಯಯಕ್ಕೆ ಲೋಪವಾಗುವದು.

ತದ್ಧಿತಾಂತಭೇದ— ತದ್ಧಿತಾಂತಗಳಲ್ಲಿ **ತದ್ಧಿತನಾಮ, ತದ್ಧಿತಭಾವನಾಮ, ತದ್ಧಿತಾವ್ಯಯ** ಎಂಬ ಮೂರು ಭೇದಗಳುಂಟು.

ತದ್ಧಿತನಾಮ—ಅನೆಯ ಎಂಬ ಪ್ರತ್ಯಯವು ಸಂಖ್ಯೇಯವಾಚಕ ಪರಿಮೇಯವಾಚಕಗಳಿಗೆ ಸೇರಲು ವಸ್ತುಗಳ ಅನುಕ್ರಮವನ್ನು ತೋರಿಸುವ ತದ್ಧಿತನಾಮಗಳಾಗುವವು. ಇವುಗಳನ್ನು **ಕ್ರಮವಾಚಕಗಳೆಂದೂ** ಕೆಲವರು ಹೇಳುವರು. ಉದಾ— ಒಂದನೆಯ, ನಾಲ್ಕನೆಯ, ಅಷ್ಟನೆಯ, ಇಷ್ಟನೆಯ ಮುಂತಾದವು.

ತದ್ಧಿತಪ್ರತ್ಯಯಗಳು— ಗಾರ, ಕಾರ, ವಂತ, ಇಗ, ವಳ, ಅಡಿಗ, ಗುಳಿ, ಆಳಿ ಮೊದಲಾದವು ತದ್ಧಿತಪ್ರತ್ಯಯಗಳು. ಈ ಪ್ರತ್ಯಯಗಳಿಂದ* ತದ್ಧಿತನಾಮಗಳಾಗುವವು. ತದ್ಧಿತಪ್ರತ್ಯಯಗಳು ಯಾವ ಯಾವ ಅರ್ಥಗಳಲ್ಲಿ ಸೇರುವವೆಂಬದನ್ನು ಸಂದರ್ಭದಿಂದ ತಿಳಿದುಕೊಳ್ಳಬಹುದು.

ಗಾರ— ಸಾಲವನ್ನು+ಗಾರ (ಮಾಡುವವ) ಸಾಲಗಾರ, ಮೋಸಗಾರ, ಬಳೆಗಾರ, ಹೂಗಾರ, ಕಂಚುಗಾರ, ಬೇಟೆಗಾರ, ಸಮ್ಮಗಾರ, ಕೊಲೆಗಾರ, ಮಾಲೆಗಾರ.

ಕಾರ-ಅಂಗಡಿಯನ್ನು+ಕಾರ (ಇಟ್ಟವ) ಅಂಗಡಿಕಾರ, ಓಲೆಯನ್ನು+ಕಾರ (ಒಯ್ಯುವವ) ಓಲೆಕಾರ, ಕೋಲುಕಾರ (ಹಿಡಿದವ).

ವಂತ— ಹಣವು+ವಂತ (ಬಹಳ ಉಳ್ಳವ) ಹಣವಂತ, ಗುಣವಂತ, ಸಿರಿವಂತ, ಆಯುಷ್ಯವಂತ.

ಇಗ— ಕನ್ನಡ+ಇಗ=ಕನ್ನಡಿಗ, ಹಡಪಿಗ, ಶಿಲ್ಪಿಗ, ಸಂಗಡಿಗ, ಗಾಣಿಗ, ಗಂದಿಗ.

ವಳ— ಮಡಿವಳ, ಹಡಪವಳ, (ಮಾಡುವವ ಮುಂತಾದ ಅರ್ಥ.)

ಅಡಿಗ— ಹೂವಡಿಗ, ಹಾವಡಿಗ, (ಮಾರುವವ ಮುಂ. ಅರ್ಥ.)

ಗುಳಿ— ಆಟವು+ಗುಳಿ (ಸ್ವಭಾವವಾದವನು)=ಆಟಗುಳಿ, ಲಂಚಗುಳಿ, ಸಾಲಗುಳಿ. ಆಳಿ— ಮಾತಾಳಿ, ಜೂದಾಳಿ ಮುಂ.

ತದ್ಧಿತವಿಶೇಷಣ— ತದ್ಧಿತನಾಮಗಳು ವಿಶೇಷಣಗಳಾದಾಗ ಅವಕ್ಕೆ ತದ್ಧಿತವಿಶೇಷಣಗಳೆಂಬ ಹೆಸರು. ಉದಾ— ಸಿರಿವಂತನಾದ ರಾಮನು; ಅಂಗಡಿಕಾರನಾದ ಸೆಟ್ಟಿಯು ಮುಂ.

ಇತಿ, ಇತ್ತಿ, ಗಿತ್ತಿ, ಇ, ಎ ಪ್ರತ್ಯಯಗಳು ಸೇರಿದರೆ ಸ್ತ್ರೀವಾಚಕ ತದ್ಧಿತನಾಮಗಳಾಗುವವು. ಈ ಪ್ರತ್ಯಯಗಳಿಗೆ ಸ್ತ್ರೀಪ್ರತ್ಯಯಗಳೆಂಬ ಹೆಸರು.

ಉದಾ— ಇತಿ-ಬೀಗಿತಿ, ತಳವಾರಿತಿ, ಅಂಗಡಿಕಾರಿತಿ, ಹೆಂಡಿತಿ (ಪೆಂಡಿತಿ=ಪೆಂಡ+ಇತಿ), ಹೆಂಡತಿಯೆಂದು ವಾಡಿಕೆಯುಂಟು.

---

* ಸಂಸ್ಕೃತ ಶಬ್ದಗಳ ಮೇಲೆಯೂ ಈ ಪ್ರತ್ಯಯಗಳಲ್ಲಿ ಕೆಲವು ಸೇರುವವು.

ಇತ್ತಿ—ಒಕ್ಕಲಿಗಿತ್ತಿ, ಗಾಣಿಗಿತ್ತಿ.

ಗಿತ್ತಿ—ಸೂಲಗಿತ್ತಿ, ಅಗಸಗಿತ್ತಿ, ಹಾದರಗಿತ್ತಿ.

ಇ—ಮುದುಕಿ, ಹುಡುಗಿ, ಹೆಳವಿ, ಕುರುಡಿ, ಅರಸಿ.

ಎ—ಜಾಣೆ, ಹೆಡ್ಡೆ, ಬುದ್ಧಿವಂತೆ, ಗುಣವಂತೆ, ಚೆಲುವೆ, ಹೆಳವೆ.

ಸ್ತ್ರೀ ಪ್ರತ್ಯಯುಗಳು ಕೆಲವೆಡೆಯಲ್ಲಿ ಹೆಂಡತಿ ಎಂಬ ಅರ್ಥವನ್ನು ಕೆಲವೆಡೆಯಲ್ಲಿ ಆ ಜಾತಿಯು ಇಲ್ಲವೆ ಆ ಉದ್ಯೋಗ ಮಾಡುವ ಸ್ತ್ರೀ ಎಂಬ ಅರ್ಥವನ್ನು ಹೇಳುವವು. ಉದಾ—

ಹೆಂಡತಿ ಎಂಬ ಅರ್ಥಕ್ಕೆ—ಅರಸಿತಿ (ಅರಸನ ಹೆಂಡತಿ), ತಳವಾರಿತಿ, ಗೌಡಿತಿ ಮುಂ.

ಸ್ತ್ರೀ ಎಂಬ ಅರ್ಥಕ್ಕೆ— ಬ್ರಾಹ್ಮಣಿತಿ [ಬ್ರಾಹ್ಮಣ ಸ್ತ್ರೀ], ಅಗಸಗಿತ್ತಿ, ಹಾದರಗಿತ್ತಿ ಮುಂ.

ತದ್ಧಿತಭಾವನಾಮ—ಭಾವ ಎಂದರೆ ಇಲ್ಲಿ ಗುಣ, ಧರ್ಮ; ಭಾವವನ್ನು ಹೇಳುವ ತದ್ಧಿತನಾಮಗಳು ತದ್ಧಿತಭಾವನಾಮಗಳೆನಿಸುವವು.

ತನ, ಇಕೆ, ಉ, ಪು, ವಳಿ ಮುಂತಾದ ಪ್ರತ್ಯಯಗಳು ಸೇರಿದರೆ ತದ್ಧಿತಭಾವನಾಮಗಳಾಗುವವು. ಉದಾ—

ತನ— ನೆಂಟತನ, ಬೇಗತನ, ಸರಳತನ, ಜಾಣತನ, ದೊಡ್ಡತನ, ಹಿರಿಯತನ, ಕಿರಿಯತನ, ಮೂರ್ಖತನ.

ಇಕೆ— ಗೌಡಿಕೆ, ಬ್ರಾಹ್ಮಣಿಕೆ.

ಪು—[ಕರಿದು+ಪು=] ಕಪ್ಪು [ಬಿಳಿದು+ಪು=] ಬಿಳಿಪು [ತಣ್ಣಿತು+ಪು=] ತಂಪು, [ನುಣ್ಣಿತು+ಪು=] ನುಣುಪು, [ಕಿಸಿದು+ಪು=] ಕೆಂಪು, ಇನಿದು+ಪು=ಇಂಪು, ಬಿಸಿದು+ಪು=ಬಿಸುಪು.

ಉ— [ಕುರುಡ+ಉ] ಕುರುಡು, ಕಿವುಡು. [ಮುದುಪ+ಉ= ಮುದುಪು [ಮುಪ್ಪು]. ವಳಿ— ಗೊತ್ತು+ವಳಿ=ಗೊತ್ತುವಳಿ.

ತದ್ಧಿತಾವ್ಯಯ—(೧) ಷಷ್ಠ್ಯಂತನಾಮಪದಗಳ ಮುಂದೆ ಹೋಲಿಕೆಯನ್ನು ತೋರಿಸುವದಕ್ಕೆ ಅಂತೆ, ಹಾಗೆ ಎಂಬಿವು ಸೇರುವವು. ಉದಾ—ಕಮಲದ+ಅಂತೆ=ಕಮಲದಂತೆ; ಚಂದ್ರನ ಹಾಗೆ; ರಾಮನಂತೆ.

೧. (ಅ) ಕೃನ್ನಾಮಗಳ ಮುಂದೆಯೂ ಅಂತೆ ಹಾಗೆ ಎಂಬಿವು ಸೇ
ವವು. ಉದಾ— ಕೊರೆದ+ಅಂತೆ=ಕೊರೆದಂತೆ; ನಕ್ಕ+ಅಂತೆ=ನಕ್ಕಂತೆ
ಬರುವ+ಹಾಗೆ=ಬರುವ ಹಾಗೆ; ಕೊಲ್ಲದ+ಹಾಗೆ=ಕೊಲ್ಲದ ಹಾಗೆ.

೨. ಷಷ್ಠ್ಯಂತಗಳ ಮುಂದೆ ಅವಧಿಯನ್ನು ತೋರಿಸುವದಕ್ಕೆ ವರೆಗೆ
ತನಕ ಎಂಬಿವು ಸೇರುವವು. ಉದಾ—ಸಂಜೆಯವರೆಗೆ; ನಾಳೆಯತನಕ

೩. ಚತುರ್ಥ್ಯಂತಗಳ ಮುಂದೆ ಉದ್ದೇಶ್ಯಾರ್ಥದಲ್ಲಿ ಓಸುಗ, ಓಸ್ಕ
ಎಂಬಿವು ಸೇರುವವು. ಉದಾ—ರಾಮನಿಗೆ+ಓಸುಗ=ರಾಮನಿಗೋಸುಗ
ಊಟಕ್ಕೋಸ್ಕರ; ಮಾಡಿದ್ದಕ್ಕೋಸುಗ, ಹೋಗುವದಕ್ಕೋಸ್ಕರ ಮುಂ.

೪. ಷಷ್ಠ್ಯಂತಗಳ ಮುಂದೆ ಉದ್ದೇಶ್ಯಾರ್ಥದಲ್ಲಿ ಸಲುವಾಗಿ ಎಂಬದು
ಸೇರುವದು. ಉದಾ— ರಾಮನಸಲುವಾಗಿ, ಆಟದಸಲುವಾಗಿ; ಬಂದದ್ದ
ಸಲುವಾಗಿ ಮುಂ.

ಜಾಣ+ಮೆ=ಜಾಣ್ಮೆ ಎಂಬ ತದ್ಧಿತಭಾವನಾಮವೂ, ಒಂದು+ಮೆ
ಒಮ್ಮೆ ಎಂಬ ಆವೃತ್ತಿವಾಚಕ ತದ್ಧಿತಾವ್ಯಯವೂ ಬಳಕೆಯಲ್ಲಿರುವವು.

---

೮. ಸಮಾಸ

ಸಮಾಸ— ಎರಡು ಇಲ್ಲವೆ ಹಲವು ಪದಗಳು ಸೇರಿ ಒಂದು ಅರ್ಥ
ವನ್ನು ಹೇಳುವ ಒಂದು ಪದವಾಗುವದು ಸಮಾಸವೆನಿಸುವದು.

ಹಣೆಯಲ್ಲಿ, ಕಣ್ಣು ಎಂಬ ಎರಡು ಪದಗಳು ಸೇರಿ ಹಣೆಗಣ್ಣನು
ಎಂಬ ಒಂದು ಪದವಾಗುವದು. ಹಣೆಯಲ್ಲಿ ಎಂಬ ಪದದ ಅರ್ಥವು ಬೇರೆ
ಕಣ್ಣು ಎಂಬ ಪದದ ಅರ್ಥವು ಬೇರೆ; ಈ ಎರಡು ಪದಗಳೂ ಸೇರಿ ಸಮಾಸ
ವಾದಾಗ ಶಿವನು ಎಂಬ ಬೇರೊಂದು ಅರ್ಥವಾಗುವದು. ಆದುದರಿಂ
'ಹಣೆಗಣ್ಣನು' ಎಂಬದು ಸಮಾಸವು. ಬೇರೆ ಉದಾ—ಅರಮನೆ; ತು
ಗಾಲು, ಅಡಿದಾವರೆ; ಚಕ್ರಪಾಣಿ.

ಸಮಾಸದಲ್ಲಿ ಮೊದಲಿದ್ದ ವಿಭಕ್ತಿಪ್ರತ್ಯಯಗಳು ಲೋಪಹೊಂದು
ವವು. ಹಣೆಗಣ್ಣನು ಎಂಬಲ್ಲಿ ಹಣೆಯಲ್ಲಿ ಮತ್ತು ಕಣ್ಣು ಎಂಬ ಪದಗ
ವಿಭಕ್ತಿಪ್ರತ್ಯಯಗಳು ಲೋಪಹೊಂದಿವೆ.

ವಿಗ್ರಹ-ಸಮಸ್ತಪದದ ಅರ್ಥವನ್ನು ತಿಳುಹುವ ವಾಕ್ಯವು ವಿಗ್ರಹವು. ಹಣೆಯಲ್ಲಿ ಕಣ್ಣು ಯಾವನಿಗೋ ಅವನು ಎಂಬ ವಾಕ್ಯವು ಹಣೆಗಣ್ಣನು ಎಂಬ ಸಮಸ್ತಪದದ ವಿಗ್ರಹವು. [ಸಮಸ್ತ=ಸಮಾಸವಾದ].

ಎರಡು ಪದಗಳಿಂದಾದ ಸಮಾಸದಲ್ಲಿ ಮೊದಲಿನದಕ್ಕೆ **ಪೂರ್ವಪದ** ವೆಂದೂ ಎರಡನೆಯದಕ್ಕೆ **ಉತ್ತರಪದ**ವೆಂದೂ ಹೆಸರು.

ಸಮಾಸಭೇದ—ಸಮಾಸಗಳಲ್ಲಿ ತತ್ಪುರುಷ, ಕರ್ಮಧಾರಯ, ಬಹುವ್ರೀಹಿ, ದ್ವಂದ್ವ, ಅಂಶಿಸಮಾಸ, ಕ್ರಿಯಾಸಮಾಸ ಎಂಬ ಆರು ಭೇದಗಳು.

ತತ್ಪುರುಷಸಮಾಸ—ತೃತೀಯಾದಿ ವಿಭಕ್ತ್ಯಂತ ಪದಗಳು ಉತ್ತರಪದದೊಡನೆ ಕೂಡಿ ಆಗುವ ಸಮಾಸವು ತತ್ಪುರುಷವು. ಈ ಸಮಾಸದಲ್ಲಿ ಉತ್ತರಪದದ ಅರ್ಥವು* ಮುಖ್ಯವಾಗಿರುವದು. ಉದಾ—

ವಿಗ್ರಹ.	ಸಮಾಸ.	ಸಮಾಸದ ಹೆಸರು.	
ಕೈಯಿಂದ ಕಾಣಿಕೆ	ಕೈಗಾಣಿಕೆ, ಮೈಗಲಿ	ತೃತೀಯಾತತ್ಪುರುಷ	
ಕೈಯ ಬೆರಳು	ಕೈಬೆರಳು	ಷಷ್ಠೀ	,,
ಅರಸನ ಆಳುಗಳು	ಅರಸಾಳುಗಳು	,,	,,
ಹೊಟ್ಟೆಯಲ್ಲಿ ಕಿಚ್ಚು	ಹೊಟ್ಟೆಕಿಚ್ಚು	ಸಪ್ತಮೀ	,,
ಬಿಸಿಲಲ್ಲಿ ಮಳೆ	ಬಿಸಿಲ್ಮಳೆ [ಬಿಸಿಲು ಮಳೆ]	,,	,,

[ಷಷ್ಠೀತತ್ಪುರುಷವೊಂದು ಕನ್ನಡದಲ್ಲಿ ವಿಶೇಷವಾಗಿದೆ. ಉಳಿದ ತತ್ಪುರುಷಗಳು ಕಡಿಮೆ.]

ಕರ್ಮಧಾರಯ ಸಮಾಸ—ವಿಶೇಷಣ ವಿಶೇಷ್ಯಗಳು, ಉಪಮಾನೋಪಮೇಯಗಳು ಮುಂತಾದವು ಸೇರಿ ಆಗುವ ಸಮಾಸವು ಕರ್ಮಧಾರಯವು. ಇದರಲ್ಲಿ ಉತ್ತರಪದದ ಅರ್ಥವು ಮುಖ್ಯವಾಗಿರುವದರಿಂದ ಇದು ತತ್ಪುರುಷ ಭೇದವು.

---

*ಸಮಾಸದಲ್ಲಿ ಕ್ರಿಯೆಗೆ ಸಂಬಂಧಿಸಿದ ಪದವು ಮುಖ್ಯವು. ಉದಾ—ಹೂದೋಟವನ್ನು ಹೊಕ್ಕನು ಎಂಬಲ್ಲಿ ಹೋಗುವ ಕ್ರಿಯೆಗೆ ಸಂಬಂಧಿಸುವ ತೋಟವನ್ನು ಎಂಬದು ಮುಖ್ಯವು. ವಿಶೇಷಣದಿಂದಲೂ ಮುಖ್ಯ ಪದವನ್ನು ನೋಡಬಹುದು. ಉದಾ—ಬಿಳಿಯ ತಲೆಗೂದಲು ಎಂಬಲ್ಲಿ ಬಿಳಿಯ ಎಂಬದು ಕೂದಲಿಗೆ ವಿಶೇಷಣವು. ಆದದರಿಂದ ಇಲ್ಲಿ ಕೂದಲು ಮುಖ್ಯವು.

ಕ. ಧಾ. ಭೇದ— ಇದರಲ್ಲಿ ವಿಶೇಷಣಪೂರ್ವಪದ, ವಿಶೇಷಣೋತ್ತರಪದ, ವಿಶೇಷಣೋಭಯಪದ, ಸಂಖ್ಯಾಪೂರ್ವಪದ, ಉಪಮಾನಪೂರ್ವಪದ, ಉಪಮಾನೋತ್ತರಪದ, ಸಂಭಾವನಾಪೂರ್ವಪದ, ಅವಧಾರಣಾಪೂರ್ವಪದ ಎಂಬ ೮ ಪ್ರಕಾರಗಳುಂಟು.

ವಿಶೇಷಣ ಪೂರ್ವಪದ—ಸಮಾನಾಧಿಕರಣ ವಿಶೇಷಣವು ಉತ್ತರಪದವಾದ ವಿಶೇಷ್ಯದೊಡನೆ ಆಗುವ ಸಮಾಸವು ವಿಶೇಷಣಪೂರ್ವಪದವು. ವಿಶೇಷ್ಯದ ವಿಭಕ್ತಿಯಲ್ಲಿದ್ದ ವಿಶೇಷಣವು ಸಮಾನಾಧಿಕರಣವಿಶೇಷಣವೆನಿಸುವದು. ಉದಾ— ಕರಿಯದು ಬಟ್ಟೆ. ಇಲ್ಲಿ ಬಟ್ಟೆ ಎಂಬ ವಿಶೇಷ್ಯದ ವಿಭಕ್ತಿಯು ಕರಿಯದು ಎಂಬ ವಿಶೇಷಣಕ್ಕೆ ಇರುವದರಿಂದ ಕರಿಯದು ಸಮಾನಾಧಿಕರಣ ವಿಶೇಷಣವು.

ವಿಶೇಷಣ ಪೂ. ಕ. ಧಾ.— ಒಳ್ಳೆಯದಾದ ಮಾತು* ಒಳ್ಳೆಯ ಮಾತು ನಿಡಿಯವಾದ ತೋಳುಗಳು ನೀಡುದೋಳುಗಳು; ಇದು ಕುದುರೆಯು ಈ ಕುದುರೆಯು; ಓಡುವದಾದ ಆನೆಯು ಓಡುವಾನೆಯು; ಕುರುಡಾದ ನೊಣವು ಕುರುಡುನೊಣವು; ಕೋಮಲವಾದ ಮಾತುಲುಂಗವು ಕೋಮಲ ಮಾತುಲುಂಗವು.

ಗಮಕಸಮಾಸ— ಕನ್ನಡ ಪೂರ್ವಪದಗಳು ಸಮಾನಾಧಿಕರಣ ವಿಶೇಷಣಗಳಾಗಿ ಸಂಸ್ಕೃತದಿಂದ ಹುಟ್ಟಿದ ಉತ್ತರಪದಗಳೊಡನೆ ಆಗುವ ಕರ್ಮಧಾರಯವನ್ನೇ ಗಮಕವೆಂದು ಕೆಲವರು ಹೇಳುವರು.

ಉದಾ—ಬೀಸುವ ಮಾರುತನು; ಹೊಳೆವ ಸೂರ್ಯನು; ಆ ಪುಸ್ತಕವು; ಕರಿಯ ಮೇಘವು.

ವಿಶೇಷಣೋತ್ತರಪದ—ವಿಶೇಷ್ಯವು ಪೂರ್ವಪದವಾಗಿ ಸಮಾನಾಧಿಕರಣವಾದ ವಿಶೇಷಣದೊಡನೆ ಆಗುವ ಸಮಾಸವು ವಿಶೇಷಣೋತ್ತರಪದ ಕರ್ಮಧಾರಯವು. ಉದಾ— ಜಗನ್ನುತನಾದ ಬಸವನು-ಬಸವಜಗನ್ನುತನು; ಪಂಡಿತನಾದ ವೈಯಾಕರಣನು-ವೈಯಾಕರಣಪಂಡಿತನು.

---

* ಆದ ಎಂಬದನ್ನು ವಿಶೇಷಣದ ಮುಂದೆ ಉಪಯೋಗಿಸುವದು ವಾಡಿಕೆ. ಅದು ಸಮಾಸಪದಗಳಲ್ಲಿ ಸೇರಿದ್ದಲ್ಲ. ಒಳ್ಳೆಯದು ಮಾತು ಎಂಬ ಎರಡು ಪದಗಳೇ ಸೇರಿ ಒಳ್ಳೆಯ ಮಾತು ಎಂಬ ಸಮಾಸವಾಗಿದೆ.

ವಿಶೇಷಣೋಭಯಪದ— ಎರಡು ವಿಶೇಷಣಗಳೇ ಕೂಡಿ ಆಗುವ ಸಮಾಸವು ವಿಶೇಷಣೋಭಯಪದವು. ಉದಾ— ಹಸಿದೂ ಬಿಸಿದೂ- ಹಸಿಬಿಸಿದು, ಶೀತೋಷ್ಣವು ಮುಂ.

ಸಂಖ್ಯಾಪೂರ್ವಪದ — ಸಂಖ್ಯೆಯವಾಚಕ ಪೂರ್ವಪದವು, ವಿಶೇಷ್ಯವಾದ ಉತ್ತರಪದದೊಡನೆ ಆಗುವ ಸಮಾಸವು ಸಂಖ್ಯಾಪೂರ್ವ ಪದವು. ಉದಾ—ನಾಲ್ಕು ತೋಳುಗಳು-ನಾಲ್ದೋಳುಗಳು.

ದ್ವಿಗುಸಮಾಸ— ಸಮಾಹಾರವು [ಒಟ್ಟು] ತೋರುತ್ತಿದ್ದರೆ ಸಂಖ್ಯಾಪೂರ್ವಪದ ಕರ್ಮಧಾರಯವನ್ನು ದ್ವಿಗುಸಮಾಸವೆಂದು ಹೇಳುವದುಂಟು; ಉದಾ— ಮೂರು ಲೋಕಗಳ ಸಮಾಹಾರವು [ಒಟ್ಟು]— ಮೂಲೋಕವು; ಎರಡು ಪತ್ತುಗಳ ಒಟ್ಟು—ಇಪ್ಪತ್ತು.

ಉಪಮಾನಪೂರ್ವಪದ — ಉಪಮಾನವು ಪೂರ್ವಪದವಾಗಿ ಸಾಮಾನ್ಯ ಧರ್ಮವಾಚಕವಾದ ಉತ್ತರಪದದೊಡನೆ ಆಗುವ ಸಮಾಸವು ಉಪಮಾನಪೂರ್ವಪದವು. ಉದಾ—ಎಲೆಯಂತೆ ಹಸಿರು—ಎಲೆಹಸಿರು. ಮೇಘದಂತೆ ಶ್ಯಾಮನು-ಮೇಘಶ್ಯಾಮನು.

ಉಪಮಾನೋತ್ತರಪದ — ಉಪಮೇಯವು ಪೂರ್ವಪದವಾಗಿ ಉತ್ತರಪದವಾದ ಉಪಮಾನದೊಡನೆ ಆಗುವ ಸಮಾಸವು ಉಪಮಾನೋತ್ತರಪದವು. ಉದಾ— ಅಡಿಯು ತಳಿರಂತಹದು-ಅಡಿದಳಿರು, ಭುಜವು ದಂಡದಂತಹದು-ಭುಜದಂಡವು.

ಸಂಭಾವನಾಪೂರ್ವಪದ — ಪೂರ್ವಪದದಲ್ಲಿ ಸಂಭಾವನೆಯು ತೋರುವ ಕರ್ಮಧಾರಯವು ಸಂಭಾವನಾಪೂರ್ವಪದವು. ಉದಾ-ದೇವರು ಎಂಬ ಬುದ್ಧಿ=ದೇವಬುದ್ಧಿ; ಪ್ರಯೋಗ-ಅತಿಥಿಯಲ್ಲಿ ದೇವಬುದ್ಧಿಯನ್ನು ಇಡಬೇಕು. ಮಾತೃ ಎಂಬ ಭಾವನೆ=ಮಾತೃಭಾವನೆ; ಪ್ರಯೋಗ-ಪರಸ್ತ್ರೀಯಲ್ಲಿ ಮಾತೃಭಾವನೆಯನ್ನು ತಂದುಕೊಳ್ಳಬೇಕು. (ಸಂಭಾವನೆ=ಬುದ್ಧಿ, ಕಲ್ಪನೆ).

ಅವಧಾರಣಾಪೂರ್ವಪದ— ಪೂರ್ವಪದದಲ್ಲಿ ಆರೋಪಣೆಯು ತೋರುತ್ತಿದ್ದ ಕರ್ಮಧಾರಯವು ಅವಧಾರಣಾಪೂರ್ವಪದವು. ಉದಾ— ವಿದ್ಯೆಯೇ ಧನವು-ವಿದ್ಯಾಧನವು; ಕೋಪವೇ ಅನಲವು ಕೋಪಾನಲವು; ಮನವೇ ಮರ್ಕಟವು=ಮನೋಮರ್ಕಟವು.

ಕರ್ಮಧಾರಯದಲ್ಲಿ ಪೂರ್ವಪದಗಳಾದ ಕೃನ್ನಾಮ, ಗುಣವಾಚಕ ಇವುಗಳ ಮುಂದೆ ಸೇರಿದ ಅವನು, ಅವಳು, ಅದು ಮೊದಲಾದವುಗಳ ಲೋಪಹೊಂದುವವು. ಉದಾ-ಕರಿಯವನು ಕುರುಬನು-ಕರಿಯ ಕುರುಬನು; ಕರಿಯವಳು ಹೆಂಗುಸು-ಕರಿಯ ಹೆಂಗುಸು; ಬಿಳಿಯದು ಕಲ್ಲು-ಬಿಳಿಯ ಕಲ್ಲು; ಎಳೆಯದು ಮಾವು-ಎಳೆಯ ಮಾವು.

ಅವನು, ಅವಳು, ಅದು, ಅವರು ಮೊದಲಾದವುಗಳಿಗೆ ಆ, ಈ ಮೊದಲಾದ ಆದೇಶಗಳಾಗುವವು. ಉದಾ-ಅವನು ಬೇಡನು--ಆ ಬೇಡನು; ಅವಳು ಬೇಡತಿ-ಆ ಬೇಡತಿ; ಇದು ಹಂದಿ-ಈ ಹಂದಿ; ಯಾವನು ಹಳಬನು-ಯಾವ ಹಳಬನು.

ಬಹುವ್ರೀಹಿಸಮಾಸ—,ಎರಡು ಪದಗಳು ಸೇರಿ ಸಮಾಸವಾದಾಗ ಬೇರೊಂದು ಅರ್ಥವು ಮುಖ್ಯವಾಗಿದ್ದರೆ ಆ ಸಮಾಸವು ಬಹುವ್ರೀಹಿ ಸಮಾಸವು. ಉದಾ-ಮೂರು ಕಣ್ಣುಗಳು ಯಾವನಿಗೋ ಅವನು ಮುಕ್ಕಣ್ಣನು; ಕಮಲವು ಆಸನವು ಯಾವನಿಗೋ ಅವನು ಕಮಲಾಸನನು.

ಈ ಸಮಾಸದಲ್ಲಿ ಸಮಾನಾಧಿಕರಣ, ವ್ಯಧಿಕರಣ, ಸಂಖ್ಯೋಭಯಪದ, ವ್ಯತೀಹಾರಲಕ್ಷಣ ಎಂಬ ನಾಲ್ಕು ಪ್ರಕಾರಗಳುಂಟು.

ಸಮಾನಾಧಿಕರಣ ಬ. ವ್ರೀ.—ಪೂರ್ವೋತ್ತರಪದಗಳು ಸಮಾನ ವಿಭಕ್ತಿಯುಳ್ಳವಾಗಿದ್ದರೆ, ಸಮಾನಾಧಿಕರಣ ಬಹುವ್ರೀಹಿಯೆನಿಸುವದು. ಉದಾ—ಕುರುಡು ಆದ ಕಣ್ಣು ಯಾವನಿಗೋ ಅವನು ಕುರುಡುಗಣ್ಣನು.

ವ್ಯಧಿಕರಣ ಬ. ವ್ರೀ.—ಪೂರ್ವೋತ್ತರಪದಗಳು ಭಿನ್ನ ವಿಭಕ್ತಿಯುವಾಗಿದ್ದರೆ ಆ ಸಮಾಸವು ವ್ಯಧಿಕರಣಬಹುವ್ರೀಹಿಯೆನಿಸುವದು. ಉದಾ—ಹಣೆಯಲ್ಲಿ ಕಣ್ಣು ಯಾವನಿಗೋ ಅವನು ಹಣೆಗಣ್ಣನು; ಪೆರೆಯು ತಲೆಯಲ್ಲಿ ಯಾವನಿಗೋ ಅವನು ಪೆರೆದಲೆಯನು; ಚಕ್ರವು ಪಾಣಿಯಲ್ಲಿ ಯಾವನಿಗೋ ಅವನು ಚಕ್ರಪಾಣಿಯು.

ಬಹುವ್ರೀಹಿಸಮಾಸದ ಕೊನೆಯಲ್ಲಿ ಕೆಲವೆಡೆ ಅಕಾರವೂ ಕೆಲವೆಡೆ ಇಕಾರವೂ ಸೇರುವದು. ಉದಾ—ಅ-ಪೆರೆದಲೆಯ; ಮುಕ್ಕಣ್ಣ; ಇ-ಕಡುಚಾಗಿ, ನಿಡುಮೂಗಿ.

ಸಂಖ್ಯೋಭಯಪದ ಬ. ವ್ರೀ. — ಪೂರ್ವೋತ್ತರಪದಗಳೆರಡೂ
ಖ್ಯೇಯವಾಚಕಗಳಾಗಿದ್ದರೆ ಸಂಖ್ಯೋಭಯಪದ ಬಹುವ್ರೀಹಿಯೆನಿಸು
ದು. ಉದಾ— ಐದಾರು (ತಿಂಗಳುಗಳು); ವಿಗ್ರಹ— ಐದೋ ಆರೋ.
ಳೆಂಟು (ಹಣ್ಣುಗಳು ; ವಿಗ್ರಹ—ಏಳೋ ಎಂಟೋ ವುಂ.

ದ್ವಂದ್ವಸಮಾಸ— ಹಲವು ಪ್ರಥಮಾಂತ ಪದಗಳು ಇತರೇತರ
ೋಗ (ಪರಸ್ಪರ ಸಂಬಂಧ)ದಿಂದ ಕೂಡಿ ಆಗುವ ಸಮಾಸವು ದ್ವಂದ್ವವು.
ದರಲ್ಲಿ ಎಲ್ಲ ಪದಗಳೂ ಮುಖ್ಯವಾಗಿರುವವು. ಉದಾ — ಗಿಡವೂ
ಳ್ಳಿಯೂ — ಗಿಡಬಳ್ಳಿಗಳು ; ಕೈಗಳೂ ಕಾಲುಗಳೂ ಕೈಕಾಲುಗಳು;
ಜವೂ ಅಶ್ವವೂ ರಥವೂ—ಗಜಾಶ್ವರಥಗಳು.

ಈ ಸಮಾಸವು ಏಕವಚನವಾಗಿದ್ದರೆ ಅದನ್ನು ಸಮಾಹಾರದ್ವಂದ್ವ
ನ್ನುವರು. ಉದಾ— ಎಲೆಯೂ ಅಡಕೆಯೂ (ಇವುಗಳ ಒಟ್ಟು) ಎಲೆ
ಡಕೆ; ಹತ್ತೂ ಮೂರೂ ಇವುಗಳ ಒಟ್ಟು ಹದಿಮೂರು.

ಈ ಸಮಾಸದಲ್ಲಿ ಪೂರ್ವಪದವು ಲುಪ್ತವಾಗಿ ಉತ್ತರಪದವೊಂದೇ
ಳಿದರೆ ಅದು ಏಕಶೇಷದ್ವಂದ್ವವೆನಿಸುವದು. ಉದಾ-- ಕುದುರೆಯೂ
ತನೂ-ಅವರು ; ಬಳ್ಳಿಯೂ ಈಕೆಯೂ-ಇವರು ; ರಾಮನೂ ನೀನೂ
ವು, ನೀನೂ ನಾನೂ–ನಾವು; ಆಕೆಯೂ ಆತನೂ-ಅವರು.

ಅಂಶಿಸಮಾಸ—(ಅಂಶ=ಭಾಗ; ಅಂಶಿ=ಇಡಿವಸ್ತು.) ಅಂಶವಾಚಕ
ಾದ ಪೂರ್ವಪದವು ಅಂಶಿವಾಚಕವಾದ ಉತ್ತರಪದದೊಡನೆ ಆಗುವ
ಮಾಸವು ಅಂಶಿಸಮಾಸವು. ಈ ಸಮಾಸದಲ್ಲಿ ಪೂರ್ವಪದಾರ್ಥವು ಮುಖ್ಯ
ಾಗಿರುವದು. ಉದಾ—ಕಾಲಿನ ಅಡಿ (ಅಡಿ ಕಾಲಿನ); (ಈ ಸಮಾಸದ
ಗ್ರಹವನ್ನು ಹೇಳುವಾಗ ಉತ್ತರಪದವನ್ನು ಪೂರ್ವದಲ್ಲಿ ಇಡುವ ವಾಡಿಕೆ
ುಂಟು.) ಅಂಗಾಲು; ಕೈಯ ಮುಂದು (ಮುಂದು ಕೈಯ) ಮುಂಗೈ,
ೊಟ್ಟೆಯ ಕೆಳಗು (ಕೆಳಗು ಪೊಟ್ಟೆಯ) ಕಿಪ್ಪೊಟ್ಟೆ.

ಅಡಿ, ಮೇಗು, ಮುಂದು ಹಿಂದು, ಒಳಗು, ಹೊರಗು, ಕೆಳಗು, ನಡು,
ಡೆ, ತುದಿ ಎಂಬೀ ಪದಗಳು ಈ ಸಮಾಸದಲ್ಲಿ ಪೂರ್ವಪದಗಳಾಗುವವು.
ಡು, ಕಡೆ ಇವುಗಳನ್ನುಳಿದ ಪದಗಳ ಅಂತ್ಯಾಕ್ಷರವು ಸಮಾಸದಲ್ಲಿ ಲುಪ್ತ
ಾಗುವದು. ಅಡಿ ಎಂಬುದಕ್ಕೆ ಅಂ ಎಂಬ ರೂಪವಾಗುವದು.

ಕ್ರಿಯಾಸಮಾಸ— ನಾಮಪದವು ಕ್ರಿಯಾಪದದೊಡನೆ ಇಲ್ಲ
ಕೃದಂತದೊಡನೆ ಆದ ಸಮಾಸವು ಕ್ರಿಯಾಸಮಾಸವು. ಉದಾ—ಕಳವ
ವನ್ನು ಪಟ್ಟನು—ಕಳವಳಬಟ್ಟನು; ಮುಂದೆ ಪರಿದನು—ಮುಂದುವರಿದ
ಕೈಯನ್ನು ಬೀಸುತ್ತ—ಕೈಬೀಸುತ್ತ; ಸಾಲವನ್ನು ಮಾಡುವವನು—ಸಾ
ಮಾಡುವವನು; ಮನದಿಂದ ಸೋತು—ಮನಸೋತು.

ಬಳಕೆಯಲ್ಲಿರುವ ಕೆಳಗಿನ ಬೇರೆ ಬೇರೆ ಸಮಾಸಗಳನ್ನೂ ವಿಗ್ರ
ಗಳನ್ನೂ ನೋಡಿರಿ. (ಸಮಾಸದಲ್ಲಿ ಆಗುವ ಸಂಧಿಕಾರ್ಯವನ್ನು ಊಹಿ
ಕೊಳ್ಳಬೇಕು.)

ನಿಡಿದು ಉಸಿರು-ನಿಟ್ಟುಸಿರು; ಸುಡುವ ಕಾಡು-ಸುಡುಗಾಡು;
ಕಡಿದು ಆಸೆ-ಕಟ್ಟಾಸೆ; ಕಿರಿದು ಕೂದಲು-ಕಿರುಗೂದಲು;
ಮೆಲ್ಲಿತು ಪಾಸು-ಮೆಲ್ಪಾಸು; ಕಿರಿದು ಮನೆ-ಕಿರುಮನೆ;
ತೆಳ್ಳಿತು ಬಸಿರು-ತೆಳುವಸಿರು; ಕಿರಿದು ಈಳೆ-ಕಿತ್ತೀಳೆ;
ಬೆಟ್ಟಿತು ನುಡಿ-ಬಿರುನುಡಿ; ಕಿಸಿದು ಅಕ್ಕಿ-ಕೇಸಕ್ಕಿ;
ಅಸಿದು ನಡು-ಅಸಿಯನಡು; ಕಿಸಿದು ತಳಿರು-ಕಿಸುದಳಿರು,ಕೆಂದಳಿ
ಇನಿದು ಮಾವು-ಇವ್ಮಾವು; ಕಿಸಿದು ಕಣ್ಣು-ಕೆಂಗಣ್ಣು;
ಬಿಸಿದು ಬೂದಿ-ಬೆಂಬೂದಿ; ತೆಂಕಣ ಗಾಳಿ-ತೆಂಗಾಳಿ;
ಅಡುವ ಕೂಳು-ಅಡುಗೂಳು; ಇರುಳ ನಡು-ನಟ್ಟಿರುಳು;
ಉಡುವ ಕೋರೆ-ಉಡುಗೋರೆ; ಕೈಯ ಅಡಿ-ಅಂಗೈ;
ಬಡವು ನಡು-ಬಡನಡು; ಕೊಂಕಿದ ಕೋಲು-ಕುಡುಗೋಲು

ಸಂಖ್ಯೇಯವಾಚಕ ಪೂರ್ವಪದಗಳು ಹೊಂದುವ ರೂಪಗಳು—

ಒಂದು—ಒರ್-ಒರ್ಕಟ್ಟು; ಒತ್ತೋಳು; ಆರು—ಅರು-ಅರುವತ್ತು;
ಎರಡು—ಇರ್-ಇರ್ತಂಡ ಏಳು—ಏಳ್-ಎಪ್ಪತ್ತು;
ಮೂರು—ಮೂ-ಮೂಗಾವುದ; ಎಂಟು—ಎಣ್-ಎಂಬತ್ತು;
ಮೂಲೋಕಗಳು; ಮುಕ್ಕಣ್ಣ ಒಂಬತ್ತು-ತೊಮ್-ತೊಂಬತ್ತು
ನಾಲ್ಕು-ನಾಲ್-ನಾಲ್ಮೊಗ; ನಾಲ್ವತ್ತು; ಹತ್ತು—ಹನ್; ಹದಿ, ಹದಿನ್
ಹನ್ನೊಂದು, ಹದಿಮೂರು, ಹದಿನೈದ

ಅರಿಸಮಾಸದೋಷ— ಅರಿಗಳ ಎಂದರೆ ವಿರುದ್ಧಪದಗಳ (ಭಿನ್ನ ಭಾಷೆಗಳ ಪದಗಳ-ಸಂಸ್ಕೃತಕನ್ನಡಗಳ) ಸಮಾಸವು ಅರಿಸಮಾಸವೆನಿಸುವದು ಕರ್ಮಧಾರಯ ಸಮಾಸದಲ್ಲಿ ಉತ್ತರಪದವು ಸಂಸ್ಕೃತವಾಗಿರಬಹುದು. ಕ್ರಿಯಾಸಮಾಸದಲ್ಲಿ ಪೂರ್ವಪದವು ಸಂಸ್ಕೃತವಾಗಿರಬಹುದು. ಈ ಎರಡು ಸಮಾಸಗಳಲ್ಲಿ ಅರಿಸಮಾಸದೋಷವಿಲ್ಲ. ಬಿರುದಾವಳಿಯಲ್ಲಿ ಅರಿಪದಗಳ ಸಮಾಸವಾದರೆ ದೋಷವಿಲ್ಲ. ಪ್ರಾಚೀನ ಮಹಾಕವಿಪ್ರಯೋಗಗಳಲ್ಲಿಯೂ ಈ ದೋಷವಿಲ್ಲ. ಉಳಿದೆಡೆಗಳಲ್ಲಿ ಸಂಸ್ಕೃತ ಕನ್ನಡ ಪದಗಳ ಸಮಾಸವು ದೋಷವು. ದೋಷವಿಲ್ಲದ್ದಕ್ಕೆ ಉದಾ—

ಕರ್ಮಧಾ. ಸ.— ಇದು ಗೃಹವು— ಈ ಗೃಹವು.

ಕ್ರಿಯಾ ಸ — ಸುಖವನ್ನು **ಪಟ್ಟ**ನು— ಸುಖಬಟ್ಟನು ;

ಬಿರುದಾವಳಿ— ನರಲೋಕದಲ್ಲಣನು ; ಗಜವೇಂಟೆಕಾರಂ ;

ಪ್ರಾಚೀನ ಕವಿಪ್ರಯೋಗ — ಮಂಗಲಾರತಿ; ಗಂಡಗುಣ. (ಅಭಿ. ಪಂಪ. ಗಂಡ=ವೀರ)

ದೋಷಕ್ಕೆ ಉದಾ-ಅರಸುಕುಮಾರ; ಮನೆಗಲಹ; ಮಳೆಗಾಲ; ಎಣ್ಣೆಮಜ್ಜನ; ಮುಂಭಾಗ; ಊಟಉಪಚಾರಗಳು; ಗುರುಹಿರಿಯರು.

(ಅ) ತದ್ಭವ ಶಬ್ದದಿಂದುಂಟಾದ ಪದಕ್ಕೂ ಕನ್ನಡ ಶಬ್ದದಿಂದುಂಟಾದ ಪದಕ್ಕೂ ಸಮಾಸವಾಗುವ ವಾಡಿಕೆಯಿಲ್ಲ. ಇಂತಹ ಸಮಾಸವು ದೋಷವು.

ಸಮಾಸದೋಷಕ್ಕೆ ಉದಾ—ನಿದ್ದೆಮನೆ; ಚಂದಿರದಲೆಯು, ಆಟನಿದ್ದೆಗಳು; ತಲೆಬೀದಿ; ತಲೆನಾಯ್ಕ ಮುಂ.

(ಬ) ತದ್ಭವ ಶಬ್ದದಿಂದುಂಟಾದ ಪದಕ್ಕೂ ತತ್ಸಮ ಶಬ್ದದಿಂದುಂಟಾದ ಪದಕ್ಕೂ ಸಮಾಸವಾಗುವ ವಾಡಿಕೆಯಿಲ್ಲ. ಈ ಸಮಾಸವೂ ದೋಷವು ; ಉದಾ-ಮನರಂಜನ, ಘಂಟೆಮಾಲೆ, ಮಲ್ಲಿಗೆಪುಷ್ಪ, ಬ್ರಹ್ಮಗಂಟು* ಮುಂ.

---

*ಇವು ಏಕದೇಶವಿಕೃತಗಳಾದ ಸಮಸ್ತ ಪದಗಳೆಂದೂ ಇಲ್ಲಿ ಸಮಾಸದೋಷವಿಲ್ಲವೆಂದೂ ಶಬ್ದಾನುಶಾಸನವು ಹೇಳುವದು.

ದ್ವಿರುಕ್ತಿಗಳು

ದ್ವಿರುಕ್ತಿ—ವ್ಯವಧಾನವಿಲ್ಲದೆ ಒಂದು ಪದವನ್ನು ಇಲ್ಲವೆ ವಾಕ್ಯವನ್ನು ಎರಡು, ಮೂರು ಬಾರಿ ಪ್ರಯೋಗಿಸುವದು ದ್ವಿರುಕ್ತಿಯೆನಿಸುವದು. ಕೆಳಗೆ ಹೇಳುವ ಸಂಭ್ರಮ ಮೊದಲಾದ ಅರ್ಥಗಳಲ್ಲಿ ದ್ವಿರುಕ್ತಿಯಾಗುವದು ಉದಾ:

ಸಂಭ್ರಮಕ್ಕೆ— ಬನ್ನಿ ಬನ್ನಿ; ಒಪ್ಪಿಸೊಪ್ಪಿಸು; ಉಣ್ಣು ಉಣ್ಣು; ಸರಿ, ಸರಿ, ಸರಿ—ಇದು ಬಹೂಕ್ತಿ.

ಆವೃತ್ತಿಗೆ— ಉಂಡುಂಡು ಹೋದನು; ನೋಡಿ ನೋಡಿ ನಕ್ಕನು. (ಆವೃತ್ತಿ=ಹಲವು ಬಾರಿ.)

ಆಧಿಕ್ಯಕ್ಕೆ— ಕೆನೆ ಕೆನೆ ಮೊಸರು; ಲೇಸು ಲೇಸು; ದೊಡ್ಡ ದೊಡ್ಡ ಮುತ್ತುಗಳು; ಕರಿಯ ಕರಿಯ ಮೋಡಗಳು; ಕೆಳಕೆಳಗೆ ಹೋದನು; ತುತ್ತ ತುದಿ; ಮೊತ್ತಮೊದಲು; ಕಟ್ಟಕಡೆ; ನಟ್ಟನಡುವೆ; ಬಟ್ಟಬಯಲು.

ವೀಪ್ಸೆಗೆ—ಮನೆಮನೆಗೆ ಜಗಳವು; ಊರೂರಿಗೆ ಹನುಮಪ್ಪನಗುಡಿ. (ವೀಪ್ಸೆ=ಪ್ರತಿ ಒಂದು.)

ತ್ವರೆಗೆ—ಓಡು ಓಡು; ಹಿಡಿ ಹಿಡಿ ಹಿಡಿ (ಬಹೂಕ್ತಿ) (ತ್ವರೆ=ಅವಸರ)

ಭಯಕ್ಕೆ—ಹಾವು ಹಾವು; ಕೆಟ್ಟೆನು ಕೆಟ್ಟೆನು.

ಅಸೂಯೆಗೆ-ಕರ್ಣಾ ಕರ್ಣಾ, ಈಗಿನ ಸುಖವನ್ನು ಮುಂದೆ ಕಾಣುವೆ!

ಕೋಪಕ್ಕೆ—ಸೂತಪುತ್ರಾ ಸೂತಪುತ್ರಾ, ಗಳಹಬೇಡ; ರಕ್ಕಸಿಯೇ ರಕ್ಕಸಿಯೇ, ಹಾಳಾಗಿ ಹೋಗು.

ತಿರಸ್ಕಾರಕ್ಕೆ—ಮಗನೇ ಮಗನೇ, ನಿನ್ನ ಮೋರೆಯ ತೋರಿಸಬೇಡ! ಸೇನಬೋವಾ ಸೇನಬೋವಾ, ನನ್ನನ್ನು ಮುಳುಗಿಸಿಬಿಟ್ಟೆ.

ಭರ್ತ್ಸನಕ್ಕೆ— ದುರುಳಾ ದುರುಳಾ, ಪಾಂಚಾಲಿಯ ಕೇಶಪಾಶಕ್ಕೆ ಕೈನೀಡಿದವನೇ. (ಭರ್ತ್ಸನ=ಜರುಬುವದು.)

ಆಹ್ವಾನಕ್ಕೆ—ಅಣ್ಣಾ ಅಣ್ಣಾ, ಇಲ್ಲಿ ಬಾ. (ಆಹ್ವಾನ=ದೂರದಿಂದ ಕರೆಯುವದು.)

ಇನ್ನೂ ಕೆಲವು ಅರ್ಥಗಳಲ್ಲಿ ದ್ವಿರುಕ್ತಿಗಳುಂಟು — ಮೊದ ಮೊದಲು ದಪ್ಪವು; ತುದಿತುದಿಗೆ ಸಣ್ಣದು; ದೊಡ್ಡದೊಡ್ಡವರಿಗೆ ಮೊದಲು ಕೊಡು. (ಅನುಕ್ರಮಾರ್ಥದಲ್ಲಿ).

ಕೆಳಕೆಳಗೆ ಹೋದಂತೆ ಆಳವಾಗಿದೆ; ಮುಂದೆ ಮುಂದೆ ಅಳಿಗಾಲವು (ಸಾಮೀಪ್ಯಾರ್ಥದಲ್ಲಿ.)

ಇವರಿಗೆ ದುಡ್ಡು ದುಡ್ಡನ್ನು ಕೊಡು. (ನಾನಾವಧಾರಣಾರ್ಥದಲ್ಲಿ; ನಾನಾವಧಾರಣ=ಪ್ರತಿವ್ಯಕ್ತಿಗೆ ಇಷ್ಟಿಷ್ಟು ಎಂದು ಹೇಳುವದು.)

ಮೆಲ್ಲಮೆಲ್ಲನೆ, ಸರಸರನೆ ಓಡಿತು. (ಅನುಕರಣದಲ್ಲಿ.)

ವಾಕ್ಯಗಳ ದ್ವಿರುಕ್ತಿಗಳು—ಅತ್ತ ಸರಿ, ಅತ್ತ ಸರಿ, ಅತ್ತ ಸರಿ. ಓಡುತ್ತ ಹೋಗು, ಓಡುತ್ತ ಹೋಗು ಮುಂ.

ದ್ವಿರುಕ್ತಿಗಳಲ್ಲಿ ಬರುವ ಸಂಧಿಕಾರ್ಯಗಳು— ಪೂರ್ವಭಾಗದ ಕೊನೆಯ ಅಕ್ಷರಕ್ಕೆ ಲೋಪವಾಗುವದು. ಉದಾ— ಕೊನೆಗೆ+ಕೊನೆಗೆ= ಕೊನೆಕೊನೆಗೆ; ಹರಡಿ+ಹರಡಿ=ಹರಹರಡಿ; ಗುಡಿಸಿ+ಗುಡಿಸಿ=ಗುಡಿಗುಡಿಸಿ; ಹುದುಗಿ+ಹುದುಗಿ=ಹುದುಹುದುಗಿ; ಸಣ್ಣದು + ಸಣ್ಣದು= ಸಣ್ಣಸಣ್ಣದು; ಸುಮ್ಮನೆ + ಸುಮ್ಮನೆ=ಸುಮ್ಮಸುಮ್ಮನೆ.

ತುದಿ, ಮೊದಲು, ಕಡೆ, ನಡು, ಬಯಲು ಎಂಬ ಶಬ್ದಗಳ ದ್ವಿರುಕ್ತಿಯಲ್ಲಿ ಇವುಗಳಿಗೆ ಕ್ರಮದಿಂದ ತುತ್ತ, ಮೊತ್ತ (ಮೊಟ್ಟ), ಕಟ್ಟ, ನಟ್ಟ, ಬಟ್ಟ ಎಂಬ ಆದೇಶಗಳಾಗುವವು. ಉದಾ— ತುತ್ತ ತುದಿ ಮುಂ.

ಉಳಿದ ಸಂಧಿಕಾರ್ಯಗಳನ್ನು ಸಂದರ್ಭದಿಂದ ತಿಳಿದುಕೊಳ್ಳಬೇಕು.

---

೯. ಅವ್ಯಯಗಳು

ಅವ್ಯಯಪದ— ಬೇರೆ ಬೇರೆ ರೂಪಗಳಿಲ್ಲದವು, ಎಂದರೆ ಲಿಂಗ-ವಚನ-ವಿಭಕ್ತಿಗಳಿಂದಾಗುವ ವಿಕಾರವಿಲ್ಲದೆ ಒಂದೇ ರೂಪದಲ್ಲಿ ಇರುವ ಶಬ್ದಗಳು ಅವ್ಯಯಪದಗಳು ಇಲ್ಲವೆ ಅವ್ಯಯಗಳೆನಿಸುವವು. (ವ್ಯಯ=ಲಿಂಗ ವಚನ-ವಿಭಕ್ತಿಗಳಿಂದಾಗುವ ವಿಕಾರ.) ಅವ್ಯಯಗಳ ಮುಂದೆ ವಿಭಕ್ತಿ ಪ್ರತ್ಯಯಗಳು ಕಾಣಬರುವದಿಲ್ಲ* ಉದಾ—ಹಾಗೆ, ಹೀಗೆ, ಮತ್ತು, ಮತ್ತೆ ಸುಮ್ಮನೆ, ಬಳಿಕ, ಇನ್ನು, ಒಡನೆ, ವರೆಗೆ, ಅಹಹ ಮುಂ.

---

* ಅವ್ಯಯಗಳು ಪದಗಳೆನಿಸಬೇಕಾದುದರಿಂದ ಅವುಗಳ ಮುಂದೆ ಪ್ರಥಮಾ ವಿಭಕ್ತಿಯು ಬಂದು ಲೋಪವಾಗುವದೆಂದು ವ್ಯಾಕರಣಶಾಸ್ತ್ರಕಾರರು ಹೇಳುವರು.

ಅವ್ಯಯಗಳಲ್ಲಿ ೧. ಕ್ರಿಯಾವಿಶೇಷಣಾವ್ಯಯ, ೨. **ಸಂಬಂಧಕಾವ್ಯಯ**, ೩. **ಸಂಬೋಧಕಾವ್ಯಯ**, ೪. **ಭಾವಬೋಧಕಾವ್ಯಯ**, ೫. ಕ್ರಿಯಾವಾಚಕಾವ್ಯಯ, ೬. **ಅವಧಾರಣಾರ್ಥಕಾವ್ಯಯ**, ೭. ಪ್ರಶ್ನಾರ್ಥಕಾವ್ಯಯ ಎಂಬ ಏಳು ಪ್ರಕಾರಗಳು.

೧. **ಕ್ರಿಯಾವಿಶೇಷಣಾವ್ಯಯಗಳು**—ಕ್ರಿಯೆಯ ಕಾಲ-ರೀತಿ-ಅನುಕರಣಗಳನ್ನು ಹೇಳುವ ಅವ್ಯಯಗಳು ಕ್ರಿಯಾವಿಶೇಷಣಾವ್ಯಯಗಳೆನಿಸುವವು.

ಕಾಲವಾಚಕ ಕ್ರಿ. ವಿ. ಅ.–ಬಳಿಕ, ತರುವಾಯ; ಕೂಡಲೆ, ಒಡನೆ.

ರೀತಿವಾಚಕ ಕ್ರಿ. ವಿ. ಅ.—ಹಾಗೆ, ಹೀಗೆ ಹೇಗೆ ಅಂತು, ಇಂತು, ಎಂತು, ಅಂತೆ, ಸುಮ್ಮಗೆ, ಸುಮ್ಮನೆ, ನೆಟ್ಟಗೆ, ನೆಟ್ಟಗೆ, ಮೆಲ್ಲನೆ, ಮೆಲ್ಲಗೆ, ಮುಂತಾದವು.

ಅನುಕರಣವಾಚಕ ಕ್ರಿ. ವಿ. ಅ.— ಪಳಪಳನೆ, ಖಳಖಳನೆ, ಭಗಭಗನೆ, ದುಮ್ಮನೆ, ಧುಡುಮ್ಮನೆ; ಬಳಬಳ, ವಟವಟ, ಘಣಘಣ, ಪಿಸಿಪಿಸಿ, ಗುಳುಗುಳು ಮುಂತಾದವು.

೨. **ಸಂಬಂಧಕಾವ್ಯಯಗಳು**— ಎರಡು ಪದಗಳ ಇಲ್ಲವೆ ಎರಡು ವಾಕ್ಯಗಳ ಸಂಬಂಧವನ್ನು ತೋರಿಸುವ ಅವ್ಯಯಗಳು ಸಂಬಂಧಕಾವ್ಯಯಗಳೆನಿಸುವವು. ಉದಾ—ಮತ್ತು, ಊ, ಸಂಗಡ, ಅಲ್ಲದೆ, ಹೊರತು, ಇಲ್ಲವೆ, ಮುಂತಾದವು.

೩. **ಸಂಬೋಧಕಾವ್ಯಯಗಳು**—ಕರೆಯುವಾಗ ಉಪಯೋಗಿಸುವ ಅವ್ಯಯಗಳು ಸಂಬೋಧಕಾವ್ಯಯಗಳೆನಿಸುವವು. ಉದಾ— ಎಲೋ, ಎಲಾ, ಏ, ಎಲೌ, ಓ ಮುಂ.

೪. **ಭಾವಬೋಧಕಾವ್ಯಯಗಳು**— ಹರ್ಷ, ದುಃಖ, ಆಶ್ಚರ್ಯ ಮೊದಲಾದ ಮನೋಭಾವಗಳನ್ನು ಹೇಳುವ ಅವ್ಯಯಗಳು ಭಾವಬೋಧಕಾವ್ಯಯಗಳೆನಿಸುವವು. ಉದಾ—

ಹರ್ಷಕ್ಕೆ— ಆಹಾ, ಅಹಹ, ಆ. ದುಃಖಕ್ಕೆ—ಅಕ್ಕಟ, ಅಯ್ಯೋ. ಆಶ್ಚರ್ಯಕ್ಕೆ—ಅಹಹ, ಓಹೋ, ಓ. ತಿರಸ್ಕಾರಕ್ಕೆ— ಛೀ, ಥು ಮುಂ.

೫. ಕ್ರಿಯಾವಾಚಕಾವ್ಯಯಗಳು— ಕ್ರಿಯಾರ್ಥವನ್ನು ಹೇಳುವ ಅವ್ಯಯಗಳು ಕ್ರಿಯಾವಾಚಕಾವ್ಯಯಗಳೆನಿಸುವವು. ಉದಾ— ಅಲ್ಲ, ಇಲ್ಲ,

ಸಾಕು, ಬೇಕು, ಬೇಡ, ಅಹುದು (ಹೌದು) ಪ್ರಯೋಗ-ಗವುಡನು ಊರಲ್ಲಿ ಇಲ್ಲ; ಅದು ಹಾಗೆ ಅಲ್ಲ; ನಿನ್ನ ಮಾತು ಸಾಕು* ಮುಂ.

೬. **ಅವಧಾರಣಾರ್ಥಕಾವ್ಯಯಗಳು**-ಅವಧಾರಣೆಯನ್ನು ಎಂದರೆ ನಿಶ್ಚಯವನ್ನು ಹೇಳುವ ಅವ್ಯಯಗಳು ಅವಧಾರಣಾರ್ಥಕಾವ್ಯಯಗಳೆನಿಸುವವು. ಉದಾ—ಎ, ಏ, ಪ್ರಯೋಗ— ರಾಮನೆ ಹೇಳಲಿ; ನೀನೇ ಬಾ.

ಪ್ರಶ್ನಾರ್ಥಕಾವ್ಯಯಗಳು— ಪ್ರಶ್ನೆಮಾಡುವಾಗ ಉಪಯೋಗಿಸಲ್ಪಡುವ ಅವ್ಯಯಗಳು ಪ್ರಶ್ನಾರ್ಥಕಾವ್ಯಯಗಳೆನಿಸುವವು. ಉದಾ—ಎ, ಏ, ಓ, ಆ, ಏನು. ಪ್ರಯೋಗ-ನಿನ್ನ ತಂದೆ ಬಂದನೆ? ಬಂದನೇ? ಬಂದನೋ? ನೀನು ಬಂದೆಯಾ? ರಾಮನು ಬಂದನೇನು?

ಕೃದಂತಾವ್ಯಯಗಳು ಕ್ರಿಯಾವಾಚಕಾವ್ಯಯಗಳಲ್ಲಿಯೂ, ತದ್ಧಿತಾವ್ಯಯಗಳು ಕ್ರಿಯಾವಿಶೇಷಣಾವ್ಯಯಗಳಲ್ಲಿಯೂ ಸೇರುವವು.

ಅವ್ಯಯಗಳಿಗೆ ಅನೇಕಾರ್ಥಗಳಿರುವವು. ಉದಾ—ಏ, ಸಂಬೋಧಕವಾಗಿಯೂ ಅವಧಾರಣಾರ್ಥಕವಾಗಿಯೂ ಇದೆ. ಆಹಾ-ಹರ್ಷ, ಆಶ್ಚರ್ಯ ದುಃಖಬೋಧಕವಾಗಿದೆ.

---

೧೦. ಕಾರಕಗಳೂ ನಾಮವಿಭಕ್ತಿಪ್ರಯೋಗವೂ

ಕಾರಕ—ಕ್ರಿಯೆಯನ್ನುಂಟುಮಾಡುವದು ಕಾರಕವು.

ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, **ಅಧಿಕರಣ** ಎಂದು ಆರು ಕಾರಕಗಳು.

ಕರ್ತೃ— ಕ್ರಿಯೆಯನ್ನುಂಟುಮಾಡುವದರಲ್ಲಿ ಪ್ರಧಾನವಾದದ್ದು, ಕರ್ತೃ. ಉದಾ—ರಾಮನು ಕೊಡಲಿಯಿಂದ ಮರವನ್ನು ಕಡಿಯುತ್ತಾನೆ. ಇಲ್ಲಿ. ಕಡಿಯುವ ಕ್ರಿಯೆಯನ್ನುಂಟುಮಾಡುವದರಲ್ಲಿ ಮರ, ಕೊಡಲಿ

---

*ಸಾಲ್ + ಗುಂ =	ಇದರ ವಿಕೃತರೂಪ	= ಸಾಕು.	
ಬೇಡು + ಗುಂ = ಬೇಳ್ಕುಂ	,,	,,	= ಬೇಕು.
ಆಗು + ವುದು = ಅಪ್ಪುದು = ಅಹುದು	,,	,,	= ಹೌದು.

ಈ ಮೇರೆಗೆ. ಇವುಗಳಲ್ಲಿ ಪ್ರಕೃತಿಪ್ರತ್ಯಯಗಳು ಇರುವವಾದರೂ ವಿಶೇಷ ವಿಕಾರಗಳನ್ನು ಹೊಂದಿರುವದರಿಂದ ಅವ್ಯಯಗಳೆಂದು ಹೇಳಿದೆ.

ಎಂಬಿವು ಬೇಕಾಗಿದ್ದರೂ ರಾಮನು ಮುಖ್ಯನಾಗಿ ಕ್ರಿಯೆಯನ್ನು ಮಾಡುತ್ತಾನೆ. ಆದುದರಿಂದ ರಾಮನು ಎಂಬುದು ಕರ್ತೃವು. ಕರ್ತೃಗಳಲ್ಲಿ ಪ್ರಯೋಜಕ (ಸ್ವತಂತ್ರ) ಕರ್ತೃ, ಪ್ರಯೋಜ್ಯ (ಪ್ರೇರ್ಯ) ಕರ್ತೃ ಎಂದು ಎರಡು ಪ್ರಕಾರಗಳು.

ಪ್ರಯೋಜಕ (ಸ್ವತಂತ್ರ) ಕರ್ತೃ— ಕ್ರಿಯೆಯನ್ನು ಮಾಡುವಲ್ಲಿ ಇನ್ನೊಬ್ಬರ ಪ್ರೇರಣೆಯಿಲ್ಲದ ಕರ್ತೃವು ಪ್ರಯೋಜಕಕರ್ತೃವು. ಉದಾ— ಕೂಸು ಮಲಗಿತು. ಮಲಗುವ ಕ್ರಿಯೆಯನ್ನು ಮಾಡುವದರಲ್ಲಿ ಇನ್ನೊಬ್ಬರ ಪ್ರೇರಣೆಯಿಲ್ಲದಿರುವದರಿಂದ ಕೂಸು ಎಂಬುದು ಪ್ರಯೋಜಕ ಕರ್ತೃವು.

ಪ್ರಯೋಜ್ಯ ಕರ್ತೃ— ಕ್ರಿಯೆಯನ್ನು ಮಾಡುವಲ್ಲಿ ಇನ್ನೊಬ್ಬರ ಪ್ರೇರಣೆಯುಳ್ಳ ಕರ್ತೃವು ಪ್ರಯೋಜ್ಯ ಕರ್ತೃವು. ಉದಾ-ತಾಯಿ ಕೂಸನ್ನು ಮಲಗಿಸಿದಳು. ಇಲ್ಲಿ ಮಲಗುವ ಕ್ರಿಯೆಯನ್ನು ಮಾಡುವ ಕೂಸು, ತಾಯಿಯ ಪ್ರೇರಣೆಯುಳ್ಳದ್ದಾಗಿರುವದು. ಆದುದರಿಂದ ಕೂಸು ಎಂಬದು ಪ್ರಯೋಜ್ಯಕರ್ತೃವು. ಗೋವಳನು ಆಕಳನ್ನು ಹಕ್ಕೆಯನ್ನು ಹೊಗಿಸಿದನು.

ಕರ್ಮ—ಕ್ರಿಯೆಗೆ ವಿಷಯವಾದದ್ದು (ಕ್ರಿಯಾಫಲವನ್ನು ಹೊಂದುವದು) ಕರ್ಮವು. ಉದಾ—ಗೋವಳನು ಆಕಳನ್ನು ಕಾಯುತ್ತಾನೆ. ಇಲ್ಲಿ ಕಾಯುವ ಕ್ರಿಯೆಗೆ ಆಕಳು ವಿಷಯವಾದುದರಿಂದ ಆಕಳನ್ನು ಎಂಬುದು ಕರ್ಮವು. ಹುಡುಗನು ವ್ಯಾಕರಣವನ್ನು ಕಲಿತನು.

ಕರಣ— ಕ್ರಿಯೆಯನ್ನುಂಟುಮಾಡುವದರಲ್ಲಿ ಮುಖ್ಯಸಾಧನವಾದದ್ದು ಕರಣವು. ಉದಾ-ಒಕ್ಕಲಿಗನು ನೇಗಿಲಿನಿಂದ ಹೊಲವನ್ನು ಉಳುತ್ತಾನೆ. ಇಲ್ಲಿ ಉಳುವ ಕ್ರಿಯೆಗೆ ನೇಗಿಲು ಮುಖ್ಯ ಸಾಧನವಾದುದರಿಂದ ನೇಗಿಲಿನಿಂದ ಎಂಬದು ಕರಣವು. ಕೊಡಲಿಯಿಂದ ಕಟ್ಟಿಗೆಯನ್ನು ಕಡಿದನು. ಕಣ್ಣಿನಿಂದ ಹುಲಿಯನ್ನು ನೋಡಿದನು.

ಸಂಪ್ರದಾನ—ಕೊಡಲ್ಪಡುವ ವಸ್ತುವನ್ನು ಹೊಂದುವ ಪಾತ್ರವು ಸಂಪ್ರದಾನವು. ಉದಾ—ನೀಲಾಂಬೆಯು ಜಂಗಮನಿಗೆ ಅನ್ನವನ್ನಿಕ್ಕಿದಳು. ಇಲ್ಲಿ ಅನ್ನವನ್ನು ಹೊಂದುವ ಪಾತ್ರವು ಜಂಗಮನು; ಆದುದರಿಂದ ಜಂಗಮನಿಗೆ ಎಂಬುದು ಸಂಪ್ರದಾನವು. ಒಡೆಯನು ಆಳಿಗೆ ಹೊಡೆತವನ್ನು ಕೊಟ್ಟನು; ದೇವರು ಜ್ಞಾನಿಗೆ ಮೋಕ್ಷವನ್ನು ಕೊಟ್ಟನು.

ಅಪಾದಾನ—ಅಗಲುವಿಕೆ ತೋರುವಾಗ ಆ ಅಗಲುವಿಕೆಯ ಆರಂಭಸ್ಥಾನವು ಅಪಾದಾನವು. ಉದಾ—ಗಿಡದಿಂದ ಎಲೆಗಳು ಉದಿರಿದವು. ಇಲ್ಲಿ ಉದಿರುವ ಕ್ರಿಯೆಗೆ ಆರಂಭಸ್ಥಾನವು ಮರವು; ಆದುದರಿಂದ ಮರದಿಂದ ಎಂಬದು ಅಪಾದಾನವು. ಮಲ್ಲನು ಓಡುವ ಕುದುರೆಯಿಂದ ಬಿದ್ದನು.

ಅಧಿಕರಣ—ಕರ್ತೃವಿನ ಇಲ್ಲವೆ ಕರ್ಮದ ಆಧಾರವು ಅಧಿಕರಣವು. ಉದಾ—ಬಲೆಗಾರನು ಹೊಳೆಯಲ್ಲಿ ಮೀನಗಳನ್ನು ಹಿಡಿದನು; ಇಲ್ಲಿ ಕರ್ತೃವಾದ ಬಲೆಗಾರನ ಇಲ್ಲವೆ ಕರ್ಮವಾದ ಮೀನಗಳ ಆಧಾರವು ಹೊಳೆಯು; ಆದುದರಿಂದ ಹೊಳೆಯಲ್ಲಿ ಎಂಬುದು ಅಧಿಕರಣವು. ಮುಗಿಲಲ್ಲಿ ಚಿಕ್ಕೆಗಳುಂಟು.

ನಾಮವಿಭಕ್ತಿಪ್ರಯೋಗ

ಪ್ರಥಮೆ— ಕರ್ತರಿಪ್ರಯೋಗದ ವಾಕ್ಯದಲ್ಲಿ ಕರ್ತೃವನ್ನು ಹೇಳುವ ಪ್ರಾತಿಪದಿಕದ ಮುಂದೆ ಪ್ರಥಮೆ ಬರುವದು. ಉದಾ-ಜಕ್ಕಣಾಚಾರ್ಯನು ಹಲವು ಗುಡಿಗಳನ್ನು ಕಟ್ಟಿದನು; ನಾಗಮ್ಮಾಜಿಯು ಫಲದಾನವನ್ನು ಮಾಡಿದಳು; ಹುಡುಗಿ ಗಂಡನಿಗೆ ನಾಚಿದಳು

(೧) ಕರ್ಮಣಿಪ್ರಯೋಗದ ವಾಕ್ಯದಲ್ಲಿ ಕರ್ಮವನ್ನು ಹೇಳುವ ಪ್ರಾತಿಪದಿಕದ ಮುಂದೆ ಪ್ರಥಮೆ ಬರುವದು. ಉದಾ-ರನ್ನನಿಂದ ಗದಾಯುದ್ಧವು ರಚಿಸಲ್ಪಟ್ಟಿತು; ಗುರುಗಳಿಂದ ಶಿಷ್ಯನು ಉಪದೇಶಿಸಲ್ಪಟ್ಟನು.

(೨) ಕೃನ್ನಾಮಗಳ ಕರ್ತೃವಿಗೆ ಪ್ರಥಮೆ ಬರುವದು. ಉದಾ-ನಾನು ನೋಡಿದ ಕುದುರೆ ಬಂದಿತು; ನಾನು ಪ್ರಥಮ.

ಸಂಬೋಧನ— ಕಾರ್ಯಾಂತರದಲ್ಲಿ ತೊಡಗಿದವರನ್ನು ತನಗೆ ಅಭಿಮುಖವಾಗಿ ಮಾಡಿಕೊಳ್ಳುವದು ಸಂಬೋಧನವು ಈ ಅರ್ಥದಲ್ಲಿ ಸಂಬೋಧನವಿಭಕ್ತಿ ಬರುವದು. ಉದಾ—ಹೇಡಿಯೇ, ಸುಮ್ಮನೆ ಗಳಹಬೇಡ; ಮುದುಕನೇ ಮಿಡುಕಬೇಡ; ರಾಮಾ ಓದುತ್ತಿರು.

ದ್ವಿತೀಯೆ. (೧) ಸಕರ್ಮಕ ಕರ್ತರಿಪ್ರಯೋಗದ ವಾಕ್ಯದಲ್ಲಿ ಕರ್ಮವನ್ನು ಹೇಳುವ ಪ್ರಾತಿಪದಿಕದ ಮುಂದೆ ದ್ವಿತೀಯೆ ಬರುವದು. ಉದಾ-ಪುಲಿಕೇಶಿಯು ಭರತಖಂಡವನ್ನು ಆಳಿದನು; ಸತಿ ಪತಿಯನ್ನು ಮೆಚ್ಚಿಸುವಳು.

(೨) ಕರೆ, ಬೇಡು, ಕೇಳು, ಆಡು (=ಹೇಳು) ಮೊದಲಾದ ಧಾತುಗ
ಳಿಂದಾದ ಕ್ರಿಯಾಪದವುಳ್ಳವಾಕ್ಯದಲ್ಲಿ ಎರಡು ಕರ್ಮಗಳು ಇರುವದುಂಟು
ಆ ಎರಡು ಕರ್ಮಗಳಿಗೂ ದ್ವಿತೀಯೆ ಬರುವದು. ಉದಾ— ಗೋವಳನ
ಹಸುವನ್ನು ಹಾಲನ್ನು ಕರೆದನು; ವಾಮನನು ಬಲಿಯನ್ನು ಭೂಮಿಯನ್ನ
ಬೇಡಿದನು; ಗುರುವು ಶಿಷ್ಯನನ್ನು ವ್ಯಾಕರಣವನ್ನು ಕೇಳಿದನು; ಸುರುಚಿಯು
ಸುನೀತಿಯನ್ನು ಬಿರುನುಡಿಯನ್ನು ಆಡಿದಳು.

(೩) ಗತ್ಯರ್ಥಕ, ಶಬ್ದಾರ್ಥಕ, ಧಾತುಗಳಿಗೂ, ಎಲ್ಲ ಅಕರ್ಮಕಧಾತ
ಗಳಿಗೂ ಇಸು ಪ್ರತ್ಯಯವು ಸೇರಲು ಉಂಟಾಗುವ ಪ್ರೇರಣಾರ್ಥಕ ಧಾತ
ಗಳ ಕ್ರಿಯಾಪದಗಳ ಪ್ರಯೋಜ್ಯ ಕರ್ತೃವಿಗೆ ದ್ವಿತೀಯೆ ಬರುವದು. (**ಗತ್ಯ**
ರ್ಥಕ=ಗಮನ ಎಂಬ ಅರ್ಥದ) ಉದಾ-**ಗತ್ಯರ್ಥಕಕ್ಕೆ**-ಆಳು ಆಕಳನ್ನ
ಮನೆಯನ್ನು ಹೊಗಿಸಿದನು; ತಂದೆ ಮಗನನ್ನು ಸಾಲೆಯನ್ನು ಸೇರಿಸಿದನು
(ಶಬ್ದಾರ್ಥಕ=ಮಾತಾಡು ಎಂಬ ಅರ್ಥದ) **ಶಬ್ದಾರ್ಥಕಕ್ಕೆ**—ರಾಣಿಯು
ಗಿಳಿಯನ್ನು ಸವಿಮಾತನ್ನು ನುಡಿಸಿದಳು; ತಾಯಿಯು ಮಗಳನ್ನು ಹಾಡನ್ನು
ಹೇಳಿಸಿದಳು. **ಅಕರ್ಮಕಕ್ಕೆ**— ಬೇಡನು ಹುಲಿಯನ್ನು ಅಂಜಿಸಿದನು
ಬೆಕ್ಕು ಇಲಿಯನ್ನು ಸಾಯಿಸಿತು; ಭೀಮನು ಹೆಂಡತಿಯನ್ನು ಮನೆಯಲ್ಲಿ
ಇರಿಸಿದನು.

(೪) ವಾಚನಾರ್ಥಕ (ಓದು ಎಂಬರ್ಥದ), ಅಶನಾರ್ಥಕ (ತಿನ್ನು
ಎಂಬರ್ಥದ) ಧಾತುಗಳಿಂದಾದ ಕ್ರಿಯಾಪದಗಳ ಪ್ರಯೋಜ್ಯಕರ್ತೃವಿಗೆ
ವಿಕಲ್ಪವಾಗಿ ದ್ವಿತೀಯೆ ಬರುವದು. ಉದಾ— ಗುರುವು ಶಿಷ್ಯನನ್ನು ಓದಿಸಿ
ದನು. ಇಲ್ಲವೆ ಶಿಷ್ಯನಿಂದ; ತಾಯಿ ಮಗನನ್ನು ಹಣ್ಣನ್ನು ತಿನಿಸಿದಳು
ಇಲ್ಲವೆ ಮಗನಿಂದ.

(೫) ಕ್ರಿಯೆ ಅವಿಚ್ಛಿನ್ನವಾಗಿ ನಡೆಯಿತೆಂಬ ಅರ್ಥದಲ್ಲಿ ಕಾಲವಾಚಕ
ಮಾರ್ಗವಾಚಕ ಶಬ್ದಗಳಿಗೆ ವಿಕಲ್ಪವಾಗಿ ದ್ವಿತೀಯೆ ಬರುವದು. ಉದಾ—
ಒಂದು ದಿನವನ್ನು ಬಳಲಿದನು; ಒಂದು ದಿನದಿಂದ. ನಾಲ್ಕು ರಾತ್ರಿಗಳನ್ನ
ತೊಳಲಿದನು; ರಾತ್ರಿಗಳಿಂದ. ಒಂದು ಗಾವುದನ್ನು ಓಡಿದನು; ಗಾವುದ
ದಿಂದ. ಮೂರು ಯೋಜನಗಳನ್ನು ನಡೆದು ಹೋದನು. ಯೋಜನಗಳಿಂದ

ತೃತೀಯೆ— (೧) ಕರ್ಮಣಿಪ್ರಯೋಗದಲ್ಲಿ ಕರ್ತೃವನ್ನು ಹೇಳುವ ಪ್ರಾತಿಪದಿಕದ ಮುಂದೆ ತೃತೀಯೆ ಬರುವದು. ಉದಾ-- ಪ್ರಜೆಗಳಿಂದ ಕೃಷ್ಣರಾಯನು ಹೊಗಳಲ್ಪಟ್ಟನು.

(೨) ಅದು ಉದು ಪ್ರತ್ಯಯಾಂತ ಕೃದ್ಭಾವನಾಮದ ಕರ್ತೃವನ್ನು ಹೇಳುವ ಪ್ರಾತಿಪದಿಕದ ಮುಂದೆ ತೃತೀಯೆ ಬರುವದು. ಉದಾ—ನನ್ನಿಂದ ಭಾರವನ್ನು ಹೊರುವದು ಆಗದು; ರಾಮನಿಂದ ಓಡುವದು ಆಗದು.

(೩) ಕರಣಾರ್ಥಕ ಪ್ರಾತಿಪದಿಕಗಳ ಮುಂದೆ—ಕೊಡಲಿಯಿಂದ ಮರವನ್ನು ಕಡಿದನು; ಮಗ್ಗದಿಂದ ಬಟ್ಟೆಯನ್ನು ನೆಯ್ದನು.

(೪) ಕಾರಣಾರ್ಥಕ ಪ್ರಾತಿಪದಿಕಗಳ ಮುಂದೆ—*ಕೆಟ್ಟ ಹವೆಯಿಂದ ಬೇನೆ ಬರುವದು; ಬಿರುನುಡಿಗಳಿಂದ ಜಗಳವುಂಟಾಗುವದು; ಪ್ರಜೆಗಳ ಒಕ್ಕಟ್ಟಿನಿಂದ ದೇಶದ ಕಲ್ಯಾಣವಾಗುವದು. †ಮಣ್ಣಿನಿಂದ ಕೊಡವನ್ನು ಮಾಡಿದನು.

[(೫) ಯಾವದರ ಪ್ರಕಾರದಿಂದ ವಸ್ತುವಿಗೆ ಹೆಸರು ಬಂದಿರುವದೋ ಅದನ್ನು ಹೇಳುವ ಪ್ರಾತಿಪದಿಕದ ಮುಂದೆ ತೃತೀಯೆ ಬರುವದು. ಉದಾ—ಕೈಯಿಂದ ಮೋಟನು; ಇಲ್ಲಿ ಕೈಯು ಮೋಟತನವೆಂಬ ಪ್ರಕಾರದಿಂದ ಒಬ್ಬನಿಗೆ ಮೋಟ ಎಂಬ ಹೆಸರು ಬಂದಿದೆ. ಬಾಯಿಂದ ಉಗ್ಗನು; ಕಣ್ಣಿನಿಂದ ಮೆಳ್ಳನು; ಜಾತಿಯಿಂದ ಪಂಚಮನು; ಸ್ವಭಾವದಿಂದ ಒಳ್ಳೆಯವನು.

(೬) ಯಾವದೊಂದು ಪ್ರಕಾರವನ್ನು ಹೊಂದಿದ ವ್ಯಕ್ತಿಯನ್ನು ಸೂಚಿಸುವ ನಾಮಕ್ಕೆ ತೃತೀಯೆ ಬರುವದು. ಉದಾ—ಜಡೆಯಿಂದ ತಾಪಸನು; ಇಲ್ಲಿ ತಾಪಸನೆಂಬ ಪ್ರಕಾರವನ್ನು ಹೊಂದಿದ ತಾಪಸನೆಂಬ ವ್ಯಕ್ತಿಯನ್ನು ಜಡೆಯೆಂಬ ನಾಮವು ಸೂಚಿಸುವದರಿಂದ ಅದಕ್ಕೆ ತೃತೀಯೆ ಬಂದಿದೆ. ಜನಿವಾರದಿಂದ ಬ್ರಾಹ್ಮಣನು; ಶಾಟಿಯಿಂದ ಸಂನ್ಯಾಸಿಯು.]

(೭) ಒಡನೆ, ಸಂಗಡ, ಕೂಡ (ಕೂಡಿ) ಎಂಬಿವನ್ನು ಬಿಟ್ಟು ಉಳಿದ ಕೂಡಿ ಎಂಬ ಅರ್ಥದ ಶಬ್ದಗಳ ಪ್ರಯೋಗವಿದ್ದಲ್ಲಿಯೂ ಈ ಅರ್ಥವು ತೋರುವಲ್ಲಿಯೂ ತೃತೀಯೆ ಬರುವದು. ಉದಾ— ಲಕ್ಷ್ಮಿಯಿಂದ ಕೂಡಿ ಹರಿ

* ನಿಮಿತ್ತ ಕಾರಣಾರ್ಥದಲ್ಲಿ † ಉಪಾದಾನಕಾರಣಾರ್ಥದಲ್ಲಿ

ಯೊಪ್ಪಿದನು; ಸಕ್ಕರೆಯಿಂದ ಬೆರೆತು ಹಾಲು ಇನಿದಾಯಿತು. ಈ ಅರ್ಥವ
ತೋರುವಲ್ಲಿ—ಸುಖದಿಂದ ಕಾಲವನ್ನು ಕಳೆದನು.

ಒಡನೆ=ತಂದೆಯೊಡನೆ ಮಗನು ಬಂದನು, (ತಂದೆಯ+ಒಡನೆ; ಷಷ್ಠಿ)
ಸಂಗಡ— ತಂದೆಯ ಸಂಗಡ ಮಗನು ಬಂದನು. ಕೂಡ—ತಂದೆಯ ಕೂಡ
ಮಗನು ಬಂದನು.

ಚತುರ್ಥಿ—ಕೆಳಗೆ ಹೇಳಿದ ಅರ್ಥಗಳಲ್ಲಿ ಚತುರ್ಥಿ ಬರುವದು—

(೧) ಸಂಪ್ರದಾನಾರ್ಥಕ ಪ್ರಾತಿಪದಿಕದ ಮುಂದೆ; ಉದಾ—ಚೆನ್ನ
ಮ್ಮನು ಜಂಗಮನಿಗೆ ಹೊನ್ನನ್ನು ಕೊಟ್ಟಳು.

(೨) ಉದ್ದೇಶ್ಯಾರ್ಥದ ಪ್ರಾತಿಪದಿಕದ ಮುಂದೆ, ಉದಾ— ಬ್ರಾಹ್ಮ
ಣರು ಅರಸರಿಗೆ ಆಶೀರ್ವಾದ ಮಾಡುತ್ತಾರೆ; ಶ್ರೀಮಂತರು ವಿನೋದಕ್ಕೆ
ಗಿಳಿಯನ್ನು ಸಾಕುತ್ತಾರೆ.

(೩) ಸೂಚಕಾರ್ಥದ ಪ್ರಾತಿಪದಿಕದ ಮುಂದೆ;ಉದಾ-ವಿನಾಶಕಾಲಕ್ಕೆ
ವಿಪರೀತ ಬದ್ಧಿ; ಬರಕ್ಕೆ ಒಣ ಮಿಂಚು.

[(ಅರ್ಹ, ರುಚಿ. ಅಸೂಯೆ, ಕ್ರೋಧ, ದ್ರೋಹ, ಉಪಕಾರ,
ಭೀತಿ, ಉನ್ನತಿ, ಅವನತಿ, ಸ್ವಭಾವ, ಇಷ್ಟ, ಅನಿಷ್ಟ, ಸದೃಶ, ಪ್ರತಿನಿಧಿ
ನಮಸ್ಕಾರ ಈ ಅರ್ಥಗಳ ಶಬ್ದಗಳ ಯೋಗವಿದ್ದಾಗ ನಾಮಗಳ ಮುಂದೆ
ಚತುರ್ಥಿಯು ಬರುವದು. ಉದಾ— ಅರ್ಹ-ಭೀಮನು ಪ್ರಶಂಸೆಗೆ ತಕ್ಕ
ವನು; ಕಳ್ಳನು ಶಿಕ್ಷೆಗೆ ಪಾತ್ರವು. ರುಚಿ-ಹುಡುಗನಿಗೆ ಲಡ್ಡುಗೆ ಸೇರುತ್ತದೆ.
ಸಾಧುವಿಗೆ ಪರೋಪಕಾರವು ರುಚಿಸುತ್ತದೆ; ಅಸೂಯೆ-ಸವತಿಗೆ ಸವತಿ
ಪುರುಡಿಸುವಳು, ನಾಯಿಗೆ ನಾಯಿ ಗುರುಗುಟ್ಟುವದು. ಕ್ರೋಧ-ಕಳ್ಳರಿಗೆ
ಅರಸನು ಮುನಿದನು. ಸೋಮಾರಿಗೆ ಉದ್ಯೋಗಿಯು ಕೋಪಿಸುವನು.
ದ್ರೋಹ—ಅರಸನಿಗೆ ಈತನು ದ್ರೋಹವ ಮಾಡುವನು; ಮೋಸಗಾರನು
ದೇಶಕ್ಕೆ ದ್ರೋಹಿಯು. ಉಪಕಾರ— ಜನಕ್ಕೆ ಈತನು ಹಿತಚಿಂತಕನು;
ಉದ್ಯೋಗಿಯು ಲೋಕಕ್ಕೆ ಉಪಕಾರಕನು. ಭೀತಿ—ಒಳ್ಳೆಯವನು ಪಾಪಕ್ಕೆ
ಅಂಜುವನು; ಆಕಳು ಹುಲಿಗೆ ಹೆದರುವದು. ಉನ್ನತಿ—ಲೋಕಕ್ಕೆ ಈತನು
ಶ್ರೇಷ್ಠನು; ಸ್ವರ್ಗಕ್ಕೆ ಇಂದ್ರನು ವರಿಷ್ಠನು. ಅವನತಿ—ಒಡೆಯನಿಗೆ ಆಳು

ಕನಿಷ್ಠನು ಪಂಡಿತನಿಗೆ ಪಾಮರನು ಕೀಳನು. ಸ್ವಭಾವ— ಕಪಿಗೆ ಚಪಲತೆ ಸಹಜವು; ಹೆಂಗುಸಿಗೆ ನಾಚಿಕೆ ಸ್ವಭಾವವು. ಇಷ್ಟ—ಸಾಧುವಿಗೆ ಮೋಕ್ಷವು ಬೇಕಾದದ್ದು; ಮಕ್ಕಳಿಗೆ ಆಟವು ಪ್ರಿಯವು. ಅನಿಷ್ಟ-ದೇಶಕ್ಕೆ ಬರವು ಅನಿಷ್ಟವು; ಸೋಮಾರಿಗೆ ಉದ್ಯೋಗವು ಅಪ್ರಿಯವು. ಸದೃಶ—ಮುಖವು ಚಂದ್ರನಿಗೆ ಸಮಾನವು; ಅರಸನು ದೇವರಿಗೆ ಸದೃಶನು. ಪ್ರತಿನಿಧಿ— ಜೇನು ತುಪ್ಪಕ್ಕೆ ಸಕ್ಕರೆ ಸಲ್ಲುವದು; ಅರಸನಿಗೆ ಮಂತ್ರಿಯು ಪ್ರತಿನಿಧಿಯು. ನಮಸ್ಕಾರ— ಹಿರಿಯರಿಗೆ ವಂದನೆಗಳು. ರಾಯರಿಗೆ ಕೈಮುಗಿದನು.]

(೫) ಅಪಮಾನವನ್ನು ತೋರ್ಪಡಿಸುವಾಗ ಬಗೆ ಧಾತುವಿನ ಕರ್ಮದ ಉಪಮಾನಕ್ಕೆ—ಭೀಮನು ಬಕನನ್ನು ತೃಣಕ್ಕೆ ಬಗೆದನು. ರಾಮನು ರಾವಣನನ್ನು ಹುಳಿತ ಕವಡೆಗೆ ಬಗೆದನು.

(೬) ಕಲಿಸು ತಿನಿಸು ಎಂಬರ್ಥದ ಕ್ರಿಯಾಪದದ ಪ್ರಯೋಜ್ಯಕರ್ತೃವನ್ನು ಹೇಳುವ ಶಬ್ದದ ಮುಂದೆ ಚತುರ್ಥಿ ಬರುವದು. ಉದಾ— ಬಡಗಿ ಮಗನಿಗೆ ಕೆತ್ತಿಗೆಯನ್ನು ಕಲಿಸಿದನು. ತಾಯಿ ಕೂಸಿಗೆ ಮೊಲೆಯುಣಿಸಿದಳು.

ಅಪೇಕ್ಷಾರ್ಥದ ಚತುರ್ಥಿಯ ಮುಂದೆ ಇಂತ* ಎಂಬದು ಸೇರುವದು. ಉದಾ— ಗಂಗೆಗಿಂತ ಯಮುನೆ ಚಿಕ್ಕವಳು; ತಂದೆಗಿಂತ ಮಗನು ಬುದ್ಧಿವಂತನು; ಹೇಳುವದಕ್ಕಿಂತ ಮಾಡುವದು ಲೇಸು. ಅಪೇಕ್ಷಾರ್ಥ= ವಸ್ತುಗಳ ತುಲನೆ ಮಾಡಿ ಒಂದರಲ್ಲಿ ಆಧಿಕ್ಯವನ್ನು ತೋರಿಸುವದು. ಗಂಗೆಗಿಂತ ಯಮುನೆ ಚಿಕ್ಕವಳು ಎಂಬಲ್ಲಿ ಗಂಗೆ-ಯಮುನೆಯರ ವಯಸ್ಸಿನ ತುಲನೆ ಮಾಡಿ ಯಮುನೆಯಲ್ಲಿ ಚಿಕ್ಕತನದ ಆಧಿಕ್ಯವು ತೋರಿಸಲ್ಪಟ್ಟಿದೆ.)

ಪಂಚಮಿ—[(೧) ಅಪಾದಾನಾರ್ಥದಲ್ಲಿ ಪಂಚಮಿ ಬರುವದು. ಉದಾ-ಪರ್ವತದಿಂದ ಕಲ್ಲು ಉರುಳಿತು. ಗಂಗೆ ಹಿಮಾಲಯದಿಂದ ಹೊರಟು ಸಾಗರನಾಥನನ್ನು ಸೇರುತ್ತಾಳೆ;ಬರದಿಂದ ಸಲಹಿದಳು;ಪಾಪದಿಂದ ತಡೆದಳು.

(೨) ನಿಮಿತ್ತಾರ್ಥಕ ಶಬ್ದಗಳ ಮುಂದೆ ಪಂಚಮಿ ಬರುವದು. ಉದಾ— ಬೀಜದಿಂದ ಮರವಾಯಿತು; ಆವರು ನಡತೆಯಿಂದ ಕೀಳಾದರು; ಆಕಳು ಹುಲಿಯಿಂದ ಅಂಜಿತು.

---

* ಇದು ಹಳಗನ್ನಡದ ಪಂಚಮಿಯ ಇಂದ ಎಂಬದರ ವಿಕೃತ ರೂಪವು.

ವನ್ನೂ ಅಳು ಕ್ರಿಯಾವಿಭಕ್ತಿಪ್ರತ್ಯಯವು ಕರ್ತೃವನ್ನೂ ಹೇಳುತ್ತವೆ. ಅಂ
ದಳು ಎಂಬದಕ್ಕೆ ಭೂತಕಾಲದ ಅಂಜುವ ಕ್ರಿಯೆಯ ಕರ್ತೃವು ಎಂ
ಅರ್ಥವು; ಇಲ್ಲಿ ಕರ್ತೃರ್ಥವನ್ನು ಅಳು ಎಂಬ ಕ್ರಿಯಾವಿಭಕ್ತಿಪ್ರತ್ಯಯವ
ಹೇಳುವದು ಹೀಗೆ ಕರ್ತ್ರರ್ಥದಲ್ಲಿ ಕ್ರಿಯಾವಿಭಕ್ತಿಪ್ರತ್ಯಯವು ಪ್ರಯೋಗಿ
ಲ್ಪಟ್ಟರೆ ಅದು **ಕರ್ತರಿಪ್ರಯೋಗದ** (ಕರ್ತರಿ=ಕರ್ತ್ರರ್ಥದಲ್ಲಿ, ಪ್ರಯೋ
ಗದ=ಆಖ್ಯಾತಪ್ರತ್ಯಯದ ಉಪಯೋಗವುಳ್ಳ) ಕ್ರಿಯಾಪದವು. ಕರ್ತ
ಪ್ರಯೋಗದ ಕ್ರಿಯಾಪದವುಳ್ಳ ವಾಕ್ಯವನ್ನು **ಕರ್ತರಿಪ್ರಯೋಗ**
ವಾಕ್ಯವೆಂದು ಹೇಳುವರು. ಮೇಲೆ ಹೇಳಿದ ವಾಕ್ಯವು ಕರ್ತರಿಪ್ರಯೋಗ
ವಾಕ್ಯವು. ಕರ್ತರಿಪ್ರಯೋಗದ ವಾಕ್ಯದಲ್ಲಿ ಕರ್ತೃಪದದ ಪುರುಷಲಿಂ
ವಚನಗಳನ್ನು ಕ್ರಿಯಾಪದವು ಹೊಂದುತ್ತದೆ. ಉದಾ- ಭೀಮಸೇನನು ಬ
ಸುರನನ್ನು ಕೊಂದನು. ಇಂಥ ಬಿಸಿಲಿನಲ್ಲಿ ನನ್ನಿಂದ ಹೋಗುವದು ಆಗದು
ಹೋಗುವದು (ಕರ್ತೃ), ಆಗದು (ಕ್ರಿಯಾಪದ). ಅವರನ್ನು ರಾಕ್ಷಸರ
ಎಣಿಸುವದು ತಕ್ಕದ್ದು. ಎಣಿಸುವದು ಕರ್ತೃ, ಇರುತ್ತದೆ (ಅಧ್ಯಾಹೃ
ಕ್ರಿಯಾಪದ. ನೀನು ಸುಳ್ಳನ್ನು ಆಡಕೂಡದು. ನೀನು ಕರ್ತೃ, ಸುಳ್ಳನ
ಕರ್ಮ, ಆಡಕೂಡದು (ವಿಧ್ಯರ್ಥದ ನಿಷೇಧ) ಕ್ರಿಯಾಪದವು.

ಧಾತುಗಳಲ್ಲಿ ಇಲ್ಲವೆ ಕ್ರಿಯಾಪದಗಳಲ್ಲಿ **ಸಕರ್ಮಕ, ಅಕರ್ಮ**
ಎಂಬ ಎರಡು ಪ್ರಕಾರಗಳುಂಟು. ಕರ್ಮಾಪೇಕ್ಷೆಯುಳ್ಳ ಕ್ರಿಯಾಪದವು ಸ
ರ್ಮಕವು; ಕರ್ಮಾಪೇಕ್ಷೆಯಿಲ್ಲದ್ದು ಅಕರ್ಮಕವು, ಅಕರ್ಮಕ ಕ್ರಿಯಾಪ
ವುಳ್ಳ ಕರ್ತರಿಪ್ರಯೋಗದ ವಾಕ್ಯವು **ಅಕರ್ಮಕ ಕರ್ತರಿಪ್ರಯೋ**
ವೆನಿಸುವದು. ಸಕರ್ಮಕ ಕ್ರಿಯಾಪದವುಳ್ಳ ಕರ್ತರಿಪ್ರಯೋಗದ ವಾಕ್ಯ
ಸಕರ್ಮಕಕರ್ತರಿಪ್ರಯೋಗವೆನಿಸುವದು. ಸಕರ್ಮಕ ಕ್ರಿಯಾಪದ
ಎರಡು ಕರ್ಮಗಳುಳ್ಳದ್ದಿದ್ದರೆ ಅದು **ದ್ವಿಕರ್ಮಕ ಕರ್ತರಿಪ್ರಯೋ**
ವೆನಿಸುವದು. ಉದಾ—ಪಂಪನು (ಕರ್ತೃ) (ಬನವಾಸಿಯ ನಾಡಿನಲ್ಲಿ
ಇದ್ದನು (ಕ್ರಿ.) ಅಕರ್ಮಕ ಕರ್ತರಿಪ್ರಯೋಗ. ಲಕ್ಷ್ಮಣನು (ಕರ್ತೃ

*ಕ್ರಿಯಾವಿಭಕ್ತಿಪ್ರತ್ಯಯವು ಕರ್ತೃಕರ್ಮಗಳ ಪುರುಷ, ಲಿಂಗ ವಚನಗಳನ್ನು
ಹೇಳುವದು. ಇಲ್ಲಿ ಅಳು ಪ್ರತ್ಯಯವು ಕರ್ತೃವು ನಾನೂ ನೀನೂ ಅಲ್ಲದ ವ್ಯ
ಯೆಂದೂ, ಆ ವ್ಯಕ್ತಿಯು ಸ್ತ್ರೀಲಿಂಗದ್ದೆಂದೂ, ಅದು ಒಂದು ಎಂದೂ ಹೇಳುವದ

ಇಂದ್ರಜಿತುವನ್ನು (ಕರ್ಮ) ಕೊಂದನು. (ಕ್ರಿ.) ಸಕರ್ಮಕ ಕರ್ತರಿ ಪ್ರಯೋಗ. ವಾಮನನು (ಕರ್ತೃ) ಬಲಿಯನ್ನು (ಕರ್ಮ) ಭೂಮಿಯನ್ನು (ಕರ್ಮ) ಬೇಡಿದನು. (ಕ್ರಿ.) ದ್ವಿಕರ್ಮಕ ಕರ್ತರಿಪ್ರಯೋಗ.

ಕರ್ಮಣಿಪ್ರಯೋಗ— ಧಾತುಗಳ ಮುಂದೆ ಕರ್ಮಾರ್ಥದಲ್ಲಿ ಆಖ್ಯಾತಪ್ರತ್ಯಯವು ಸೇರಿದರೆ ಅದು ಕರ್ಮಣಿಪ್ರಯೋಗದ ಕ್ರಿಯಾಪದ ವಾಗುವದು. ಉದಾ—ಕಾಲಿದಾಸನಿಂದ ಶಾಕುಂತಲ ನಾಟಕವು ರಚಿಸಲ್ಪಟ್ಟಿತು. ಇಲ್ಲಿ ರಚಿಸಲ್ಪಟ್ಟಿತು ಎಂಬುದು ಕ್ರಿಯಾಪದವು. ರಚಿಸು (ಧಾ)+ ಅಲ್ಪಡು (ಆಗಮ)+ದ (ಕಾಲಸೂಚಕ ಪ್ರತ್ಯಯ)+ಇತು ಕ್ರಿ. ವಿಭಕ್ತಿ ಪ್ರತ್ಯಯ)=ರಚಿಸಲ್ಪಟ್ಟಿತು. ಇಲ್ಲಿ ರಚಿಸು ಧಾತುವು ರಚಿಸುವ ಕ್ರಿಯೆಯನ್ನು ಹೇಳುವದು;ಅಲ್ಪಡು ಎಂಬುದು ಕರ್ಮಾರ್ಥದಲ್ಲಿ ಕ್ರಿಯಾವಿಭಕ್ತಿಪ್ರತ್ಯಯವು ಬಂದಿರುವದನ್ನು ಸೂಚಿಸುವದು. ದ ಪ್ರತ್ಯಯವು ಭೂತಕಾಲವನ್ನು ಹೇಳುವದು; ಇತು ಎಂಬ ಕ್ರಿ. ವಿ. ಪ್ರತ್ಯಯವು ಕರ್ಮವನ್ನು ಹೇಳುವದು; ರಚಿಸಲ್ಪಟ್ಟಿತು ಎಂದರೆ ರಚಿಸುವ ಕ್ರಿಯೆಗೆ ವಿಷಯವಾದದ್ದು, (ರಚಿಸುವ ಕ್ರಿಯೆಯ ಕರ್ಮವು, (ನಾಟಕವು) ಎಂಬ ಅರ್ಥವು. ಹೀಗೆ ಕರ್ಮಾರ್ಥದಲ್ಲಿ ಕ್ರಿಯಾವಿಭಕ್ತಿಪ್ರತ್ಯಯವು ಪ್ರಯೋಗಿಸಲ್ಪಟ್ಟರೆ ಅದು ಕರ್ಮಣಿಪ್ರಯೋಗದ ಕ್ರಿಯಾಪದವು. (ಕರ್ಮಣಿ=ಕರ್ಮಾರ್ಥದಲ್ಲಿ; ಪ್ರಯೋಗ=ಕ್ರಿ. ವಿ. ಪ್ರತ್ಯಯದ ಉಪಯೋಗ) ಕರ್ಮಣಿಪ್ರಯೋಗದ ಕ್ರಿಯಾಪದವುಳ್ಳ ವಾಕ್ಯವನ್ನು ಕರ್ಮಣಿಪ್ರಯೋಗದ ವಾಕ್ಯವೆಂದು ಹೇಳುವರು. ಮೇಲೆ ಹೇಳಿದ ವಾಕ್ಯವು ಕರ್ಮಣಿಪ್ರಯೋಗದ ವಾಕ್ಯವು. ಕರ್ಮಣಿಪ್ರಯೋಗದಲ್ಲಿ ಕರ್ಮಪದದ ಪುರುಷಲಿಂಗವಚನಗಳನ್ನು ಕ್ರಿಯಾಪದವು ಹೊಂದಿರುವದು. ಉದಾ—ಹನುಮಂತನಿಂದ ಸೀತೆ ಹುಡುಕಲ್ಪಟ್ಟಳು.

ಸಕರ್ಮಕಕ್ರಿಯಾಪದಗಳು ಕರ್ಮವನ್ನು ಹೇಳುವದರಿಂದ ಕರ್ಮಣಿ ಪ್ರಯೋಗದ ವಾಕ್ಯಗಳಲ್ಲಿ ಸಕರ್ಮಕ ಕ್ರಿಯಾಪದಗಳೇ ಇರಬೇಕು.

ಕರ್ಮಣಿಪ್ರಯೋಗದಲ್ಲಿ ಧಾತುಗಳ ಮೇಲೆ ಅಲ್ಪಡು ಎಂಬುದು ಸೇರುವದು. ಬಳಿಕ ಪಡು ಧಾತುವಿನ ರೂಪಗಳಂತೆ ಕ್ರಿಯಾಪದಗಳಾಗುವವು.

ಸಂಕ್ಷಿಪ್ತ ಕರ್ಮಣಿಪ್ರಯೋಗ-ಅಲ್ಪಡು ಎಂಬುದನ್ನು ಸೇರಿಸದೆಯೂ ಕರ್ಮಣಿಪ್ರಯೋಗವನ್ನು ಮಾಡುವರು. ಉದಾ-ಚಿತ್ರಮಯವಾಗಿ ಕಟ್ಟಿತು

ಪರ್ಣಶಾಲೆ. (ಜೈ ಭಾ.) (ಕಟ್ಟಿತು ಕಟ್ಟಲ್ಪಟ್ಟಿತು) ದೇವರ ಪೂಜೆ
ಮಾಡಿದೆ, ಪುಸ್ತಕವು ತಂದಿದೆ. ಇವು ಸಂಕ್ಷಿಪ್ತ ಕರ್ಮಣಿಪ್ರಯೋಗಗಳು.

*[ಕರ್ಮಣಿಪ್ರಯೋಗವು ಕನ್ನಡದಲ್ಲಿ ವಿಶೇಷವಾಗಿ ಇಲ್ಲ. ಆದದ
ರಿಂದ ಕರ್ಮಣಿಪ್ರಯೋಗದ ವಾಕ್ಯಗಳನ್ನು ಉಚಿತವೆಂದು ಕಂಡಲ್ಲಿಯೇ
ಉಪಯೋಗಿಸಬೇಕು]

---

೧೨. ವಾಕ್ಯರಚನೆ

ವಾಕ್ಯರಚನೆ— ಒಂದು ಪೂರ್ಣ ವಿಚಾರವನ್ನು ತಿಳಿಸುವ ಪದಗಳ
ಸಮುದಾಯವು ವಾಕ್ಯವೆನಿಸುವದು. ತಮ್ಮ ವಿಚಾರವು ಪರರಿಗೆ ತಿಳಿಯು
ಬರುವಂತೆ ಆ ಪದಗಳನ್ನು ಕ್ರಮಕ್ಕೆ ಸರಿಯಾಗಿ ಸೇರಿಸುವದು ವಾಕ್ಯರಚನೆ
ಯೆನಿಸುವದು.

---

*ಕರ್ಮಣಿಪ್ರಯೋಗವೇ ಕನ್ನಡ ಭಾಷೆಗೆ ಅನನುರೂಪವಾಗಿರುವಾಗ ಇಲ್ಲಯು
ಕೆಲವು ವ್ಯಾಕರಣ ಪುಸ್ತಕಗಳಲ್ಲಿ ಭಾವೇಪ್ರಯೋಗವು ಕನ್ನಡದಲ್ಲಿ ಉಂಟೆಂದೂ, ಗಂಗೆ
ಯಿಂದ ಭೀಷ್ಮನನ್ನು ಹಡೆಯೋಣವಾಯಿತು, ಒಬ್ಬ ಅರಸನಿಂದ ದೊಡ್ಡ ರಾಜ್ಯವನ್ನು
ಸರಿಯಾಗಿ ಆಳೋಣವಾಗದು ಮೊದಲಾದ ವಾಕ್ಯಗಳು ಭಾವೇಪ್ರಯೋಗದವೆಂದೂ
ಹೇಳಿದೆ. ಭಾವೇಪ್ರಯೋಗವೆಂದರೇನೆಂಬುದನ್ನು ಯಥಾರ್ಥವಾಗಿ ತಿಳಿದುಕೊಂಡರೆ,
ಮತ್ತು ಕನ್ನಡ ಭಾಷಾಶೈಲಿಯನ್ನು ಪರಿಶೀಲಿಸಿದರೆ ಹಾಗೆ ಹೇಳುವದು ಅನುಚಿತವೆಂದು
ಮನಗಾಣಬಹುದು. ಭಾವೇ = ಭಾವ ಎಂಬರ್ಥದಲ್ಲಿ (ಭಾವ = ಕ್ರಿಯೆ) ಪ್ರಯೋಗ,
ಆಖ್ಯಾತಪ್ರತ್ಯಯದ ಉಪಯೋಗವು ಎಂಬರ್ಥವು. ರಾಮೇಣಭೂಯತೇ, ರಾಮೇಣ
ಸ್ಥೀಯತೇ ಮೊದಲಾದವು ಸಂಸ್ಕೃತದ ಭಾವೇಪ್ರಯೋಗದ ವಾಕ್ಯಗಳು. ಅವುಗಳಲ್ಲಿ
ರುವಂತೆ ಒಂದೇ ಕ್ರಿಯಾಪದವು ಕನ್ನಡದಲ್ಲಿ ಸಂಭವಿಸುವದಿಲ್ಲ. ಸ್ಥೀಯತೇ ಎಂಬದರ
ಅರ್ಥವನ್ನು ಕನ್ನಡದಲ್ಲಿ ಇರೋಣವು ಆಗುತ್ತದೆ ಎಂಬ ಎರಡು ಕ್ರಿಯಾವಾಚಕಗಳಿಂದ
ಹೇಳಬೇಕಾಗುವದು. ಆಗ ಅದು ಕರ್ತರಿಪ್ರಯೋಗದಂತೆ ಆಗುತ್ತದೆ. ಸದ್ಯದ
ಶಾಲೆಯ ವ್ಯಾಕರಣ ಪುಸ್ತಕಗಳಲ್ಲಿ ಭಾವೇಪ್ರಯೋಗಕ್ಕೆ ಮೇಲೆ ಹೇಳಿದಂತಹ ಇನ್ನೂ
ಕೆಲವು ವಾಕ್ಯಗಳಿವೆ. ಆ ವಾಕ್ಯಗಳಲ್ಲಿ ಕ್ರಿಯಾಪದಗಳೂ ವಿಧ್ಯರ್ಥದ ನಿಷೇಧವನ್ನು
ತೋರಿಸುವ ಕ್ರಿಯಾಪದಗಳೂ ಬಂದಿವೆ. ಅವು ಕರ್ತರಿಪ್ರಯೋಗದ ವಾಕ್ಯಗಳಾಗಿವೆ.
ಉದಾ— ನೀನು ಅದನ್ನು ಮಾಡಕೂಡದು. ಮಾಡು ಎಂಬುದರ ನಿಷೇಧಾರ್ಥರೂ
ಪವೇ ಮಾಡಕೂಡದು ಎಂದು ಹೇಳಬಹುದು. ಆದದರಿಂದ ಅಂತಹ ವಾಕ್ಯಗಳೆಲ್ಲ
ಕರ್ತರಿ ಪ್ರಯೋಗದವಾಗಿವೆ. ಆ ಪುಸ್ತಕಗಳಲ್ಲಿ ಹೇಳಿದ ಇನ್ನೂ ಕೆಲವು ಅಶುದ್ಧ
ವಾಕ್ಯಗಳು ಕನ್ನಡಭಾಷೆಯನ್ನು ವಿಕಾರಗೊಳಿಸುವಂತಹವಾಗಿವೆ. ಅಂತಹ ವಾಕ್ಯ
ಗಳನ್ನು ವ್ಯಾಕರಣದಲ್ಲಿ ಹೇಳಕೂಡದು.

ಪದಗಳ ಆವಶ್ಯಕತೆ— ಒಂದು ವಿಚಾರವು ಪೂರ್ಣವಾಗುವದಕ್ಕೆ ಹಲವು ಪದಗಳ ಅರ್ಥವು ಬೇಕಾಗುವದು. ಪ್ರತಿ ಒಂದು ಅರ್ಥವನ್ನು ತೋರ್ಪಡಿಸುವದಕ್ಕಾಗಿ ಅದನ್ನು ಹೇಳುವ ಪದವು ವಾಕ್ಯದಲ್ಲಿರಬೇಕು.

ಹುಡುಗಿಯು ಪುಸ್ತಕವನ್ನು ಓದಿದಳು ಎಂಬ ವಾಕ್ಯದಲ್ಲಿ ಓದುವ ಕ್ರಿಯೆಯನ್ನು ಹೇಳುವ ಓದಿದಳು ಎಂಬ ಕ್ರಿಯಾಪದವೂ, ಆ ಕ್ರಿಯೆಯನ್ನು ಮಾಡಿದ ಹುಡುಗಿಯು ಎಂಬ ಕರ್ತೃಪದವೂ ಓದುವ ಕ್ರಿಯೆಗೆ ಕರ್ಮವಾದ ಪುಸ್ತಕವನ್ನು ಎಂಬ ಕರ್ಮಪದವೂ ಆವಶ್ಯಕವಾಗಿರುವವು. ಓದಿದಳು ಎಂಬ ಕ್ರಿಯಾಪದವೊಂದನ್ನೇ ಪ್ರಯೋಗಿಸಿದರೆ ಯಾವಳು ಓದಿದಳು, ಏನನ್ನು ಓದಿದಳು ಎಂಬ ಆಕಾಂಕ್ಷೆಗಳು ಪೂರ್ಣವಾಗುವದಿಲ್ಲ; ಹುಡುಗಿಯು, ಓದಿದಳು ಎಂಬ ಎರಡೇ ಪದಗಳನ್ನು ಪ್ರಯೋಗಿಸಿದರೆ ಏನನ್ನು ಓದಿದಳು ಎಂಬ ಆಕಾಂಕ್ಷೆಯು ಪೂರ್ಣವಾಗುವದಿಲ್ಲ. ಪುಸ್ತಕವನ್ನು ಓದಿದಳು ಎಂಬ ಎರಡೇ ಪದಗಳನ್ನು ಪ್ರಯೋಗಿಸಿದರೆ ಯಾವಳು ಓದಿದಳು ಎಂಬ ಆಕಾಂಕ್ಷೆಯು ಪೂರ್ಣವಾಗುವದಿಲ್ಲ. ಹುಡುಗಿಯು, ಪುಸ್ತಕವನ್ನು, ಓದಿದಳು ಎಂಬ ಒಂದೊಂದೇ ಪದವಾಗಲಿ, ಹುಡುಗಿಯು ಓದಿದಳು, ಪುಸ್ತಕವನ್ನು ಓದಿದಳು ಎಂಬ ಎರಡೆರಡು ಪದಗಳಾಗಲಿ ವಾಕ್ಯಗಳಲ್ಲ. ಹುಡುಗಿಯು ಪುಸ್ತಕವನ್ನು ಓದಿದಳು ಎಂಬ ಮೂರು ಪದಗಳೂ ಸೇರಿದರೆ ವಾಕ್ಯವೆನಿಸುವದು. ಇನ್ನು ಓದುವ ಕ್ರಿಯೆಯು ಮೆಲ್ಲನೆ ನಡೆಯಿತೆಂಬ ರೀತಿಯನ್ನು ಹೇಳುವದು ಬೇಕಾಗಿದ್ದರೆ ಆಗ ಮೆಲ್ಲನೆ ಎಂಬ ಪದವೂ ಬೇಕು; ಅದು ಇಲ್ಲದಿದ್ದರೆ ಆ ವಿಚಾರವು ಪೂರ್ಣವಾಗುವದಿಲ್ಲ. ಆದುದರಿಂದ ಆಗ "ಹುಡುಗಿಯು ಪುಸ್ತಕವನ್ನು ಮೆಲ್ಲನೆ ಓದಿದಳು" ಎಂಬ ನಾಲ್ಕು ಪದಗಳೂ ಆ ವಾಕ್ಯದಲ್ಲಿ ಬೇಕಾಗುವವು. ಈ ಮೇರೆಗೆ ಆಕಾಂಕ್ಷೆಯನ್ನು ಪೂರ್ಣ ಮಾಡುವದಕ್ಕಾಗಿ ಬೇಕಾಗುವ ಪದಗಳೆಲ್ಲ ವಾಕ್ಯದಲ್ಲಿ ಆವಶ್ಯಕವಾಗಿರುವವು.

ಒಂದೇ ಪದದಿಂದ ವಾಕ್ಯವಾಗುವದಿಲ್ಲ— ಕರ್ತರಿಪ್ರಯೋಗದ ವಾಕ್ಯದಲ್ಲಿ ಕ್ರಿಯಾಪದ, ಕರ್ತೃಪದ ಎಂಬಿವೆರಡು ಇರಲೇಬೇಕು. ಸಕರ್ಮಕ ಕ್ರಿಯಾಪದವುಳ್ಳ (ಕರ್ತರಿಪ್ರಯೋಗದ ಇಲ್ಲವೆ ಕರ್ಮಣಿಪ್ರಯೋಗದ) ವಾಕ್ಯದಲ್ಲಿ ಕರ್ಮಪದವೂ ಆವಶ್ಯಕವು. ಆಕಾಂಕ್ಷೆಯನ್ನು ಪೂರ್ಣಮಾಡುವದಕ್ಕೆ ಬೇರೆ ಪದಗಳೂ ವಾಕ್ಯದಲ್ಲಿ ಬರುವದುಂಟು. ಆದದರಿಂದ ವಾಕ್ಯದಲ್ಲಿ

ಹಲವು ಪದಗಳು, ಕನಿಷ್ಠಪಕ್ಷದಲ್ಲಿ ಎರಡು ಪದಗಳು ಇರಬೇಕಾಗುವದು. ಉದಾ—ಕಲ್ಲನು ಬಿದ್ದನು; ಕಲ್ಲನು ಸಾಲೆಯ ದಾರಿಯಲ್ಲಿ ಓಡುವಾಗ ಬಿದ್ದನು; ಕಲ್ಲನು ಪುಸ್ತಕವನ್ನು ಓದಿದನು; ಇವು ವಾಕ್ಯಗಳು. ಆದರೆ ಕಲ್ಲನು, ಸಾಲೆಯ, ಓಡುವಾಗ, ಓದಿದನು ಎಂಬ ಒಂದೊಂದೇ ಪದವಾಗಲಿ ದಾರಿಯಲ್ಲಿ ಓಡುವಾಗ, ಸಾಲೆಯ ದಾರಿಯಲ್ಲಿ, ಪುಸ್ತಕವನ್ನು ಓದಿದನು ಎಂಬ ಎರಡೆರಡು ಪದಗಳಾಗಲಿ ವಾಕ್ಯವಲ್ಲ.

ವಾಕ್ಯದೊಳಗಿನ ಪದಗಳ ಪ್ರಕಾರಗಳು-ವಾಕ್ಯದಲ್ಲಿ ನಾಮಪದ, ಕ್ರಿಯಾಪದ, ಅವ್ಯಯಪದ ಎಂಬ ಮೂರು ಪ್ರಕಾರದ ಪದಗಳಿರುವವು. ಉದಾ— ದನಗಳು ಬೇಸಗೆಯ ಬಿಸಿಲ ಕಾಯ್ಪಿನಿಂದ ಬಾಯಾರಿ ಓಡುತ್ತ ಬಂದು ಕೆರೆಯಲ್ಲಿ ನೀರನ್ನು ಕುಡಿಯುತ್ತವೆ. ಈ ವಾಕ್ಯದಲ್ಲಿ ದನಗಳು, ಬೇಸಗೆಯ, ಬಿಸಿಲ, ಕಾಯ್ಪಿನಿಂದ, ಕೆರೆಯಲ್ಲಿ, ನೀರನ್ನು ಇವು ನಾಮಪದಗಳು. ಕುಡಿಯುತ್ತವೆ ಇದು ಕ್ರಿಯಾಪದವು. ಬಾಯಾರಿ, ಓಡುತ್ತ, ಬಂದು ಇವು ಅವ್ಯಯಪದಗಳು.

ವಾಕ್ಯರಚನಾ ಪ್ರಕಾರಗಳು — ಕರ್ತ್ರರ್ಥಕ ಕ್ರಿಯಾಪದಕ್ಕೆ ಸಂಬಂಧಿಸುವಂತೆ ಪದಗಳನ್ನು ಸೇರಿಸಿಯಾಗಲಿ, ಕರ್ಮಾರ್ಥಕ ಕ್ರಿಯಾಪದಕ್ಕೆ ಸಂಬಂಧಿಸುವಂತೆ ಪದಗಳನ್ನು ಸೇರಿಸಿಯಾಗಲಿ, ವಾಕ್ಯವನ್ನು ರಚಿಸಬಹುದು ಹೀಗೆ ಕರ್ತರಿ ಪ್ರಯೋಗದ ವಾಕ್ಯರಚನೆಯೂ, ಕರ್ಮಣಿ ಪ್ರಯೋಗದ ವಾಕ್ಯರಚನೆಯೂ ರೂಢವಾಗಿವೆ.

ಅಧ್ಯಾಹಾರ — ವಾಕ್ಯದಲ್ಲಿ ಸಹಜವಾಗಿ ತೋರುವ ಕೆಲವು ಪದಗಳನ್ನು ಪ್ರಯೋಗಿಸದೆ ಬಿಡುವದುಂಟು. ಆ ಬಿಟ್ಟ ಪದಗಳನ್ನು ವಾಕ್ಯಾರ್ಥಜ್ಞಾನಕ್ಕಾಗಿ ಸೇರಿಸಿಕೊಳ್ಳಬೇಕು. ಇದನ್ನು ಅಧ್ಯಾಹಾರವೆನ್ನುವರು. ಉದಾ—ರಾಮಾ, ಆ ನೀಚನನ್ನು ಹೊರಗೆ ನೂಕು; ಈ ವಾಕ್ಯದಲ್ಲಿ ನೀನು ಎಂಬ ಪದವು ಅಧ್ಯಾಹೃತವಾಗುವದು. ರಾಮನು ಏನು ಮಾಡುತ್ತಾನೆ ಎಂಬ ಪ್ರಶ್ನೆಗೆ ಮಲಗಿದ್ದಾನೆ ಎಂಬ ಒಂದೇ ಪದವು ಉತ್ತರವಾಕ್ಯವಾಗಿದ್ದರೂ ಅಲ್ಲಿ 'ರಾಮನು' ಎಂಬ ಕರ್ತೃಪದವು ಅಧ್ಯಾಹೃತವಾಗುವದು.

ವಾಕ್ಯದೊಳಗಿನ ಬೇರೆ ಪದಗಳು— ಕರ್ತೃಪದ, ಕರ್ಮಪದ, ಕ್ರಿಯಾಪದಗಳಲ್ಲದೆ ವಾಕ್ಯದಲ್ಲಿ ಬೇರೆ ಹಲವು ಪದಗಳಿರಬಹುದು. ಅವು ಯಾವವೆಂದರೆ—

(ಅ) **ಕರ್ತೃಪದದ ವಿಶೇಷಣಗಳು**:— ಉದಾ— ಕಡುಗಲಿಯಾದ ಕೃಷ್ಣನು ಕಂಸನನ್ನು ಸಂಹರಿಸಿದನು.

(ಆ) **ಕರ್ಮಪದದ ವಿಶೇಷಣಗಳು**:— ಉದಾ— ಕಡುಗಲಿಯಾದ ಕೃಷ್ಣನು ದುಷ್ಟನಾದ ಕಂಸನನ್ನು ಸಂಹರಿಸಿದನು.

(ಇ) **ಕ್ರಿಯಾಪದದ ವಿಶೇಷಣಗಳು**:— ಉದಾ— ಕಡುಗಲಿಯಾದ ಕೃಷ್ಣನು ದುಷ್ಟನಾದ ಕಂಸನನ್ನು **ಥಟ್ಟನೆ** ಸಂಹರಿಸಿದನು.

(ಈ) ಕರ್ತೃಕರ್ಮಗಳನ್ನುಳಿದ ಬೇರೆ ಕಾರಕಗಳು:—ಉದಾ— ಕಡುಗಲಿಯಾದ ಕೃಷ್ಣನು ದುಷ್ಟನಾದ ಕಂಸನನ್ನು ಲೋಕಕಲ್ಯಾಣಕ್ಕೆ ಮಥುರೆಯ ಅರಮನೆಯಲ್ಲಿ ಬಾಣದಿಂದ ಸಂಹರಿಸಿದನು.

(ಉ) ಮೇಲೆ ಹೇಳಿದ ಬೇರೆ ಕಾರಕಗಳ ವಿಶೇಷಣಗಳು; ಉದಾ—ಕಡುಗಲಿಯಾದ ಕೃಷ್ಣನು ದುಷ್ಟನಾದ ಕಂಸನನ್ನು ಲೋಕಕಲ್ಯಾಣಕ್ಕೆ ಅವನ ಅನುಯಾಯಿಗಳಿಂದ ತುಂಬಿದ ಮಥುರೆಯ ಅರಮನೆಯಲ್ಲಿ ಒಂದು ಬಾಣದಿಂದ ಥಟ್ಟನೆ ಸಂಹರಿಸಿದನು. ಇಲ್ಲಿ ತುಂಬಿದ, ಒಂದು ಇಂಬಿವು ಕ್ರಮದಿಂದ ಅಧಿಕರಣ, ಕರಣ ಕಾರಕಗಳ ವಿಶೇಷಣಗಳು.

(ಊ) ಕಾರಕಾರ್ಥಗಳನ್ನಲ್ಲದೆ ಬೇರೆ ಅರ್ಥಗಳನ್ನು ಹೇಳುವ ವಿಭಕ್ತಿಪದಗಳು.

ಉದಾ— ಹೇತ್ವರ್ಥದ ತೃತೀಯೆ— ಮಳೆಯಿಂದ ಬೆಳೆ ಬರುವದು. ನಿರ್ಧಾರಣ ಸಪ್ತಮಿ— ನಡೆಯುವವರಲ್ಲಿ ಓಡುವವನು ಮುಂದೆ ಹೋಗುವನು. ಸಂಬೋಧನ— ಹನುಮಂತನೇ, ಸೀತೆಯ ಸುದ್ದಿಯನ್ನು ಮೊದಲು ಹೇಳು. ಮುಂ.

(ಋ) ಕ್ರಿಯಾಪದಕ್ಕೆ ಸಂಬಂಧಿಸಿದ ಕೃದಂತಾವ್ಯಯಗಳು. ಉದಾ- ಉತ್ತಮರು ಧನವನ್ನು ಅಪೇಕ್ಷಿಸದೆ ಮಾನವನ್ನು ಅಪೇಕ್ಷಿಸುವರು. ಉತ್ತಮರು ಧನವನ್ನು ಅಪೇಕ್ಷಿಸಿ ಮಾನವನ್ನು ಅಪೇಕ್ಷಿಸುವರು. ಉತ್ತಮರು ಧನವನ್ನು ಅಪೇಕ್ಷಿಸುತ್ತ ಮಾನವನ್ನು ಅಪೇಕ್ಷಿಸುವರು.

ಅಧಮರು ಧನವನ್ನು ಅಪೇಕ್ಷಿಸಿದರೆ ಉತ್ತಮರು ಮಾನವನ್ನು ಅಪೇಕ್ಷಿಸುವರು. ಅಧಮರು ಧನವನ್ನು ಅಪೇಕ್ಷಿಸಲು ಉತ್ತಮರು ಮಾನವನ್ನು ಅಪೇಕ್ಷಿಸುವರು. ಇಲ್ಲಿ ಅಪೇಕ್ಷಿಸದೆ, ಅಪೇಕ್ಷಿಸಿ ಮುಂತಾದವು ಕೃದಂತಾವ್ಯಯಗಳು.

ವಾಕ್ಯಗಳಲ್ಲಿ ಪದಗಳ ಸಂಬಂಧ- ಷಷ್ಠೀ ಸಂಬೋಧನಗಳ ಹೊರತ
ಬೇರೆ ಎಲ್ಲ ವಿಭಕ್ತಿಗಳ ನಾಮಪದಗಳು ಬಹುಶಃ ವಾಕ್ಯದಲ್ಲಿ ಕ್ರಿಯಾಪದಕ್ಕೆ
ಸಂಬಂಧಿಸುವವು. ಉದಾ-ಒಂದು ದಿವಸ ವೇದವ್ಯಾಸ ಮುನಿಯು ಹಸ್ತಿನಾ
ವತಿಯಲ್ಲಿ ತತ್ತ್ವೋಪದೇಶದಿಂದ ಧರ್ಮರಾಜನನ್ನು ಸಮಾಧಾನಗೊಳಿ
ದನು. ಇಲ್ಲಿ ಎಲ್ಲ ನಾಮಪದಗಳು ಕ್ರಿಯಾಪದಕ್ಕೆ ಸಂಬಂಧಿಸಿವೆ. (ಎಂದು
ಯಾರು, ಎಲ್ಲಿ, ಏತರಿಂದ, ಯಾರನ್ನು ಸಮಾಧಾನಗೊಳಿಸಿದನು ಎಂಬ ಪ್ರಶ್ನೆ
ಗಳಿಂದ ಕ್ರಿಯಾಪದಕ್ಕೆ ಇರುವ ಅವುಗಳ ಸಂಬಂಧವು ಗೊತ್ತಾಗುವದು.

ಷಷ್ಠೀ ಸಂಬೋಧನಗಳು ಅವುಗಳಿಗೆ ಸಂಬಂಧಿಸಿದ ನಾಮಪದಗಳಿ
ಸಂಬಂಧಿಸುವವು. ಉದಾ— ಮಗಳೇ, ಅತ್ತೆಮಾವಂದಿರ ಸೇವೆಯನ್ನು
ಮಾಡು. ಇಲ್ಲಿ ಮಗಳೇ ಎಂಬ ಸಂಬೋಧನ ಪದವು, ನೀನು ಎಂಬ ಅಧ್ಯಾ
ಹೃತ ನಾಮಪದಕ್ಕೂ, ಅತ್ತೆಮಾವಂದಿರ ಎಂಬ ಷಷ್ಠ್ಯಂತಪದವು ಸೇವೆ
ಯನ್ನು ಎಂಬ ನಾಮಪದಕ್ಕೂ ಸಂಬಂಧಿಸಿವೆ.

ಕೃನ್ನಾಮಗಳೂ, ಕೃದ್‌ಭಾವನಾಮಗಳೂ, ಕೃದಂತಾವ್ಯಯಗಳೂ
ಕ್ರಿಯೆಯನ್ನು ಹೇಳುವವಾದದರಿಂದ ಅವುಗಳಿಗೂ ಕ್ರಿಯಾಪದಕ್ಕೆ ಸಂಬಂಧಿ
ಸುವಂತೆ ಎಲ್ಲ ತರದ ಪದಗಳು ಸಂಬಂಧಿಸುವವು. ಉದಾ—

ಕೃನ್ನಾಮಗಳಿಗೆ — ಕರ್ತೃಕರ್ಮಗಳು-ರಾಮನು ಶಾಸ್ತ್ರಗಳನ್ನು
ಕಲಿತವನಾಗಿ ರಾಮಶಾಸ್ತ್ರಿಯೆನಿಸಿಕೊಂಡನು. ಇಲ್ಲಿ ಕಲಿತವನು ಎಂಬ
ಕೃನ್ನಾಮಕ್ಕೆ ರಾಮನು, ಶಾಸ್ತ್ರಗಳನ್ನು ಎಂಬಿವು ಕರ್ತೃಕರ್ಮಗಳಾಗಿ
ಸಂಬಂಧಿಸಿವೆ.

ಬೇರೆ ಕಾರಕಗಳು— ದಾರಿಯಲ್ಲಿ ಎಡಬಲಗಳನ್ನು ಕಣ್ಣುಗಳಿಂದ
ನೋಡುವವನು ಅವುಗಳನ್ನು ಉಪಯೋಗಿಸಿಕೊಂಡಂತೆ ಆಗುವದು. ಇಲ್ಲಿ
ದಾರಿಯಲ್ಲಿ ಕಣ್ಣುಗಳಿಂದ ಎಂಬ ಅಧಿಕರಣ, ಕರಣ ಕಾರಕಗಳು ನೋಡು
ವವನು ಎಂಬ ಕೃನ್ನಾಮಕ್ಕೆ ಸಂಬಂಧಿಸಿವೆ.

ವಿಶೇಷಣಗಳು— ಬುದ್ಧಿಶಾಲಿಯಾದ ರಾಮನು ಎಲ್ಲ ಶಾಸ್ತ್ರಗಳನ್ನು
ಚೆನ್ನಾಗಿ ಕಲಿತವನಾಗಿ.... ಇಲ್ಲಿ ಬುದ್ಧಿಶಾಲಿಯಾದ, ಎಲ್ಲ, ಚೆನ್ನಾಗಿ ಎಂಬಿವು
ಕ್ರಮದಿಂದ ಕೃನ್ನಾಮದ ಕರ್ತೃ ಕರ್ಮ, ಕ್ರಿಯೆಗಳ ವಿಶೇಷಣಗಳಾಗಿವೆ.

ಕೃದ್‌ಭಾವನಾಮಗಳಿಗೆ— ಕುಂಬಾರನು ಗಡಿಗೆಮಡಿಕೆಗಳನ್ನು ಮಾಡುವದು ಬ್ರಹ್ಮಸೃಷ್ಟಿಯನ್ನು ಹೋಲುತ್ತದೆ? ಬೇಟೆಗಾರನು ಪ್ರಾಣಿಗಳನ್ನು ಕೊಲ್ಲುವದು ಪಾಪಕರವಲ್ಲವೋ? ಇಲ್ಲಿ ಕುಂಬಾರನು, ಬೇಟೆಗಾರನು ಎಂಬ ಕರ್ತೃಗಳೂ ಗಡಿಗೆ ಮಡಿಕೆಗಳನ್ನು, ಪ್ರಾಣಿಗಳನ್ನು ಎಂಬ ಕರ್ಮಗಳೂ ಕ್ರಮದಿಂದ ಮಾಡುವದು, ಕೊಲ್ಲುವದು, ಎಂಬ ಕೃದ್‌ಭಾವನಾಮಗಳಿಗೆ ಸಂಬಂಧಿಸಿವೆ.

ಕೃದಂತಾವ್ಯಯಗಳಿಗೆ—

ಬುದ್ಧಿವಂತನಾದ	ರಂಗನು	ಹಲವು	ಪುಸ್ತಕಗಳನ್ನು	ಓದಿ	ಜಾಣನಾದನು.
,,	,,	,,	,,	ಓದದೆ	,,
,,	,,	,,	,,	ಓದುತ್ತ	,,
,,	,,	,,	,,	ಓದಲು	,,

ಇಲ್ಲಿ ಓದಿ, ಓದದೆ, ಮೊದಲಾದ ಕೃದಂತಾವ್ಯಯಗಳಿಗೆ ರಂಗನು, ಪುಸ್ತಕಗಳನ್ನು ಎಂಬಿವು ಕರ್ತೃಕರ್ಮಗಳಾಗಿ ಸಂಬಂಧಿಸಿವೆ. ಇದೇ ಮೇರೆಗೆ ಅವುಗಳ ವಿಶೇಷಣಗಳೂ ಬೇರೆ ಕಾರಕಗಳೂ ಸಂಬಂಧಿಸಿದ ಉದಾಹರಣೆಗಳನ್ನು ಊಹಿಸಿಕೊಳ್ಳಬೇಕು.

ವಾಕ್ಯದಲ್ಲಿ ಪದಗಳ ಸ್ಥಾನವು— ಮೊದಲು ಕರ್ತೃಪದವು, ಬಳಿಕ ಕರ್ಮಪದವು, ಕೊನೆಯಲ್ಲಿ ಕ್ರಿಯಾಪದವು ಈ ಮೇರೆಗೆ ವಾಕ್ಯದಲ್ಲಿ ಪದಗಳಿರುವವು. ಅವುಗಳ ವಿಶೇಷಣಗಳು ಅವುಗಳ ಹಿಂದೆಯೂ, ಉಳಿದ ಕಾರಕಗಳು ಸಂದರ್ಭಾನುಸಾರವಾಗಿ ಅಲ್ಲಲ್ಲಿಯೂ ಇರುವವು. ಉದಾ—

ಭೀಮಸೇನನು (ಕರ್ತೃ) ಬಕಾಸುರನನ್ನು (ಕರ್ಮ), ಕೊಂದನು. (ಕ್ರಿಯಾಪದ.)

ಬಲಶಾಲಿಯಾದ ಭೀಮಸೇನನು ನೀಚನಾದ ಬಕಾಸುರನನ್ನು ತಟ್ಟನೆ ಕೊಂದನು; ಇಲ್ಲಿ ವಿಶೇಷಣಗಳು ಕರ್ತೃ-ಕರ್ಮ-ಕ್ರಿಯಾಪದಗಳ ಹಿಂದೆ ಇವೆ.

ಏಕಚಕ್ರನಗರದಲ್ಲಿ ಬಲಶಾಲಿಯಾದ ಭೀಮಸೇನನು ನೀಚನಾದ ಬಕಾಸುರನನ್ನು ತಾಯಿಯ ಅಪ್ಪಣೆಯಿಂದ ತಟ್ಟನೆ ಕೊಂದನು. ಇಲ್ಲಿ ಏಕಚಕ್ರನಗರದಲ್ಲಿ ಎಂಬ ಅಧಿಕರಣ ಕಾರಕವೂ, ಅಪ್ಪಣೆಯಿಂದ ಎಂಬ ಹೇತ್ವರ್ಥಕ ಪಂಚಮಿಯೂ ಅಲ್ಲಲ್ಲಿ ಬಂದಿವೆ.

ವಾಕ್ಯದೊಳಗಿನ ಪದಗಳು ಮೇಲೆ ಹೇಳಿದ ಕ್ರಮದಿಂದಲೇ ಇರ ಕೆಂಬ ನಿಯಮವಿಲ್ಲ; ಕೇಳುವವರ ಮನಸ್ಸಿನಲ್ಲಿ ಯಾವ ಪದದ ವಿಚಾ ವನ್ನು ಮೊದಲು ಹುಟ್ಟಿಸಬೇಕೆಂದಿರುವದೋ ಆ ಪದವನ್ನು ಮೊದ ಪ್ರಯೋಗಿಸುವದುಂಟು; ಉದಾ— ಗುರುಗಳೇ, ಬಂದರು ಸಾಹೇಬ ಕಲ್ಲಾ ಒದೆ ಆ ಕಳ್ಳನನ್ನು; ನೋಡಿದಿರಾ ಇವರ ಜಾಣತನವನ್ನು ರಾಯ ನಮಸ್ಕಾರವಿರಲಿ ನಿಮ್ಮ ಮೂರ್ಖತನಕ್ಕೆ; ಈ ವಾಕ್ಯಗಳಲ್ಲಿ ಕರ್ತೃ, ಕರ ಕ್ರಿಯಾಪದಗಳ ಸ್ಥಾನವು ವ್ಯತ್ಯಾಸವಾಗಿದೆ.

ಹೆಚ್ಚಿಗೆ ವಿಶೇಷಣಗಳುಳ್ಳ ಪದಗಳನ್ನು ಮೊದಲು ಪ್ರಯೋಗಿಸಬೇ ಉದಾ—ಗಾಳಿಯು ಹೊಡೆತಕ್ಕೇಳುವ ತೆರೆಗಳಿಂದ ಸಿಡಿವ ತುಷಾರಗ ಸೂರ್ಯಕಿರಣಗಳು ಪ್ರತಿಫಲಿಸಿ ಇಂದ್ರಧನುಸ್ಸುಗಳನ್ನುಂಟುಮಾಡು ನೋಡಿದತ್ತೆಲ್ಲ ಕೆಂದಾವರೆ, ಹೊಂದಾವರೆ, ಬೆಳ್ದಾವರೆಗಳಿಂದ ಶೋಭಿಸ ಅವುಗಳ ಮಕರಂದಕ್ಕೆರಗಿ ಭ್ರಮರಗಳು ಝೇಂಕರಿಸುವ ಅಚ್ಛೋದಸರೋ ವರವನ್ನು ಚಂದ್ರಾಪೀಡನು ಕಂಡು ಆನಂದಭರಿತನಾದನು. ಇಲ್ಲಿ ಚಂದ ಪೀಡನು ಎಂಬ ಕರ್ತೃಪದಕ್ಕಿಂತ ಮೊದಲು ಅಚ್ಛೋದಸರೋವರವನ ಎಂಬ ಕರ್ಮಪದವು ಬಂದಿದೆ. ಪ್ರಾಚೀನ ಕಾಲದಲ್ಲಿ ಕೌರವಪಾಂಡವ ರಾಜಧಾನಿಯಾಗಿಯೂ, ಅರ್ವಾಚೀನಕಾಲದಲ್ಲಿ ಅನೇಕ ಕ್ಷತ್ರಿಯರಾಜ ಸಡಗರದ ಲೀಲಾಭೂಮಿಯಾಗಿಯೂ, ಹೆಸರುಪಡೆದ ದಿಲ್ಲಿಯಲ್ಲಿ ಕರ್ಜನ ದೊರೆಗಳು ಚಕ್ರವರ್ತಿಗಳ ಪಟ್ಟಾಭಿಷೇಕ ಸಮಾರಂಭದ ಓಲಗವನ ನೆರೆಯಿಸಿದರು. ಇಲ್ಲಿ ಕರ್ತೃವಿಗಿಂತ ಅಧಿಕರಣವು ಮೊದಲಲ್ಲಿದೆ.

ಕ್ರಿಯಾಪದಗಳ ಕಾಲ, ಪುರುಷ, ಲಿಂಗ, ವಚನಗಳು.

(ಸಾಮಾನ್ಯ ನಿಯಮಗಳ ಅಪವಾದಗಳು.)

ಕಾಲ— (೧) ಕಾಲಸಾಮೀಪ್ಯವು ಇಲ್ಲವೆ ಕ್ರಿಯಾನಿಶ್ಚಯ ತೋರುವಾಗ ಭವಿಷ್ಯತ್ಕಾಲದ ಕ್ರಿಯಾಪದದ ಸ್ಥಳದಲ್ಲಿ ವರ್ತಮಾನಕಾಲ ಕ್ರಿಯಾಪದವು ಬರುವದು. ಉದಾ—

ಕಾಲಸಾಮೀಪ್ಯಕ್ಕೆ— ನಾನು ಇನ್ನು ದೇವಾಲಯಕ್ಕೆ ಹೋಗುತ್ತೇನ (ಹೋಗುವೆನು.) ಬಳಿಕ ನಿನ್ನ ಮಾತನ್ನು ಕೇಳುತ್ತೇನೆ. (ಕೇಳುವೆನು

ಕ್ರಿಯಾನಿಶ್ಚಯಕ್ಕೆ- ನಾನು ಸಾಯಂಕಾಲ ನಿಮ್ಮ ಮನೆಗೆ ಬರುತ್ತೇನೆ. (ಬರುವೆನು.) ಉಗಿಬಂಡಿಯು ಸರಿಯಾದ ವೇಳೆಗೆ ಬರುತ್ತದೆ (ಬರುವದು).

(೨) ಕಾಲಸಾಮೀಪ್ಯ ನಿಶ್ಚಯಗಳು ತೋರುವಾಗ. ಒಮ್ಮೊಮ್ಮೆ ವರ್ತಮಾನಕಾಲದ ಕ್ರಿಯಾಪದದ ಸ್ಥಳದಲ್ಲಿ ಭವಿಷ್ಯತ್ಕಾಲದ ಕ್ರಿಯಾಪದವನ್ನು ಪ್ರಯೋಗಿಸುವರು. ಉದಾ— ಈಗಲೇ ಊರಿಗೆ ಹೋಗುವೆನು. (ಹೋಗುತ್ತೇನೆ.)

(೩) ತ್ವರೆಯು ಇಲ್ಲವೆ ನಿಶ್ಚಯವು ತೋರುವಾಗ ವರ್ತಮಾನ ಭವಿಷ್ಯತ್ಕಾಲಗಳ ಕ್ರಿಯಾಪದಗಳ ಸ್ಥಳದಲ್ಲಿ ಭೂತಕಾಲದ ಕ್ರಿಯಾಪದವು ಬರುವದು ಉದಾ—ತ್ವರೆಗೆ ಹಾ! ನಾನು ಬಂದೆನು; (ಬರುವೆನು) ನೀನು ಮುಂದೆ ನಡೆ. ನಿಶ್ಚಯಕ್ಕೆ ಈಗ ನಾನೇ ಹೊರಟೆನು; (ಹೊರಡುತ್ತೇನೆ.) ಇನ್ನು ಅವನ ಅವಸ್ಥೆ ಮುಗಿಯಿತು. (ಮುಗಿಯುವದು.)

(೪) ಹಿಂದೆ ಆಗಿ ಹೋದ ಮಾತನ್ನು ಪ್ರತ್ಯಕ್ಷವಾಗಿ ನಡೆದಂತೆ ಹೇಳುವಾಗ ಭೂತಕಾಲದ ಕ್ರಿಯಾಪದದ ಸ್ಥಳದಲ್ಲಿ ವರ್ತಮಾನಕಾಲದ ಇಲ್ಲವೆ ಭವಿಷ್ಯತ್ಕಾಲದ ಕ್ರಿಯಾಪದವು ಬರುವದು. ಉದಾ—ಆಗ ದಮನಕವು ಹೀಗೆ ಹೇಳುತ್ತದೆ; ಇಲ್ಲವೆ ಹೇಳುವದು. (ಹೇಳಿತು ಇದರ ಸ್ಥಳದಲ್ಲಿ) ಆವಾಗ ಧರ್ಮರಾಜನು ತಮ್ಮಂದಿರನ್ನು ಈಮೇರೆಗೆ ಉಪದೇಶಿಸುತ್ತಾನೆ; ಇಲ್ಲವೆ ಉಪದೇಶಿಸುವನು. (ಉಪದೇಶಿಸಿದನು ಇದರ ಸ್ಥಳದಲ್ಲಿ)

ನಾನು ಆ ದಿವಸ ಶಾಲೆಯನ್ನು ಹೊಕ್ಕು ನೋಡುತ್ತೇನೆ— ಶಿಕ್ಷಕರು ಕೆಲಸದಲ್ಲಿದ್ದಾರೆ; (ಇದ್ದರು.) ವಿದ್ಯಾರ್ಥಿಗಳು ಅಭ್ಯಾಸವನ್ನು ಮಾಡುತ್ತಾರೆ; (ಮಾಡಿದರು.) ಇದರಿಂದ ನನ್ನ ಮನಸ್ಸು ಹರ್ಷಗೊಂಡಿತು.

ಪುರುಷ—ಉತ್ತಮ ಪುರುಷದ ಕರ್ತೃವೂ ಬೇರೆ ಪುರುಷಗಳ ಕರ್ತೃಗಳೂ ಒಂದೇ ವಾಕ್ಯದಲ್ಲಿದ್ದರೆ ಕ್ರಿಯಾಪದವು ಉತ್ತಮಪುರುಷದ್ದಾಗುವದು. ಮಧ್ಯಮಪುರುಷದ ಕರ್ತೃವೂ ಪ್ರಥಮಪುರುಷದ ಕರ್ತೃವೂ ಒಂದೇ ವಾಕ್ಯದಲ್ಲಿದ್ದರೆ ಕ್ರಿಯಾಪದವು ಮಧ್ಯಮಪುರುಷದ್ದಾಗುವದು ಉದಾ—ನೀನೂ ನಾನೂ ಅಕ್ಕನೂ ಆಡಿದೆವು; ನಾನೂ ನೀನೂ ಆಡಿದೆವು; ನಾನೂ ಅಕ್ಕನೂ ಆಡಿದೆವು; ನೀನೂ ಅಕ್ಕನೂ ಆಡಿದಿರಿ.

ವಿಧ್ಯರ್ಥದ ಪ್ರ ಪು. ದ ಕ್ರಿಯಾಪದವು ಮಧ್ಯಮೋತ್ತಮ-ಪುರುಷ ಗಳ ಕರ್ತೃವಿದ್ದಾಗಲೂ ಬರುವದು. ಉದಾ— ನಾನು ಏನು ಮಾಡಲಿ ? ನಾವು ಮಾಡಲಿ, ನೀವು ಮಾಡಲಿ ಎಲ್ಲವೂ ಒಂದೇ.

ಲಿಂಗ— ಬೇರೆ ಬೇರೆ ಲಿಂಗಗಳ ಹಲವು ಕರ್ತೃಪದಗಳು ಒಂದು ವಾಕ್ಯದಲ್ಲಿದ್ದರೆ ಕ್ರಿಯಾಪದಕ್ಕೆ ಕೊನೆಯ ಕರ್ತೃಪದದ ಲಿಂಗವು ಬರುವದು. ಉದಾ- ಅರಸನೂ ಅರಸಿಯೂ ಸೇನೆಯೂ ಬಂದವು; ಸೇನೆಯೂ ಅರಸನೂ ಅರಸಿಯೂ ಬಂದರು; ಅರಸಿಯೂ ಸೇನೆಯೂ ಅರಸನೂ ಬಂದರು.

ವಚನ— (೧) ಕರ್ತರಿಪ್ರಯೋಗದಲ್ಲಿ ಕರ್ತೃಪದದ ವಚನವನ್ನೂ ಕರ್ಮಣಿಪ್ರಯೋಗದಲ್ಲಿ ಕರ್ಮಪದದ ವಚನವನ್ನೂ ಕ್ರಿಯಾಪದವು ಹೊಂದುವದು. ಉದಾ—ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದನು. ಲಕ್ಷ್ಮೀಶನಿಂದ ಜೈಮಿನಿಭಾರತವು ರಚಿಸಲ್ಪಟ್ಟಿತು.

(೨) ಒಂದು ಕ್ರಿಯಾಪದಕ್ಕೆ ಸಂಬಂಧಿಸಿದ ಹಲವು ಕರ್ತೃಗಳಿದ್ದರೆ ಕ್ರಿಯಾಪದವು ಬಹುವಚನದ್ದಾಗುವದು. ಉದಾ— ನಾಗವರ್ಮನೂ, ಕೇಶಿ ರಾಜನೂ, ಭಟ್ಟಾಕಲಂಕನೂ ಕನ್ನಡದ ವ್ಯಾಕರಣವನ್ನು ರಚಿಸಿದರು.

(೩) ಒಂದು ಕ್ರಿಯಾಪದಕ್ಕೆ ಸಂಬಂಧಿಸಿದ ಹಲವು ಕರ್ತೃಗಳಿಗೆ ಬೇರೆ ಕಾರಕಗಳೂ ವಿಶೇಷಣಗಳೂ ಕೃದಂತಾವ್ಯಯಗಳೂ ಸಂಬಂಧಿಸಿದ್ದರೆ ಕ್ರಿಯಾ ಪದವು ವಿಕಲ್ಪವಾಗಿ ಏಕವಚನದ್ದಾಗುವದು. ಉದಾ—ನಾಗವರ್ಮನಿಂದ ಭಾಷಾಭೂಷಣವೂ ಕೇಶಿರಾಜನಿಂದ ಶಬ್ದಮಣಿದರ್ಪಣವೂ, ಭಟ್ಟಾಕಲಂಕ ನಿಂದ ಶಬ್ದಾನುಶಾಸನವೂ ರಚಿಸಲ್ಪಟ್ಟಿತು; ಇಲ್ಲವೆ ರಚಿಸಲ್ಪಟ್ಟವು. ಕನ್ನಡ ದಲ್ಲಿ ರಚಿತವಾದ ಶಬ್ದಮಣಿದರ್ಪಣವೂ, ಸಂಸ್ಕೃತದಲ್ಲಿ ರಚಿತವಾದ ಶಬ್ದಾನು ಶಾಸನವೂ ಪ್ರಮಾಣಗ್ರಂಥವೆನಿಸಿಕೊಂಡಿದೆ; ಇಲ್ಲವೆ ಎನಿಸಿಕೊಂಡಿವೆ. ಶಬ್ದಮಣಿದರ್ಪಣವನ್ನು ರಚಿಸಿ ಕೇಶಿರಾಜನೂ ಶಬ್ದಾನುಶಾಸನವನ್ನು ರಚಿಸಿ ಭಟ್ಟಾಕಲಂಕನೂ ಹೆಸರಾದನು; ಇಲ್ಲವೆ ಹೆಸರಾದರು.

(೪) ಗೌರವ ಅಪಹಾಸಗಳು ತೋರುವಾಗ ಏಕವಚನಕ್ಕೆ ಬಹುವಚ ನವೂ ಬರುವದು; ಉದಾ-ಗೌರವಕ್ಕೆ-ಸ್ವಾಮಿಗಳು ನಮ್ಮ ಊರಿಗೆ ಬಿಜಯ ಮಾಡಿದರು. ಅಪಹಾಸಕ್ಕೆ-ರಾಯರೇ ನೀವೂ ದಕ್ಷಿಣೆಗೆ ಕೈನೀಡಿದಿರಾ ?

(೫) ಜಾತಿವಾಚಕ ಕರ್ತೃಪದವನ್ನು ಏಕವಚನದಲ್ಲಿ ಪ್ರಯೋಗಿಸಿದಾಗ ಕ್ರಿಯಾಪದವನ್ನು ಬಹುವಚನದಲ್ಲಿಯೂ ಪ್ರಯೋಗಿಸುವದುಂಟು. ಉದಾ—ಆನೆ ಬಂದವು; ಮುಳ್ಳು ಚುಚ್ಚಿದವು; ಕಣ್ಣು ಕಾಣಿಸಿದವು.

(೬) ದೇವರು, ಎಂಬ ಬಹುವಚನದ ಪದವನ್ನು ಏಕವಚನದಂತೆ ಪ್ರಯೋಗಿಸುವ ವಾಡಿಕೆಯುಂಟು. ಉದಾ—ದೇವರು ದಯೆದೋರಿದನು.

ಸರ್ವನಾಮಗಳ ಪ್ರಯೋಗ— ವಾಕ್ಯದಲ್ಲಿ ಒಮ್ಮೆ ಒಂದು ನಾಮಪದವು ಬರಲು ಮತ್ತೆ ಅದರ ವಿಷಯವಾಗಿ ಮಾತಾಡುವದಾದರೆ ಅಲ್ಲಿ ಸರ್ವನಾಮವನ್ನು ಪ್ರಯೋಗಿಸಬೇಕು. ಉದಾ— ಆಕಳು ಸಭ್ಯವಾದ ಪ್ರಾಣಿಯು; ಅದು ಹುಲ್ಲನ್ನು ಮೇಯುತ್ತದೆ. ಮನುಷ್ಯನು ಎಷ್ಟು ಬುದ್ಧಿವಂತನಾದರೂ ಅವನು ತಿಳಿಯದ ವಿಷಯಗಳು ಹಲವು ಉಂಟು.

ಯಾವದು, ಅದು ಎಂಬ ಸರ್ವನಾಮಗಳು ಪರಸ್ಪರ ಸಂಬಂಧವುಳ್ಳವು ಕ್ರಿಯಾಸಂಬಂಧವನ್ನು ಹೆಚ್ಚಿಗೆ ವ್ಯಕ್ತಮಾಡಿ ಹೇಳುವಾಗ ವಾಕ್ಯವನ್ನು ವಿಭಾಗಿಸಿ ಒಂದು ವಾಕ್ಯಭಾಗದಲ್ಲಿ ಯಾವದು ಶಬ್ದದ ರೂಪವನ್ನೂ, ಇನ್ನೊಂದು ವಾಕ್ಯಭಾಗದಲ್ಲಿ ಅದು ಶಬ್ದದ ರೂಪವನ್ನೂ ಪ್ರಯೋಗಿಸಬೇಕು. ಉದಾ-ಕೆಲಸ ಮಾಡುವವನು ಸುಖಬಡುವನು; (ಈ ವಾಕ್ಯವನ್ನು ವಿಭಾಗಿಸಿದರೆ) ಯಾವನು ಕೆಲಸಮಾಡುವವನು ಅವನು ಸುಖಬಡುವನು; ಪೂರ್ವಭಾಗದ ಕೊನೆಯಲ್ಲಿ ಓ ಎಂಬ ಅವ್ಯಯವನ್ನು ಪ್ರಯೋಗಿಸುವದುಂಟು. ಯಾವನು ಕೆಲಸ ಮಾಡುವವನೋ ಅವನು ಸುಖಬಡುವನು, ಯಾವಳು ನಗುವಳೋ ಅವಳ ಹಲ್ಲು ಕಾಣಿಸುವವು; ಯಾವದು ಓಡುವದೋ ಅದಕ್ಕೆ ದಣಿವಾಗುವದು.

ಪ್ರಶ್ನಾರ್ಥಕವಾದ ಪು ಸ್ತ್ರೀ. ಬಹುವಚನದ ಯಾರು (ಯಾರು) ಎಂಬುದು ಏಕವಚನದಲ್ಲಿಯೂ ಪ್ರಯೋಗಿಸಲ್ಪಡುವದು. ಉದಾ-ಅವನು ಯಾರು? ಹೋದವನು ಯಾರು? ನೀನು ಆರು ಎಂಬ ಅರಿವು ಆಗೆ ಸಾಕು (ರತ್ನಾ. ಶತಕ.)

ವಿಶೇಷಣಗಳ ಪ್ರಯೋಗ

(೧) ವಿಶೇಷಣಗಳನ್ನು ವಿಶೇಷ್ಯಗಳ ಹಿಂದೆ ಪ್ರಯೋಗಿಸುವದು ಸಾಮಾನ್ಯ ನಿಯಮವಾಗಿದ್ದರೂ ವಿಶೇಷಣದಿಂದ ಒಂದು ಅರ್ಥವನ್ನು ವಿಧಿ

ಸುವದಿದ್ದರೆ ಆ ವಿಶೇಷಣಗಳನ್ನು ವಿಶೇಷ್ಯದ ಮುಂದೆ ಪ್ರಯೋಗಿಸಬೇ
ಹೀಗೆ ವಿಶೇಷ್ಯದ ಮುಂದೆ ಬಂದ ವಿಶೇಷಣಗಳಿಗೆ ಉತ್ತರವಿಶೇಷಣ ಇಲ್ಲ
ವಿಧೇಯವಿಶೇಷಣಗಳೆಂಬ ಹೆಸರು. ಉದಾ---ರಾಮನು ಜಾಣನು; ನೀ
ಶುದ್ಧ ಮೂರ್ಖನು.

(೨) ವಿಶೇಷ್ಯದ ಲಿಂಗವಚನಗಳನ್ನು ವಿಶೇಷಣವು ಹೊಂದುವದೆಂಬ
ಸಾಮಾನ್ಯ ನಿಯಮವಾದರೂ ಉತ್ತರವಿಶೇಷಣಕ್ಕೆ ಆ ನಿರ್ಬಂಧವಿ
ಉದಾ—ಲಿಂಗಭಿನ್ನತೆಗೆ-ದಯಾಳುವು ಬಡವರ ಆಧಾರವು. ಕಳ್ಳನು ಶಿಕ್ಷೆ
ಪಾತ್ರವು; ನಿನ್ನ ಮುಖವು ಚಂದ್ರನೇ ಸರಿ. ವಚನಭಿನ್ನತೆಗೆ—ವಿದ್ವಾಂಸ
ದೇಶಕ್ಕೆ ಭೂಷಣವು; ಅವರು ನಮ್ಮ ಆಧಾರವು.

(೩) ಉತ್ತರವಿಶೇಷಣದ ವಿಶೇಷ್ಯಗಳು ಹಲವು ಇದ್ದರೆ ಅದನ್ನು ಬ
ವಚನದಲ್ಲಿ ಪ್ರಯೋಗಿಸಬೇಕು. ಉದಾ—ತಂದೆಯೂ ಮಗನೂ ಶೂರರ

(೪) ವಿಶೇಷಣವು ವಿಶೇಷ್ಯದ ವಿಭಕ್ತಿಯಲ್ಲಿರಬೇಕೆಂಬುದು ಸಾಮಾ
ನಿಯಮವಾಗಿದ್ದರೂ ಕನ್ನಡದಲ್ಲಿ ವಿಶೇಷ್ಯವು ಯಾವ ವಿಭಕ್ತಿರೂಪದ
ದ್ದರೂ ವಿಶೇಷಣವನ್ನು ಪ್ರಥಮೆಯಲ್ಲಿ ಪ್ರಯೋಗಿಸಿ ಅದರ ಮುಂದೆ ಆ
ಆದಂತಹ (ಆದಂಥ) ಎಂಬದನ್ನು ಸೇರಿಸುವದು ವಾಡಿಕೆಯಾಗಿದೆ; ಉದಾ
ಕುರುಡನಾದ (ಕುರುಡನು+ಆದ) ತಿರುಕನು; ಕುರುಡನಾದ ತಿರುಕನನ್ನು
ಕುರುಡನಾದಂತಹ ತಿರುಕನಿಂದ ಮುಂ.

ಒಂದು ವಿಶೇಷ್ಯಕ್ಕೆ ಹಲವು ವಿಶೇಷಣಗಳಿದ್ದರೆ ಆ ವಿಶೇಷಣಗಳನ
ಪ್ರಥಮಾಂತವಾಗಿಟ್ಟು ಎಲ್ಲ ವಿಶೇಷಣಗಳ ಮುಂದೆ, ಇಲ್ಲವೆ ಕೊನೆಯ ವಿ
ಷಣದ ಮುಂದೆ ಆದ ಆದಂತಹ ಎಂಬಿವನ್ನು ಇಡಬೇಕು. ಉದಾ—ಧಿ
ನಾದ, ಕಲಿಯಾದ, ಉದಾರನಾದ ಪಾವನಚರಿತನಾದ ರಾಮಚಂದ್ರನಿ
ಇಲ್ಲವೆ ಧೀರನು, ಕಲಿಯು, ಉದಾರನು, ಪಾವನಚರಿತನು ಆದ ರಾ
ಚಂದ್ರನಿಗೆ.

(೬) ಸಂಖ್ಯೇಯವಾಚಕ ವಿಶೇಷಣಗಳನ್ನೂ, ಎಲ್ಲ ಎಂಬ ವಿಶೇಷ
ವನ್ನೂ ವಿಶೇಷ್ಯದ ಮುಂದೆಯೂ ಪ್ರಯೋಗಿಸುವರು. ಆಗ ಆ ವಿಶೇಷ
ಗಳನ್ನು ಬೇಕಾದ ವಿಭಕ್ತಿಗಳಲ್ಲಿ ಪ್ರಯೋಗಿಸಿ ವಿಶೇಷ್ಯವನ್ನು ಪ್ರಥಮೆಯ

ಪ್ರಯೋಗಿಸಬೇಕು. ಉದಾ- ವಿದ್ಯಾರಣ್ಯರು ಹರಿಹರವಿನಾಯಕ (ಬುಕ್ಕ) ರೆಂಬ ರಾಜರಿಬ್ಬರ ಕಾಲದಲ್ಲಿಯೂ ಮಂತ್ರಿಗಳಾಗಿದ್ದರು. ಪುಲಿಕೇಶಿಯು ದೇಶಗಳೆಲ್ಲವನ್ನು ಗೆದ್ದನು. ಕರತಳಂ ಒಂದರೊಳ್ ಮಣಿಕಮಂಡುಲು ಇರ್ದುದು (ಕಾದಂಬರಿ).

ಎಲ್ಲ ಎಂಬುದನ್ನು ಪ್ರಕೃತಿರೂಪದಲ್ಲಿಯೂ ವಿಶೇಷ್ಯದ ಮುಂದೆ ಪ್ರಯೋಗಿಸುವದುಂಟು; ಉದಾ- ಪುಲಿಕೇಶಿಯು ದೇಶವನ್ನೆಲ್ಲ ಗೆದ್ದನು.

(೭) ಬಹುವಚನ ಸಂಖ್ಯೇಯವಾಚಕದ ವಿಶೇಷ್ಯವು ಏಕವಚನ ವಾಗಿಯೂ ಇರಬಹುದು, ಉದಾ- ಹದಿನೆಂಟು ಜಾತಿಯ ಜನರೂ ನೆರೆದಿದ್ದರು. (ಹದಿನೆಂಟು ಜಾತಿಗಳ ಜನರೂ ನೆರೆದಿದ್ದರು) ನಾಲ್ಕು ಬಗೆಯ ವರ್ಣಗಳು ಪೂರ್ವಕಾಲದಲ್ಲಿದ್ದವು. ನಾಲ್ಕು ಬಗೆಗಳ ವರ್ಣಗಳು ಪೂರ್ವ ಕಾಲದಲ್ಲಿದ್ದವು.)

(೮) *ಕೃನ್ನಾಮಗಳು ವಿಶೇಷಣಗಳಾದಾಗ ಕೆಲವೆಡೆಯಲ್ಲಿ ವಿಶೇಷ್ಯ ಗಳೊಡನೆ ಸಮಾಸವಾಗಿರುವದುಂಟು. ಸಮಾಸವಾಗದಿರುವಲ್ಲಿ ಅವು ವಿಶೇಷ್ಯದ ವಿಭಕ್ತಿಯನ್ನು ಹೊಂದುವದಿಲ್ಲ. ಉದಾ—ಸಮಾಸಕ್ಕೆ— ಓಡುವ ಕುದುರೆಯು; ಬೀಸುವ ಚಾಮರವು; ಓದುವ ಹುಡುಗನು. ಸಮಾಸವಾಗ ದಲ್ಲಿ- ಉಳಿದ ನಿನ್ನ ಸರಕನ್ನು ಮಾರು; ಮಲಯಾನಿಲಂ ಆಡುವ ಮಾಡು ವೆಟ್ಟು; ನಾವು ನೋಡಿದ ಮನೆ; ಸರಕಾರಕ್ಕೆ ಕೇಡನ್ನು ಬಗೆಯುವಂತಹ, ಸರಕಾರದ ಕಾಯದೆಗಳನ್ನು ಉಲ್ಲಂಘಿಸುವಂತಹ ತುಂಟರ ನೆಳಲಿಗೆ ಸಹ ನಾಗರಿಕನು ಹೋಗಕೂಡದು.

ಅವ್ಯಯಗಳು

(೧) **ಸಮುಚ್ಚಾಯಕಾವ್ಯಯಗಳು:**— ಅನೇಕ ಪದಗಳು ಒಂದೇ ಕ್ರಿಯಾವಾಚಕದಲ್ಲಿ ಅನ್ವಯಿಸುವದು ಪದಸಮುಚ್ಚಯವೆನಿಸುವದು. (ಕ್ರಿಯಾವಾಚಕ-ಕ್ರಿಯಾಪದ, ಇಲ್ಲವೆ ಕೃದಂತ) ಪದಸಮುಚ್ಚಯದಲ್ಲಿ

---

*ವಿಶೇಷಣವಾದ ಕೃನ್ನಾಮಕ್ಕೂ ಆದರ ವಿಶೇಷ್ಯಕ್ಕೂ ನಡುವೆ ಇನ್ನೊಂದು ಪದವು ಬಂದು ವ್ಯವಧಾನವಾಗಿದ್ದರೆ ಆಗ ಕೃನ್ನಾಮವು ಪ್ರತ್ಯೇಕ ಪದವು. ಅದು ವಿಭಕ್ತಿ ಪ್ರತ್ಯಯವು ಲೋಪವಾದ ಅವ್ಯಯಪದವೆಂದು ಹೇಳಬೇಕು. ವ್ಯವಧಾನವಿಲ್ಲದಲ್ಲಿಯೂ ಕೃನ್ನಾಮದ ಕ್ರಿಯೆಗೆ ಸಂಬಂಧಿಸಿ ಇನ್ನೊಂದು ಪದವು ಹಿಂದೆ ಇದ್ದರೆ ಆಗಲೂ ಕೃನ್ನಾಮವು ಪ್ರತ್ಯೇಕಪದವು.

ಊ ಮತ್ತು ಎಂಬ ಅವ್ಯಯಗಳು ಪ್ರಯೋಗಿಸಲ್ಪಡುವವು. ಉದಾ— ಕಲ್ಲನು ಓಡಿದನು; ಮಲ್ಲನು ಓಡಿದನು; ಸಮುಚ್ಚಯ— ಕಲ್ಲನೂ ಮಲ್ಲನೂ ಓಡಿದರು. ಕಲ್ಲನಿಗೆ ಕೊಟ್ಟು-ಮಲ್ಲನಿಗೆ ಕೊಟ್ಟು; ಸಮುಚ್ಚಯ-ಕಲ್ಲನಿಗೂ ಮಲ್ಲನಿಗೂ ಕೊಟ್ಟು.

ಊ— ಷಷ್ಠೀವಿಭಕ್ತಿಯ ಪದಗಳ ಹೊರತು ಸಮುಚ್ಚಯಿಸುವ ಎಲ್ಲ ಪದಗಳ ಮುಂದೆ **ಊ** ಎಂಬುದನ್ನು ಪ್ರಯೋಗಿಸಬೇಕು. ಉದಾ— ಕಲಿತವರೂ ಕಲಿಯದವರೂ ಸಮಾನರಲ್ಲ; ರಾಮನಲ್ಲಿಯೂ ಸೀತೆಯಲ್ಲಿಯೂ ಸದ್ಗುಣಗಳಿದ್ದವು. ಕೇಳಿಯೂ ನೋಡಿಯೂ ನಿರ್ಣಯಿಸಬೇಕು.

ಸಂಖ್ಯೇಯವಾಚಕ ವಿಶೇಷಣಗಳ ಮುಂದೆಯೂ **ಊ** ಬರುವದು. ಉದಾ—ನಾಲ್ಕೂ ದಿಕ್ಕುಗಳು; (ನಾಲ್ಕು ದಿಕ್ಕುಗಳೂ).

ಮತ್ತು— ಮತ್ತು ಎಂಬುದು ಸಮುಚ್ಚಯಿಸುವ ಪದಗಳ ನಡುವೆ ಬರುವದು. ಉದಾ— ಕೇಳಿ ಮತ್ತು ನೋಡಿ ನಿರ್ಣಯಿಸಬೇಕು.

ಷಷ್ಠ್ಯಂತಪದಗಳ ಸಮುಚ್ಚಯದಲ್ಲಿ **ಮತ್ತು** ಎಂಬದು ಬರುವದು. ಉದಾ— ರಾಮನ ಮತ್ತು ಸೀತೆಯ ಪರಸ್ಪರ ಪ್ರೇಮವು ಅವರ್ಣನೀಯವಾಗಿದ್ದಿತು.

ಸಮುಚ್ಚಯದ ಬೇರೆ ಪ್ರಕಾರಗಳು. (೧) ಸಮುಚ್ಚಯಿಸುವ ಪದಗಳನ್ನೆಲ್ಲ ಪ್ರಥಮೆಯಲ್ಲಿಟ್ಟು ಕೊನೆಯ ಪದದ ಮುಂದೆ ಇವರು, ಇವು ಎಂಬವನ್ನು ಪ್ರಯೋಗಿಸಬೇಕು. ಉದಾ— ರಾಮನು ಲಕ್ಷ್ಮಣನು, ಭರತನು, ಶತ್ರುಘ್ನನು ಇವರು ದಶರಥನ ಮಕ್ಕಳು; ಕಂಬವು, ತೊಲೆಯು, ಮಣೆಯು ಇವು ಕಟ್ಟಿಗೆಯ ರೂಪಾಂತರಗಳು. ಕಾಣ್ಕೆ, ಕೈಮುಗಿತಂ, ಸೇವೆ ಎಂಬಿವನ್ನು (ರತ್ನಾ. ಶತಕ.)

(೨) ಸಮುಚ್ಚಯಿಸುವ ಪದಗಳಲ್ಲಿ ಇತರೇತರಯೋಗ [ಪರಸ್ಪರ ಸಂಬಂಧ]ವು ತೋರುತ್ತಿದ್ದರೆ ದಂದ್ವಸಮಾಸದಿಂದ ಅವುಗಳ ಸಮುಚ್ಚಯವನ್ನು ಮಾಡಬಹುದು. ಉದಾ-ರಾಮ-ಲಕ್ಷ್ಮಣರು ಅರಣ್ಯಕ್ಕೆ ಹೋದರು. ಮರ-ಗಿಡ-ಬಳ್ಳಿಗಳು ಸೊಂಪೇರಿದವು.

(೩) **ಅವಧಾರಣಾರ್ಥಕಾವ್ಯಯ**— ಅವಧಾರಣೆಯ ಎ, ಏ ಅವ್ಯಯಗಳು ವಿಶೇಷಣದ ಮುಂದೆ ಇದ್ದರೆ ಆ ವಿಶೇಷಣವು ಹೇಳುವಧರ್ಮ

ವನ್ನು ವಿಶೇಷ್ಯವು ಬಿಟ್ಟು ಇಲ್ಲವೆಂಬ ಅರ್ಥವಾಗುವದು. ರಾಮನು ಶೂರನೇ; ಇಲ್ಲಿ ಶೂರತನವನ್ನು ಬಿಟ್ಟು ರಾಮನು ಇಲ್ಲವೆಂಬ ಅರ್ಥವು.

ವಿಶೇಷ್ಯದ ಮುಂದೆ ಬಂದರೆ ವಿಶೇಷಣವು ಹೇಳುವ ಧರ್ಮವು ಅನ್ಯ ವ್ಯಕ್ತಿಗಳಲ್ಲಿ ಇಲ್ಲವೆಂಬ ಅರ್ಥವಾಗುವದು. ರಾಮನೇ ಶೂರನು. ಇಲ್ಲಿ ಶೂರತ್ವವು ರಾಮನನ್ನು ಬಿಟ್ಟು ಅನ್ಯರಲ್ಲಿ ಇಲ್ಲವೆಂಬ ಅರ್ಥವಾಗುವದು.

ಕ್ರಿಯಾವಾಚಕದ ಮುಂದೆ ಬಂದರೆ ಆ ಕ್ರಿಯೆಯು ನಡೆಯುವದಿಲ್ಲವೆಂಬದರ ನಿಷೇಧವು ಎಂದರೆ ಕ್ರಿಯಾವಧಾರಣೆಯು ತೋರುವದು.

ಕ್ರಿಯಾವಧಾರಣೆಯಲ್ಲಿ ಯಾವ ಕ್ರಿಯೆಯ ಅವಧಾರಣೆಯನ್ನು ಹೇಳುವದಿರುವದೋ ಆ ಕ್ರಿಯೆಯ ಭೂತಕೃದಂತಾವ್ಯಯದ ಮುಂದೆ ಏ, ಇಲ್ಲವೆ ಎ ಎಂಬದನ್ನು ಇಟ್ಟು ಮುಂದೆ ಆ ಧಾತುವಿನ ಕ್ರಿಯಾಪದವನ್ನು ಪ್ರಯೋಗಿಸುವರು. ಉದಾ— ರಾಮನು ನಾಳೆ ಬಂದೇ (ಬಂದು+ಏ) ಬರುವನು. ಮಾಡಿಯೇ ಮಾಡುವನು.

ಉಳಿದ ಕ್ರಿಯಾವಾಚಕಗಳಿಗೆ— ರಾಮನು ನಗುತ್ತಲೇ ನುಡಿದನು. ನಕ್ಕೇ ನುಡಿದನು.

ದ್ವಿಗುಣನಿಷೇಧ—(ಎರಡು ನಿಷೇಧವಾಚಕಗಳಿಂದಲೂ ಕ್ರಿಯಾವಧಾರಣೆಯು ತೋರುವದು. ಉದಾ—ನಿಷೇಧ-ರಾಮನು ಆ ಕೆಲಸವನ್ನು ಮಾಡನು. ಇದರ ನಿಷೇಧ [ದ್ವಿಗುಣನಿಷೇಧ]-ರಾಮನು ಆ ಕೆಲಸವನ್ನು ಮಾಡನೆಂದಲ್ಲ; [ಎಂದರೆ ಮಾಡಿಯೇ ಮಾಡುವನು ಎಂಬ ಅರ್ಥವು]

(೪) ಕೃದಂತಾವ್ಯಯಗಳು— ಕೃದಂತಾವ್ಯಯಗಳೆಲ್ಲ ವಾಕ್ಯದಲ್ಲಿ ಇನ್ನೊಂದು ಕೃದಂತಕ್ಕೆ ಇಲ್ಲವೆ ಕ್ರಿಯಾಪದಕ್ಕೆ ಅನ್ವಯಿಸುವವು. ಉದಾ— ಹುಡುಗನು ಓಡುತ್ತ ಹೋಗಿ ತಂದೆಯನ್ನು ಅಪ್ಪಿಕೊಂಡನು. ಇಲ್ಲಿ ಓಡುತ್ತ ಎಂಬ ಕೃದಂತಾವ್ಯಯವು ಹೋಗಿ ಎಂಬ ಇನ್ನೊಂದು ಕೃದಂತಕ್ಕೆ ಸಂಬಂಧಿಸಿದೆ. ಓಡುತ್ತ ಹೋಗುವವನು ಎಡವಿ ಬೀಳುವನು; ಇಲ್ಲಿ ಓಡುತ್ತ ಎಂಬದು ಹೋಗುವವನು ಎಂಬ ಕೃನ್ನಾಮಕ್ಕೆ ಸಂಬಂಧಿಸಿದೆ. ಶಂಕರನು ನಗುತ್ತ ಬಂದನು. ಇಲ್ಲಿ ನಗುತ್ತ ಎಂಬದು ಬಂದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

ಕೃದಂತಾವ್ಯಯಗಳಲ್ಲಿ ಕೆಲವು ಏಕಕರ್ತೃಕಗಳು ಕೆಲವು ಭಿನ್ನ ಕರ್ತೃಕಗಳು.

ಏಕಕರ್ತೃಕಕೃದಂತಾವ್ಯಯಂಗಳು— ಕೃದಂತಾವ್ಯಯಗಳ ಕರ್ತೃವೂ ಕ್ರಿಯಾಪದದ ಕರ್ತೃವೂ ಒಂದೇ ಆಗಿದ್ದರೆ ಅವು ಏಕಕರ್ತೃಕ ಕೃದಂತಾವ್ಯಯಗಳು. ಉದಾ-ಶಂಕರನು ಓಡುತ್ತ ಬಂದನು; ಇಲ್ಲಿ ಓಡುತ್ತ ಎಂಬದಕ್ಕೂ, ಬಂದನು ಎಂಬದಕ್ಕೂ ಶಂಕರನೇ ಕರ್ತೃವು.

ಉತ್ತ, ದು, ಇ, ಅದೆ, ಅಲಿಕ್ಕೆ ಪ್ರತ್ಯಯಗಳು ಸೇರಿದ ಕೃದಂತಾವ್ಯಯಗಳು ಏಕಕರ್ತೃಕಗಳು. ಉದಾ-ಶಂಕರನು ಓಡುತ್ತ, ಓಡಿ, ಓಡದೆ, ಓಡಲು, ಓಡಿ, ಓಡಲಿಕ್ಕೆ ಬಂದನು.

ಭಿನ್ನಕರ್ತೃಕಕೃದಂತಾವ್ಯಯಂಗಳು — ಕೃದಂತಾವ್ಯಯಗಳ ಕರ್ತೃವೂ ಕ್ರಿಯಾಪದದ ಕರ್ತೃವೂ ಬೇರೆ ಬೇರೆ ಆಗಿದ್ದರೆ ಅವು ಭಿನ್ನಕರ್ತೃಕ ಕೃದಂತಾವ್ಯಯಗಳು. ಉದಾ—ಮಳೆಯಾಗಲು ಬೆಳೆ ಬಂದಿತು. ಇಲ್ಲಿ ಆಗಲು ಎಂಬ ಕೃದಂತಾವ್ಯಯದ ಕರ್ತೃವು ಮಳೆ; ಬಂದಿತು. ಎಂಬ ಕ್ರಿಯಾಪದದ ಕರ್ತೃವು ಬೆಳೆ; ಆದುದರಿಂದ ಆಗಲು ಎಂಬುದು ಭಿನ್ನಕರ್ತೃಕವು.

ಅಲು, ಅರೆ, ಉವದೂ ಪ್ರತ್ಯಯಗಳು ಸೇರಿದ ಕೃದಂತಾವ್ಯಯಗಳು ಭಿನ್ನ ಕರ್ತೃಕಗಳು. ಉದಾ—ಕೃಷ್ಣರಾಯರು ಪಟ್ಟವೇರಲು ಪ್ರಜೆಗಳು ನಲಿದರು; ಮಗನು ದುಡಿದರೆ ತಂದೆ ಸುಖಬಡುವನು; ಸರಸ್ವತಿ ಒಲಿದರೆ ವಿದ್ಯೆ ಬರುವದು, ನೀನು ಬರುವದೂ ನಾನು ಹೋಗುವೆನು.

ಇ, ದು, ಪ್ರತ್ಯಯಗಳು ಸೇರಿದ ಕೃದಂತಾವ್ಯಯಗಳು ಕೆಲವೆಡೆಯಲ್ಲಿ ಭಿನ್ನ ಕರ್ತೃಕಗಳೂ ಆಗುವವು. ಉದಾ-ಮಳೆಯಾಗಿ ಬೆಳೆ ಬಂದಿತು ಬೆಳೆ ಬಂದು ಕಾಳು ಅಗ್ಗವಾದವು. ಹುಲಿಯು ನೋಡಿ ಅಂಜಿಕೆ ಬಂದಿತು, ಕಣ್ಣು ಹೋಗಿ ಕುರುಡನಾದನು. ಮುಸಿ ಬಿದ್ದು ಬಟ್ಟೆ ಕೆಟ್ಟಿತು.

(೫) ಹೊರತು ಎಂಬದು ಷಷ್ಠ್ಯಂತಗಳ ಮುಂದೆಯೂ ಭೂತಕೃನ್ನಾಮಗಳ ಮುಂದೆಯೂ ಪ್ರಯೋಗಿಸಲ್ಪಡುವದು. ಉದಾ-ಹರಿಯೇ, ನಿನ್ನ ಹೊರತು ಪೊರೆವರನು ನಾನು ಅರಿಯೆ; ದುಡಿದ ಹೊರತು ಹೊಟ್ಟೆ ತುಂಬದು.

(೬) ಒಂದು ವಾಕ್ಯದಲ್ಲಿ ಅದರ ಹಿಂದಿನ ವಾಕ್ಯದಲ್ಲಿ ಹೇಳಿದ ವಿಚಾರಕ್ಕೆ ವಿರುದ್ಧವಾದ ವಿಚಾರವನ್ನು ಹೇಳುವದಾದರೆ, ಮೊದಲಲ್ಲಿ ಆದರೆ ಎಂಬದು ಬರುವದು. ಉದಾ— ರಂಗನು ಬುದ್ಧಿವಂತನಾದ ಹುಡುಗನು; ಆದರೆ ಸತ್ಯವಂತನಲ್ಲ.

(೭) ಅಲು ಪ್ರತ್ಯಯಾಂತ ಕೃದಂತಗಳ ಮುಂದೆ ಬೇರೆ ಕ್ರಿಯಾವಾಚಕ
ಳು ಬಂದರೆ ವಿಕಲ್ಪವಾಗಿ ಅಲು ಪ್ರತ್ಯಯದ ಲು ಲೋಪವಾಗುವದು.
ುದಾ - ತರಲು ಹೇಳಿದಳು; ತರಹೇಳಿದಳು. ಇರಲುಬಂದನು; ಇರಬಂದನು.
ರಲು ಹೇಳಿ ತರಹೇಳಿ. ಇರಲು ಬಂದು ಇರಬಂದು. ಮುಂ.

ಕ್ರಿಯೆಯು ಪೂರ್ಣವಾಗಿ ಮುಗಿಯಿತೆಂಬ ಅರ್ಥವನ್ನು ಸೂಚಿಸುವ
ಕ್ಕೆ ಧಾತುಗಳ ಭೂತಕೃದಂತಾವ್ಯಯದ ಮುಂದೆ ಬಿಡು ಧಾತುವಿನ ರೂಪ
ಳನ್ನು ಪ್ರಯೋಗಿಸುವರು. ಉದಾ— ಆ ಪತ್ರವನ್ನು ಸುಟ್ಟುಬಿಟ್ಟನು.
ತನು ನಿನ್ನ ಲೆಕ್ಕದ ಉತ್ತರವನ್ನು ನೋಡಿ ಬಿಟ್ಟನು.

ಕೆಲವು ಧಾತುಗಳ ಭೂತಕೃದಂತಾವ್ಯಯಗಳ ಮುಂದೆ ಪರಾರ್ಥವಾಗಿ
ಯೆ ನಡೆಯಿತೆಂಬದನ್ನು ಸೂಚಿಸುವದಕ್ಕೆ ಕೊಡು ಧಾತುವಿನ ರೂಪ
ಳನ್ನೂ ಸ್ವಾರ್ಥವಾಗಿ ಕ್ರಿಯೆ ನಡೆಯಿತೆಂಬದನ್ನು ಸೂಚಿಸುವದಕ್ಕೆ
ಳ್ಳು ಧಾತುವಿನ ರೂಪಗಳನ್ನೂ ಪ್ರಯೋಗಿಸುವರು. ಉದಾ—ಗುರುವು
ಷ್ಯನಿಗೆ ಪಾಠವನ್ನು ಹೇಳಿಕೊಟ್ಟನು; ಆತನ ಟಿಪ್ಪಣಿಯನ್ನು ನೋಡಿ
ಟ್ಟನು. ಮಾದರಸನು ದೇವರಿಂದ ವರವ ಬೇಡಿಕೊಂಡನು. ತಿಳಿದು
ಂಡನು. ಹೇಳಿಕೊಂಡನು. ಮುಂ.

ಕ್ರಿಯೆಯು ಹಲವು ಬಾರಿ ನಡೆಯಿತೆಂಬ ಅರ್ಥವನ್ನು ಸೂಚಿಸುವ
ಕ್ಕೆ ಭೂತಕೃದಂತಾವ್ಯಯಗಳ ಮುಂದೆ ಆಡು ಧಾತುವಿನ ರೂಪಗಳನ್ನು
ಯೋಗಿಸುವರು. ಉದಾ—ಅವರು ಬಯ್ದಾಡಿದರು; ಒಗೆದಾಡಿದರು.
ವರು ಹೊಡೆದಾಡುತ್ತ ನೂಕುತ್ತ ಹೋದರು. ಮಕ್ಕಳು ಕೂಗಾಡಿದರು.

---

೧೩. ವಾಕ್ಯಾರ್ಥ ಬೋಧೆ

ವಾಕ್ಯಾರ್ಥಬೋಧೆ— ವಾಕ್ಯದಲ್ಲಿರುವ ಎಲ್ಲ ಪದಗಳ ಅರ್ಥಗಳ
ಂಬಂಧವನ್ನರಿತುಕೊಂಡು ಪೂರ್ಣ ವಾಕ್ಯದ ಅರ್ಥವನ್ನು ಗ್ರಹಿಸುವದು
ಾಕ್ಯಾರ್ಥಬೋಧೆಯೆನಿಸುವದು.

ವಾಕ್ಯಾರ್ಥಬೋಧೆಯು ವ್ಯಾಕರಣದಿಂದುಂಟಾಗುವ ಪ್ರಯೋಜನ
ಳಲ್ಲೊಂದಾಗಿದೆ ವ್ಯಾಕರಣದಿಂದುಂಟಾಗುವ ಪ್ರಯೋಜನಗಳು ಮೂರು.
. ಭಾಷೆಯ ಶುದ್ಧಸ್ವರೂಪವನ್ನರಿತುಕೊಳ್ಳುವದು. ೨. ಶುದ್ಧವಾದ ಭಾಷೆ

ಯಿಂದ ನಮ್ಮ ವಿಚಾರಗಳನ್ನು ಪ್ರಕಟಿಸುವದು. ೩. ಅನ್ಯರ ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳುವದು ಎಂದರೆ ವಾಕ್ಯಾರ್ಥಬೋಧೆಯು.

ವಾಕ್ಯಾರ್ಥಬೋಧೆಗೆ ಸಾಧನಗಳು— ೧. ಪ್ರಕೃತ್ಯರ್ಥಜ್ಞಾನ, ೨. ಪದಸ್ವರೂಪಜ್ಞಾನ, ೩. ಪ್ರಯೋಗಜ್ಞಾನ, ೪. ಪದಗಳ ಅರ್ಥಗಳ ಸಂಬಂಧಜ್ಞಾನ.

೧. **ಪ್ರಕೃತ್ಯರ್ಥಜ್ಞಾನ—** ಪ್ರಕೃತ್ಯರ್ಥವೆಂದರೆ ಪ್ರಕೃತಿಗಳಾದ ಪ್ರಾತಿಪದಿಕ, ಧಾತುಗಳ ಅರ್ಥವು; ಈ ಜ್ಞಾನವು ವ್ಯವಹಾರದಿಂದಲೂ, ಕೋಶಗ್ರಂಥಗಳಿಂದಲೂ ಉಂಟಾಗುವದು. ಇನ್ನೊಬ್ಬರು ಆಡುವ ಮಾತುಗಳಿಂದ ನಾವು ಹಲವು ಶಬ್ದಗಳ ಅರ್ಥವನ್ನರಿತುಕೊಳ್ಳುವೆವು. ಕೋಶಗ್ರಂಥಗಳಲ್ಲಿ ಶಬ್ದಗಳ ಅರ್ಥವಿರುವದರಿಂದ ಅವೂ ಪ್ರಕೃತಿಗಳ ಅರ್ಥವನ್ನರಿತುಕೊಳ್ಳುವದಕ್ಕೆ ಸಾಧನಗಳು. ಬೇಸಗೆಯಲ್ಲಿ ನೇಸರು ತೆಂಕಲಿಂದ ಬಡಗಲಿಗೆ ಹೋಗುತ್ತಿರುವಂತೆ ತೋರುವದು. ಈ ವಾಕ್ಯದ ಅರ್ಥಜ್ಞಾನಕ್ಕೆ ನೇಸರು, ತೆಂಕ, ಬಡಗ ಮೊದಲಾದ ಶಬ್ದಗಳ ಅರ್ಥಜ್ಞಾನವು ಸಾಧನವು.

೨. **ಪದಸ್ವರೂಪಜ್ಞಾನ—** ವಾಕ್ಯದಲ್ಲಿರುವ ಪ್ರತಿಯೊಂದು ಪದದ ಪ್ರಕೃತಿ ಯಾವದು, ವಿಭಕ್ತಿಪ್ರತ್ಯಯವು ಯಾವದು, ಆ ವಿಭಕ್ತಿಪ್ರತ್ಯಯದ ಅರ್ಥವು ಯಾವದು, ವಾಕ್ಯದಲ್ಲಿ ಆ ಪದವು ಯಾವ ಪದಕ್ಕೆ ಸಂಬಂಧಿಸುವದು ಮೊದಲಾದ ಜ್ಞಾನವು ಪದಸ್ವರೂಪಜ್ಞಾನವೆನಿಸುವದು.

ಕೆಳಗಿನ ವಾಕ್ಯದ ಪದಸ್ವರೂಪವನ್ನರಿತುಕೊಳ್ಳುವ ಕ್ರಮವು ಇಲ್ಲಿ ತೋರಿಸಲ್ಪಟ್ಟಿದೆ.

ವಾಕ್ಯ— ಪೂರ್ವಕಾಲದಲ್ಲಿ ಶೂರನಾದ ರಾಮನು ನೀಚನಾದ ದಶಮುಖನನ್ನು ಲೋಕಹಿತಕ್ಕೋಸ್ಕರ ಲಂಕೆಯ ರಣಭೂಮಿಯಲ್ಲಿ ಒಂದೇ ಬಾಣದಿಂದ ತಟ್ಟನೆ ಸಂಹರಿಸಿದನು.

೧. **ಪೂರ್ವಕಾಲದಲ್ಲಿ—** ಪೂರ್ವವು ಮತ್ತು ಕಾಲವು ಎಂಬ ಎರಡು ಪದಗಳು ಸೇರಿ ಸಮಾಸವಾದ ಪೂರ್ವಕಾಲ ಎಂಬ ಅಕಾರಾಂತ ನಪುಂಸಕಲಿಂಗ ನಾಮದ ಸಪ್ತಮ್ಯೇಕವಚನದ ರೂಪವು. ಸಪ್ತಮಿಯು ಅಧಿಕರಣಾರ್ಥದಲ್ಲಿದೆ. ಸಂಹರಿಸುವ ಕ್ರಿಯೆಯ ಕಾಲಾಧಿಕರಣವು. ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೨. **ಶೂರನಾದ**-(ಶೂರನು+ಆದ) ಶೂರನು-ಶೂರ ಎಂಬ ಅಕಾರಾಂತ ಪುಲ್ಲಿಂಗನಾಮದ ಪ್ರಥಮೈಕವಚನದ ರೂಪವು; ರಾಮನು ಎಂಬ ಪ್ರಥಮಾಂತಕ್ಕೆ ವಿಶೇಷಣವಾದದರಿಂದ ಪ್ರಥಮೆ ಬಂದಿದೆ. ಆದ ಎಂಬದು ಆಗು ಧಾತುವಿನ ಭೂತಕೃನ್ನಾಮವು; ಇದು, ಶೂರನೆಂಬದು ವಿಶೇಷಣವೆಂಬದನ್ನು ತೋರಿಸುವದು. ಶೂರನಾದ ಈ ಪದವು ರಾಮನು ಎಂಬ ವಿಶೇಷ್ಯಕ್ಕೆ ಸಂಬಂಧಿಸಿದೆ.

೩. **ರಾಮನು**-ರಾಮ ಎಂಬ **ಅಕಾರಾಂತ** ಪುಲ್ಲಿಂಗ ಅಂಕಿತನಾಮದ ಪ್ರಥಮೈಕವಚನದ ರೂಪವು. ಪ್ರಥಮೆಯು ರಾಮನು ಕರ್ತೃವೆಂಬದನ್ನು ಸೂಚಿಸುವದು. ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೪. **ನೀಚನಾದ**-(ನೀಚನು+ಆದ) ನೀಚನು-ನೀಚ ಎಂಬ ಅಕಾರಾಂತ ಪುಲ್ಲಿಂಗ ನಾಮದ ಪ್ರಥಮೈಕವಚನದ ರೂಪವು. ಆದ ಎಂಬ ಕೃನ್ನಾಮವು, ನೀಚನು ವಿಶೇಷಣವೆಂಬದನ್ನು ಸೂಚಿಸುವದು. ನೀಚನಾದ ಈ ಪದವು ವಿಶೇಷಣವಾಗಿ ದಶಮುಖನನ್ನು ಎಂಬ ವಿಶೇಷ್ಯಕ್ಕೆ ಸಂಬಂಧಿಸಿದೆ.

೫. **ದಶಮುಖನನ್ನು**- ದಶ, ಮುಖಗಳು ಎಂಬ ಪದಗಳು ಸೇರಿ ಸಮಾಸವಾದ ದಶಮುಖ ಎಂಬ ಅಕಾರಾಂತ ಪುಲ್ಲಿಂಗನಾಮದ ದ್ವಿತೀಯೈಕವಚನದ ರೂಪವು. ಸಂಹರಿಸುವಕ್ರಿಯೆಗೆಕರ್ಮವೆಂಬ ಅರ್ಥದಲ್ಲಿ ದ್ವಿತೀಯೆ ಬಂದಿದೆ. ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೬. **ಲೋಕಹಿತಕ್ಕೋಸ್ಕರ**- (ಲೋಕಹಿತಕ್ಕೆ+ಓಸ್ಕರ) ಲೋಕಹಿತಕ್ಕೆ-ಲೋಕದ ಹಿತವು ಎಂಬ ಪದಗಳು ಸೇರಿ ಸಮಾಸವಾದ **ಲೋಕಹಿತ** ಎಂಬ ಅಕಾರಾಂತ ನಪುಂಸಕಲಿಂಗ ನಾಮದ ಚತುರ್ಥಿಯ ಏಕವಚನದ ರೂಪವು. ಇದರ ಮೇಲೆ ಓಸ್ಕರ ಎಂಬ ತದ್ಧಿತಪ್ರತ್ಯಯವು ಸೇರಲು ಉಂಟಾದ ಲೋಕಹಿತಕ್ಕೋಸ್ಕರ ಎಂಬದು ತದ್ಧಿತಾವ್ಯಯವು. ಲೋಕಹಿತವು ಸಂಹಾರಕ್ರಿಯೆಯ ಉದ್ದೇಶವಾಗುವದರಿಂದ ಉದ್ದೇಶ್ಯಾರ್ಥದಲ್ಲಿ ಚತುರ್ಥಿಯ ಮೇಲೆ ಓಸ್ಕರ ಎಂಬುದು ಸೇರಿದೆ. ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೭. **ಲಂಕೆಯ**-ಲಂಕೆ ಎಂಬ ಎಕಾರಾಂತ ನಪುಂಸಕಲಿಂಗ ಅಂಕಿತನಾಮದ ಷಷ್ಠಿಯ ಏಕವಚನದ ರೂಪವು. ಸಮೀಪಸಂಬಂಧಾರ್ಥದಲ್ಲಿ

ಷಷ್ಠಿಯು ಬಂದಿದೆ. ಈ ಪದವು ರಣಭೂಮಿಯಲ್ಲಿ ಎಂಬ ಪದಕ್ಕೆ ಸಂಬಂಧಿಸಿದೆ.

೮. **ರಣಭೂಮಿಯಲ್ಲಿ**- ರಣದ ಭೂಮಿಯು ಎಂಬ ಎರಡು ಪದಗಳು ಸೇರಿ ಸಮಾಸವಾದ ರಣಭೂಮಿ ಎಂಬ ಇಕಾರಾಂತ ನಪುಂಸಕಲಿಂಗ ನಾಮದ ಸಪ್ತಮ್ಯೇಕವಚನದ ರೂಪವು. ರಣಭೂಮಿಯು ಸಂಹಾರಕ್ರಿಯೆಯ ಸ್ಥಾನಾಧಿಕರಣವಾಗುವದರಿಂದ ಅಧಿಕರಣಾರ್ಥದಲ್ಲಿ ಸಪ್ತಮಿ ಬಂದಿದೆ. ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೯. ಒಂದೇ—(ಒಂದು+ಏ) ಒಂದು ಎಂಬ ಉಕಾರಾಂತ ನಪುಂಸಕಲಿಂಗ ಸಂಖ್ಯೇಯವಾಚಕ ವಿಶೇಷಣದ ಪ್ರಥಮ್ಯೇಕವಚನದ ರೂಪವು. ಇದು ವಿಶೇಷಣವಾದುದರಿಂದ ಪ್ರಥಮೆ ಬಂದಿದೆ. ಇದರ ಮುಂದೆ ಅವಧಾರಣಾರ್ಥದಲ್ಲಿ ಏ ಎಂಬ ಅವ್ಯಯವು ಸೇರಿದೆ. ಈ ಪದವು ಬಾಣದಿಂದ ಎಂಬ ವಿಶೇಷ್ಯಕ್ಕೆ ಸಂಬಂಧಿಸಿದೆ.

೧೦ **ಬಾಣದಿಂದ**— ಬಾಣ ಎಂಬ ಅಕಾರಾಂತ ನಪುಂಸಕಲಿಂಗ ರೂಢನಾಮದ ತೃತೀಯೈಕವಚನದ ರೂಪವು. ಕರಣಾರ್ಥದಲ್ಲಿ ತೃತೀಯೆ ಬಂದಿದೆ. ಬಾಣವು ಸಂಹಾರಕ್ರಿಯೆಯಲ್ಲಿ ಕರಣವು (ಸಾಧನವು). ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೧೧. **ಥಟ್ಟನೆ**— ಸಂಹರಿಸುವ ಕ್ರಿಯೆಯ ರೀತಿಯನ್ನು ಹೇಳುವ ರೀತಿವಾಚಕ ಕ್ರಿಯಾವಿಶೇಷಣಾವ್ಯಯವು. ಈ ಪದವು ಸಂಹರಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ.

೧೨. **ಸಂಹರಿಸಿದನು** — ಸಂಹರಿಸು ಧಾತುವಿನ ಭೂತಕಾಲದ ಪ್ರಥಮ ಪುರುಷ ಪುಲ್ಲಿಂಗೈಕವಚನದ ರೂಪವು. ಆಖ್ಯಾತಪ್ರತ್ಯಯವು ಕರ್ತ್ರರ್ಥದಲ್ಲಿ ಬಂದಿದೆ.

ಈ ಮೇರೆಗೆ ಪದಸ್ವರೂಪವನ್ನು ಹೇಳುವದಕ್ಕೆ ಗ್ರಂಥದ **ಮೇಲೆ** ವ್ಯಾಕರಣ ಹೇಳುವದು (ಗ್ರಂಥಸ್ಥ ಪದಗಳ ಸ್ವರೂಪಕಥನ) ಎಂಬ ವಾಡಿಕೆಯಿದೆ.

(೨) ಪ್ರಯೋಗಜ್ಞಾನ—ಕ್ರಿಯಾಪದಕ್ಕೆ ಸೇರಿದ ಕ್ರಿಯಾವಿಭಕ್ತಿ ಪ್ರತ್ಯಯವು ಯಾವ ಅರ್ಥದಲ್ಲಿ ಬಂದಿರುವದೆಂಬದನ್ನೂ, ಕರ್ತೃಕರ್ಮಗಳು

ಯಾವವೆಂಬದನ್ನೂ ತಿಳಿದುಕೊಂಡರೆ ಎಂದರೆ, ವಾಕ್ಯವು ಯಾವ ಪ್ರಯೋಗ ದ್ದೆಂಬದನ್ನು ತಿಳಿದುಕೊಂಡರೆ ವಾಕ್ಯದ ಮುಖ್ಯಾರ್ಥವು ಮೊದಲು ತೋರು ವದು. ಇದರಿಂದ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಸಂಬಂಧಿಸಿದ ಪದ ಗಳ ಅರ್ಥವನ್ನು ಆ ಆ ಪದಗಳಿಗೆ ಅನ್ವಯಿಸಿಕೊಂಡು ಪೂರ್ಣ ವಾಕ್ಯದ ಅರ್ಥವನ್ನರಿತುಕೊಳ್ಳಲು ಅನುಕೂಲವಾಗುವದು.

ಮೇಲೆ ಉದಾಹರಿಸಿದ ವಾಕ್ಯದಲ್ಲಿ–ರಾಮನು ಕರ್ತೃವು; ದಶಮುಖ ನನ್ನು ಕರ್ಮವು; ಸಂಹರಿಸಿದನು ಕ್ರಿಯಾಪದವು; ಸಕರ್ಮಕ ಕರ್ತರಿ ಪ್ರಯೋಗವು. ಈ ಪ್ರಯೋಗಜ್ಞಾನದಿಂದ—ಸಂಹಾರಕ್ರಿಯೆ ನಡೆಯಿತು, ಅದನ್ನು ರಾಮನು ಮಾಡಿದನು, ಕ್ರಿಯೆಯಲ್ಲಿ ದಶಮುಖನು ವಿಷಯ (ಕರ್ಮ) ವಾದವನು ಎಂಬ ಮುಖ್ಯಾರ್ಥವು ತಿಳಿಯುವದು.

(೪) ಪದಾರ್ಥಸಂಬಂಧ ಜ್ಞಾನ— ವಾಕ್ಯದಲ್ಲಿಯ ಎಲ್ಲ ಪದಗಳ ಅರ್ಥಗಳು ಯಾವ ಯಾವ ಪದಗಳಿಗೆ ಸಂಬಂಧಿಸಿರುವವೆಂಬದನ್ನರಿತು ಕೊಂಡರೆ ವಾಕ್ಯಾರ್ಥಬೋಧೆಗೆ ಸಹಾಯವಾಗುವದು.

ವಾಕ್ಯಸ್ಥಪದಗಳ ಸಂಬಂಧವನ್ನು ದಂಡಾನ್ವಯಕ್ರಮದಿಂದಾಗಲಿ, ಖಂಡಾನ್ವಯಕ್ರಮದಿಂದಾಗಲಿ ಅರಿತುಕೊಳ್ಳಬಹುದು.

ದಂಡಾನ್ವಯಕ್ರಮ— ವಾಕ್ಯರಚನೆಯಲ್ಲಿ ಕ್ರಮಗೊಳಿಸಿದ ಅನ ಕ್ರಮದಿಂದ, ಎಲ್ಲ ಪದಗಳ ಅರ್ಥಗಳು ಯಾವ ಯಾವ ಪದಗಳಿಗೆ ಸಂಬಂಧಿಸುವವೆಂಬದನ್ನು ಅರಿತುಕೊಳ್ಳುವದು.

ಮೇಲೆ ಉದಾಹರಿಸಿದ ವಾಕ್ಯಗಳಲ್ಲಿ ಈ ಬಗೆಯ ಅನ್ವಯವು— ಪೂರ್ವಕಾಲದಲ್ಲಿ—ಸಂಹಾರಕ್ರಿಯೆಗೆ ಪೂರ್ವಕಾಲವು ಕಾಲಾಧಿಕರಣವು ಶೂರನಾದ — ವಿಶೇಷ್ಯನಾದ ರಾಮನಲ್ಲಿ ಶೂರತನವನ್ನು ಹೇಳುವದು; ರಾಮನು—ಸಂಹಾರಕ್ರಿಯೆಯನ್ನು ಮಾಡಿದವನು; ನೀಚನಾದ– ವಿಶೇಷ್ಯ ನಾದ ದಶಮುಖನಲ್ಲಿ ನೀಚತನವನ್ನು ಹೇಳುವದು; ದಶಮುಖನನ್ನು— ಸಂಹಾರಕ್ರಿಯೆಗೆ ದಶಮುಖನು ವಿಷಯವು ಎಂದು ಹೇಳುವದು; ಲೋಕ ಹಿತಕ್ಕೋಸ್ಕರ— ಸಂಹಾರಕ್ರಿಯೆಗೆ ಲೋಕಹಿತವು ಉದ್ದೇಶ್ಯವೆಂಬುದನ್ನು ಹೇಳುವದು; ಲಂಕೆಯ–ರಣಭೂಮಿಯು ಲಂಕೆಗೆ ಸಮೀಪಿಸಿದ್ದು ಎಂದು ಹೇಳುವದು; ರಣಭೂಮಿಯಲ್ಲಿ– ರಣಭೂಮಿಯು ಸಂಹಾರಕ್ರಿಯೆಯ

ಸ್ಥಾನಾಧಿಕರಣವೆಂದು ಹೇಳುವದು; ಒಂದೇ—ಸಂಹಾರಕ್ಕೆ ಸಾಧನವಾದ ಬಾಣವು ಒಂದು; ಇನ್ನೊಂದಿಲ್ಲ ಎಂಬ ಅರ್ಥವನ್ನು ಹೇಳುವದು; ಬಾಣದಿಂದ— ಬಾಣವು ಸಂಹಾರಕ್ರಿಯೆಯಲ್ಲಿ ಸಾಧನವು ಎಂದು ಹೇಳುವದು. ತಟ್ಟನೆ— ಸಂಹಾರಕ್ರಿಯೆಯು ವಿಲಂಬವಿಲ್ಲದೆ ನಡೆದ ರೀತಿಯನ್ನು ಹೇಳುವದು; ಸಂಹರಿಸಿದನು—ಸಂಹಾರಕ್ರಿಯೆಯನ್ನು ಭೂತಕಾಲದಲ್ಲಿ (ರಾಮನೆಂಬ) ಒಬ್ಬ ಕರ್ತೃವು ಮಾಡಿದನು ಎಂಬ ಅರ್ಥವನ್ನು ಹೇಳುವದು.

ವಾಕ್ಯಸ್ಥಪದಗಳ ಅರ್ಥಸಂಬಂಧವನ್ನು ಕೆಳಗೆ ಹೇಳುವ ಖಂಡಾನ್ವಯ ಕ್ರಮದಿಂದಲೂ ಅರಿತುಕೊಳ್ಳಬಹುದು. ಈ ಕ್ರಮದಲ್ಲಿ ಕ್ರಿಯಾಪದ ಮೊದಲಾದವನ್ನು ಹಿಡಿದು ಪ್ರಶ್ನೆಗಳನ್ನು ಮಾಡಬೇಕು.

ಖಂಡಾನ್ವಯ ಕ್ರಮ—(ಮೇಲೆ ಉದಾಹರಿಸಿದ ವಾಕ್ಯದಲ್ಲಿ)—

ವಾಕ್ಯದಲ್ಲಿ ಕ್ರಿಯಾಪದವು ಯಾವುದು ?		ಸಂಹರಿಸಿದನು
ಯಾವನು	ಸಂಹರಿಸಿದನು ?	ರಾಮನು
ಯಾವನನ್ನು	,,	ದಶಮುಖನನ್ನು
ಏತರಿಂದ	,,	ಬಾಣದಿಂದ
ಎಲ್ಲಿ	,,	ರಣಭೂಮಿಯಲ್ಲಿ
ಯಾವಾಗ	,,	ಪೂರ್ವಕಾಲದಲ್ಲಿ
ಏಕೆ	,,	ಲೋಕಹಿತಕ್ಕೋಸ್ಕರ
ಹೇಗೆ	,,	ತಟ್ಟನೆ
ಎಂತಹ	ರಾಮನು ?	ಶೂರನಾದ ರಾಮನು
ಎಂತಹ	ದಶಮುಖನನ್ನು	ನೀಚನಾದ
ಸಂಹಾರಕ್ಕೆ ಇನ್ನೊಂದು ಬಾಣವು ಬೇಕಾಯಿತೋ ?		ಇಲ್ಲ; ಒಂದೇ ಬಾಣದಿಂದ
ಎಲ್ಲಿಯ ರಣಭೂಮಿಯಲ್ಲಿ ?		ಲಂಕೆಯ ರಣಭೂಮಿಯಲ್ಲಿ

ಈ ಎರಡರಲ್ಲೊಂದು ಬಗೆಯಿಂದ ಅರ್ಥಸಂಬಂಧವನ್ನರಿತುಕೊಳ್ಳುವದರಿಂದ ಉಂಟಾಗುವ ವಾಕ್ಯಾರ್ಥಬೋಧೆಯು ಈ ರೀತಿಯಾಗಿದೆ—

(೧) ಸಂಹಾರಕ್ರಿಯೆ ನಡೆಯಿತು. (೨) ಆ ಕ್ರಿಯೆಯನ್ನು ರಾಮನು ಮಾಡಿದನು. (೩) ಕ್ರಿಯೆಗೆ ದಶಮುಖನು ವಿಷಯ (ಕರ್ಮ)ವು. (೪) ಈ ಕ್ರಿಯೆಗೆ ಒಂದೇ ಬಾಣವು ಸಾಧನವಾಯಿತು. (೫) ಈ ಕ್ರಿಯೆಯು ಪೂರ್ವ

ಕಾಲದಲ್ಲಿ ನಡೆಯಿತು. (೯) ಈ ಕ್ರಿಯೆಯು ರಣಭೂಮಿಯಲ್ಲಿ ನಡೆಯಿತು. (೭) ಈ ಕ್ರಿಯೆಯು ಲೋಕಹಿತಕ್ಕೋಸ್ಕರ ನಡೆಯಿತು. (೮) ಈ ಕ್ರಿಯೆ ವಿಲಂಬವಿಲ್ಲದೆ ನಡೆಯಿತು. (೯) ರಾಮನು ಶೂರತನವುಳ್ಳವನು. (೧) ದಶಮುಖನು ನೀಚತನವುಳ್ಳವನು. (೧೧) ರಣಭೂಮಿಯು ಲಂಕೆಗೆ ಸಮೀಪಿಸಿದ್ದು.

---

೧೪. ವಾಕ್ಯವಿಭಜನೆ

ವಾಕ್ಯವಿಭಜನೆ–ವಾಕ್ಯದಲ್ಲಿರುವ ಪದಗಳನ್ನೂ, ವಾಕ್ಯಭಾಗ(ಖಂಡವಾಕ್ಯ)ಗಳನ್ನೂ ಅವುಗಳ ಸಂಬಂಧವು ತೋರುವಂತೆ ಬೇರೆ ಬೇರೆ ಮಾಡಿ ಹೇಳುವದು ವಾಕ್ಯವಿಭಜನೆಯೆನಿಸುವದು.

ಸ್ವತಂತ್ರವಾಕ್ಯ—ಹಿಂದುಮುಂದಿನ ವಾಕ್ಯಗಳ ಸಂಬಂಧವನ್ನಪೇಕ್ಷಿಸದೆ, ಒಂದು ಪೂರ್ಣವಿಚಾರವನ್ನು ಹೇಳುವ ವಾಕ್ಯವು ಸ್ವತಂತ್ರವಾಕ್ಯವೆನಿಸುವದು. ಉದಾ—

ಹಿಂದುಸ್ತಾನದ ಅರ್ವಾಚೀನ ಜ್ಯೋತಿಷಿಗಳಲ್ಲೆಲ್ಲ ಶ್ರೇಷ್ಠನಾದ ಭಾಸ್ಕರಾಚಾರ್ಯನು ಹನ್ನೆರಡನೆಯ ಶತಮಾನದ ಆರಂಭದಲ್ಲಿದ್ದನು.

ಈ ವಾಕ್ಯವು ಭಾಸ್ಕರಾಚಾರ್ಯನ ಚರಿತ್ರೆಯ ಆರಂಭದ ವಾಕ್ಯವು. ಆದದರಿಂದ ಹಿಂದಿನ ವಾಕ್ಯದ ಅಪೇಕ್ಷೆಯು ಇದಕ್ಕೆ ಇಲ್ಲ. "ಇವನು ಸಿದ್ಧಾಂತಶಿರೋಮಣಿ...." ಎಂಬ ಮುಂದಿನ ವಾಕ್ಯದ ಅಪೇಕ್ಷೆಯೂ ಇದಕ್ಕೆ ಇಲ್ಲ: ಆದುದರಿಂದ ಇದು ಸ್ವತಂತ್ರವಾಕ್ಯವು.

ಸಾಮಾನ್ಯವಾಕ್ಯ— ಒಂದೇ ಕ್ರಿಯಾಪದವುಳ್ಳ ಸ್ವತಂತ್ರವಾಕ್ಯವು ಸಾಮಾನ್ಯವಾಕ್ಯವೆನಿಸುವದು. ಸಾಮಾನ್ಯವಾಕ್ಯದಲ್ಲಿ ಬೇರೆ ಕ್ರಿಯಾವಾಚಕ (ಕೃದಂತ) ಗಳು ಇರಬಾರದು.

[೧] ರನ್ನನು ತನ್ನ ಗದಾಯುದ್ಧ ಕಾವ್ಯದಿಂದ ಬಹಳ ಕೀರ್ತಿಯನ್ನು ಸಂಪಾದಿಸಿದನು.

[೨] ಸವಾಯಿಮಾಧವರಾಯನ ವಿವಾಹಕಾಲದಲ್ಲಿ ಅರಸರ ಮತ್ತು ಸರದಾರರ ಆದರಸತ್ಕಾರವು ನಾನಾಫಡಣವೀಸನಿಂದ ಅವರವರ ಜಾತಿಯ ಪದ್ಧತಿಯಂತೆ ಮಾಡಿಸಲ್ಪಟ್ಟಿತು.

ವಾಕ್ಯವಿಭಜನೆಯನ್ನು ಮಾಡುವಾಗ ಕೆಳಗೆ ತೋರಿಸಿದಂತೆ ಕೋಷ್ಟಕಗಳಲ್ಲಿ ಪದವನ್ನು ವಿಂಗಡಿಸಿ ಬರೆಯಬೇಕು. ಕರ್ತೃಕರ್ಮ ಕ್ರಿಯಾಪದಗಳಿಗೆ ಸಂಬಂಧಿಸಿದ ಪದಗಳು ಒಂದಕ್ಕಿಂತ ಹೆಚ್ಚಿಗೆ ಇದ್ದರೂ ಅವನ್ನು ಕ್ರಮದಿಂದ ಆವವುಗಳ ಹಿಂದಿನ ಕೋಷ್ಟಕಗಳಲ್ಲಿ ಬರೆಯಬೇಕು.

ವಾಕ್ಯ	ಕರ್ತೃವಿಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಸಿದ ಪದ	ಕ್ರಿಯಾಪದ
೧ ರನ್ನನು.... ....ಸಂಪಾದಿಸಿದನು.	..	ರನ್ನನು	ಬಹಳ	ಕೀರ್ತಿಯನ್ನು	ತನ್ನ ಗದಾಯುದ್ಧ ಕಾವ್ಯದಿಂದ	ಸಂಪಾದಿಸಿದನು.
೨ ಸವಾಯಿ.... ....ಮಾಡಿಸಲ್ಪಟ್ಟಿತು.	..	ನಾನಾ ಫಡಣವೀಸರಿಂದ	ಅರಸರ ಮುತ್ತಿ ಸರದಾರರ	ಆದರ ಸತ್ಕಾರವು	೧ ಸವಾಯಿ ಮಾಧವರಾಯನ ವಿವಾಹ ಕಾಲದಲ್ಲಿ ೨ ಅವರವರ ಜಾತಿಯ ಪದ್ಧತಿಯಂತೆ	ಮಾಡಿಸಲ್ಪಟ್ಟಿತು.

ಮೊದಲಿನ ವಾಕ್ಯದಲ್ಲಿ 'ತನ್ನ ಗದಾಯುದ್ಧ ಕಾವ್ಯದಿಂದ' ಎಂಬ ಪದಸಮುದಾಯವು, ಸಂಪಾದಿಸಿದನು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದೆ, ಎರಡನೆಯ ವಾಕ್ಯದಲ್ಲಿ 'ಸವಾಯಿ ಮಾಧವರಾಯನ ವಿವಾಹಕಾಲದಲ್ಲಿ,' 'ಅವರವರ ಜಾತಿಯ ಪದ್ಧತಿಯಂತೆ' ಎಂಬ ಪದಸಮುದಾಯಗಳು ಮಾಡಿಸಲ್ಪಟ್ಟಿತು ಎಂಬ ಕ್ರಿಯಾಪದಕ್ಕೆ ಸಂಬಂಧಿಸಿವೆ.

ಸಾಪೇಕ್ಷವಾಕ್ಯ—ಅರ್ಥಜ್ಞಾನಕ್ಕೆ ಹಿಂದುಮುಂದಿನ ವಾಕ್ಯಗಳ * ಅಪೇಕ್ಷೆಯುಳ್ಳ ವಾಕ್ಯಗಳು ಸಾಪೇಕ್ಷವಾಕ್ಯಗಳೆನಿಸುವವು.

ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯದ ಅಪೇಕ್ಷೆಯು ಕೆಳಗೆ ಹೇಳುವ ಬಗೆಗಳಿಂದ ಇರಬಹುದು.

* ವಾಕ್ಯವೆಂದರೆ ವಾಕ್ಯವು ಹೇಳುವ ವಿಚಾರವು.

(೧) ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯವು ಅಂಗವಾಗಿರಬಹುದು.
(೨) ಒಂದು ವಾಕ್ಯವೂ ಇನ್ನೊಂದು ವಾಕ್ಯವೂ ಸಮುಚ್ಚಯಿಸಲ್ಪಟ್ಟಿರಬಹುದು.
(೩) ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯವು ಕಾರಣವಾಗಿರಬಹುದು.
(೪) ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯವು ವಿರುದ್ಧಾರ್ಥಕವಾಗಿರಬಹುದು.
(೫) ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯವು ವಿಕಲ್ಪಾರ್ಥಕವಾಗಿರಬಹುದು.
(೬) ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯವು ವಿವರಣವಾಗಿರಬಹುದು.

ಅಂಗವಾಕ್ಯ-ಪ್ರಧಾನವಾಕ್ಯಗಳು

ಅಂಗವಾಕ್ಯ—ಅರ್ಥದ ಪೂರ್ಣತೆಯಿಲ್ಲದೆ ಇನ್ನೊಂದು ವಾಕ್ಯಕ್ಕೆ ಅಧೀನವಾದ ವಾಕ್ಯವು ಅಂಗವಾಕ್ಯವೆನಿಸುವದು.

ಪ್ರಧಾನವಾಕ್ಯ — ಅಂಗವಾಕ್ಯಗಳ ವಿಚಾರವನ್ನು ಒಳಗೊಂಡು ಪೂರ್ಣವಿಚಾರವನ್ನು ಹೇಳುವ ವಾಕ್ಯವು ಪ್ರಧಾನವಾಕ್ಯವೆನಿಸುವದು.

ಉದಾ—ಮಹಾಭಾರತ ಯುದ್ಧವು ಧರ್ಮಕ್ಕೆ ಜಯವಾಗುವದೆಂಬದನ್ನು ಸಾರುವದು. ಇಲ್ಲಿ ಮಹಾಭಾರತ ಯುದ್ಧವು ಏನನ್ನು ಸಾರುವದು ಎಂದು ಪ್ರಶ್ನೆಮಾಡಲು ಧರ್ಮಕ್ಕೆ ಜಯವಾಗುವದೆಂಬದನ್ನು ಎಂದು ಉತ್ತರವು ಬರುವದು. 'ಧರ್ಮಕ್ಕೆ ಜಯವು ಆಗುವದು' ಎಂಬದು ಒಂದು ವಾಕ್ಯವು; 'ಅದು ಮಹಾಭಾರತ ಯುದ್ಧವು ಸಾರುವದು' ಎಂಬ ವಾಕ್ಯಕ್ಕೆ ಕರ್ಮರೂಪವಾಗಿ ಅಧೀನವಾಗಿದೆ. ಆದದರಿಂದ ಮಹಾಭಾರತ ಯುದ್ಧವು ಧರ್ಮಕ್ಕೆ ಜಯವಾಗುವದೆಂಬದನ್ನು ಸಾರುವದು ಎಂಬ ವಾಕ್ಯವು ಪ್ರಧಾನ ವಾಕ್ಯವು; ಧರ್ಮಕ್ಕೆ ಜಯವಾಗುವದು ಎಂಬುದು ಅಂಗವಾಕ್ಯವು.

ಅಂಗವಾಕ್ಯಗಳು ಪೂರ್ಣವಾಕ್ಯಗಳಾಗಿರಬಹುದು. ಇಲ್ಲವೆ ಖಂಡವಾಕ್ಯಗಳಾಗಿರಬಹುದು.

ಖಂಡವಾಕ್ಯ—ಕೃದಂತಗಳು ಕ್ರಿಯಾವಾಚಕಗಳಾದದರಿಂದ ಅವುಗಳಿಗೂ ಕರ್ತೃ ಮೊದಲಾದ ಕಾರಕಗಳೂ ವಿಶೇಷಣಗಳೂ ಇರುವವು. ಕೃದಂತಗಳಿಗೆ ಸಂಬಂಧಿಸಿದ ಆ ಎಲ್ಲ ಪದಗಳು ಸೇರಿ ವಾಕ್ಯದಂತೆ ಇರುವದರಿಂದ ಅವು ಖಂಡವಾಕ್ಯಗಳೆಂದು ಹೇಳಬಹುದು. ಉದಾ-ಗಂಗಾನದಿಯು ಹಿಮಾಲಯದ ಅಡಿಯ ಬಯಲು ನಾಡಿನಲ್ಲಿ ಹರಿಯುತ್ತ ವಂಗಪ್ರಾಂತವನ್ನು

ಸೇರುತ್ತದೆ. ಇಲ್ಲಿ 'ಗಂಗಾನದಿಯು ವಂಗಪ್ರಾಂತವನ್ನು ಸೇರುತ್ತದೆ' ಎಂಬ ಪ್ರಧಾನವಾಕ್ಯಕ್ಕೆ ಅಂಗವಾದ 'ಗಂಗಾನದಿಯು ಹಿಮಾಲಯದ ಅಡಿಯ ಬಯಲು ನಾಡಿನಲ್ಲಿ ಹರಿಯುತ್ತ' ಎಂಬ ವಾಕ್ಯವು ಹರಿಯುತ್ತ ಎಂಬ ಕೃದಂತದಿಂದಾದ ಖಂಡವಾಕ್ಯವು.

ಕೃನ್ನಾಮಗಳು, ಕೃದ್ ಭಾವನಾಮಗಳು, ಕೃದಂತಾವ್ಯಯಗಳು ಈ ಮೂರು ಬಗೆಯ ಕೃದಂತಗಳಿಂದಲೂ ಖಂಡವಾಕ್ಯಗಳಾಗುವವು.

ಕೃನ್ನಾಮಕ್ಕೆ—ಕೃಷ್ಣರಾಯನು ಒಮ್ಮೆ ನೋಡಿದವರನ್ನು ಎಂದೂ ಮರೆಯುವದಿಲ್ಲ.

ಕೃದ್ ಭಾವನಾಮಕ್ಕೆ—ಕಲ್ಲನ ಓದು ಹಾಗೆಯೇ ಮುಂದೆ ಸಾಗಿತು.

ಕೃದಂತಾವ್ಯಯಕ್ಕೆ—ದಿಗಂಬರನು **ಬರಲು** ತುಳಸಿಯು **ಆತನನ್ನು** ಕರೆದಳು.

ವಾಕ್ಯಗಳ ಅಂಗಪ್ರಧಾನಭಾವವು— ಒಂದು ವಾಕ್ಯವು ಇನ್ನೊಂದು ವಾಕ್ಯಕ್ಕೆ ಮೂರು ಬಗೆಗಳಿಂದ ಅಂಗವಾಗಿರಬಹುದು.

(೧) ಅಂಗವಾಕ್ಯವು ಪ್ರಧಾನವಾಕ್ಯದ ಯಾವದೊಂದು ಕಾರಕದ ಸ್ಥಾನದಲ್ಲಿರಬಹುದು. ಉದಾ-ಸಾಕ್ರೆಟೀಸನು ಒಂದು ಕಾಳಗದಲ್ಲಿ ಶೌರ್ಯದಿಂದ ಇಬ್ಬರ ಜೀವವನ್ನುಳಿಸಿದ್ದನ್ನು ಇತಿಹಾಸದಲ್ಲಿ ಓದಬಹುದು. ಇಲ್ಲಿ ಸಾಕ್ರೆಟೀಸನು ಉಳಿಸಿದ್ದನ್ನು ಎಂಬ ಅಂಗವಾಕ್ಯವು, ಇತಿಹಾಸದಲ್ಲಿ ಓದಬಹುದು ಎಂಬ ಪ್ರಧಾನವಾಕ್ಯದ ಕರ್ಮಸ್ಥಾನದಲ್ಲಿದೆ.

(೨) ಅಂಗವಾಕ್ಯವು ಪ್ರಧಾನವಾಕ್ಯದ ಯಾವದೊಂದು ಕಾರಕದ ವಿಶೇಷಣವಾಗಿರಬಹುದು. ಉದಾ-ಪರರ ಮಾತನ್ನು ಸುಮ್ಮನೆ ನಂಬುವ ಮನುಷ್ಯನು ಕೊನೆಗೆ ಕೆಡುವನು. ಇಲ್ಲಿ 'ಪರರ ಮಾತನ್ನು....ನಂಬುವ' ಎಂಬ ಅಂಗವಾಕ್ಯವು ಪ್ರಧಾನವಾಕ್ಯದೊಳಗಿನ ಮನುಷ್ಯನು ಎಂಬ ಕರ್ತೃಕಾರಕದ ವಿಶೇಷಣವಾಗಿದೆ.

(೩) ಅಂಗವಾಕ್ಯವು ಪ್ರಧಾನವಾಕ್ಯದೊಳಗಿನ ಕ್ರಿಯೆಗೆ ವಿಶೇಷಣವಾಗಿರಬಹುದು. ಉದಾ—ಸಜ್ಜನರು ಧನಕ್ಕಿಂತ ಮಾನವು ಶ್ರೇಷ್ಠವೆಂದು ಭಾವಿಸುತ್ತಾರೆ. ಇಲ್ಲಿ ಧನಕ್ಕಿಂತ ಮಾನವು ಶ್ರೇಷ್ಠವು [ಇರುತ್ತದೆ ಅಧ್ಯಾಹೃತ ಕ್ರಿ.] ಎಂಬ ಅಂಗವಾಕ್ಯವು ಪ್ರಧಾನವಾಕ್ಯದ ಭಾವಿಸುತ್ತಾರೆ ಎಂಬ ಕ್ರಿಯಾಪದದ ಕ್ರಿಯೆಗೆ ವಿಶೇಷಣವಾಗಿದೆ.

ಸಂಮಿಶ್ರವಾಕ್ಯ—ಅಂಗವಾಕ್ಯಗಳಿಂದ ಕೂಡಿದ ಪ್ರಧಾನವಾಕ್ಯವು ಸಂಮಿಶ್ರವಾಕ್ಯವೆನಿಸುವದು.

ಅಂಗವಾಕ್ಯವು ಪೂರ್ಣವಾಗಿದ್ದು ಕಾರಕಸ್ಥಾನದಲ್ಲಿದ್ದರೆ ಎಂಬುದು, ಎಂಬುದನ್ನು, ಎಂಬ ಮಾತು, ಎಂಬ ಮಾತನ್ನು ಮೊದಲಾದವು ಅದನ್ನು ಪ್ರಧಾನವಾಕ್ಯಕ್ಕೆ ಕೂಡಿಸುವವು.

ಸಾಕ್ರೆಟೀಸನು ಒಂದು ಕಾಳಗದಲ್ಲಿ ಶೌರ್ಯದಿಂದ ಇಬ್ಬರ ಜೀವವನ್ನುಳಿಸಿದನೆಂಬುದನ್ನು, ಇತಿಹಾಸದಲ್ಲಿ ಓದಬಹುದು. ಇಲ್ಲಿ '(ನಾವು) ಎಂಬುದನ್ನು ಇತಿಹಾಸದಲ್ಲಿ ಓದಬಹುದು' ಎಂಬ ಪ್ರಧಾನವಾಕ್ಯಕ್ಕೆ 'ಸಾಕ್ರೆಟೀಸನು ಒಂದು ಕಾಳಗದಲ್ಲಿ ಶೌರ್ಯದಿಂದ ಇಬ್ಬರ ಜೀವವನ್ನು ಳಿಸಿದನು, ಎಂಬ ವಾಕ್ಯವು ಕರ್ಮಕಾರಕ ಸ್ಥಾನದಲ್ಲಿದೆ. 'ಎಂಬುದನ್ನು' ಆ ಎರಡೂ ವಾಕ್ಯಗಳನ್ನು ಕೂಡಿಸುತ್ತದೆ.

ಸಾಕ್ರೆಟೀಸನು ಸತ್ಯಶೀಲನೂ, ಮನೋಧೈರ್ಯವುಳ್ಳವನೂ ಆಗಿದ್ದನೆಂಬದರಲ್ಲಿ ಯಾರೂ ಸಂಶಯುವನ್ನು ಇಟ್ಟುಕೊಳ್ಳಲಿಲ್ಲ. ಇಲ್ಲಿ ಅಂಗವಾಕ್ಯವು ಪ್ರಧಾನವಾಕ್ಯದ ಅಧಿಕರಣಸ್ಥಾನದಲ್ಲಿದೆ, 'ಎಂಬದರಲ್ಲಿ' ಎರಡನ್ನೂ ಕೂಡಿಸುವದು.

ಅಂಗವಾಕ್ಯವು ಪೂರ್ಣವಾಕ್ಯವಾಗಿದ್ದು ಪ್ರಧಾನವಾಕ್ಯದ ಕ್ರಿಯಾವಿಶೇಷಣಸ್ಥಾನದಲ್ಲಿದ್ದರೆ ಎಂದು, ಎನ್ನುತ್ತ, ಎನ್ನಲು ಮೊದಲಾದವು ಅದನ್ನು ಪ್ರಧಾನವಾಕ್ಯಕ್ಕೆ ಕೂಡಿಸುವವು. ಉದಾ—

ಸಿಸಿರೊ ಪಂಡಿತನು, ನೀತಿಶಾಸ್ತ್ರವನ್ನು ಸಾಕ್ರೆಟೀಸನೇ ಸ್ವರ್ಗದಿಂದ ಭೂಲೋಕಕ್ಕೆ ತಂದನು ಎಂದು ಬರೆದಿರುವನು. ಇಲ್ಲಿ ಎಂದು ಎಂಬ ಕೃದಂತಾವ್ಯಯದಿಂದ ಸಂಬಂಧಿಸಿದ ವಾಕ್ಯವು ಪ್ರಧಾನ ವಾಕ್ಯದ ಕ್ರಿಯಾವಿಶೇಷಣಸ್ಥಾನದಲ್ಲಿದೆ.

ನಿನ್ನ ಸ್ನೇಹಿತನ ಸ್ಥಿತಿಯನ್ನು ಕಣ್ಣಿನಿಂದ ನೋಡಿದೆಯೆಂದರೆ ನಾನು ಹೇಳಿದುದನ್ನು ಒಪ್ಪುವೆ. ಇಲ್ಲಿ, ಎಂದರೆ ಎಂಬದರಿಂದ ಸಂಬಂಧಿಸಿದ ವಾಕ್ಯವು ಪ್ರಧಾನವಾಕ್ಯದ ಕ್ರಿಯಾವಿಶೇಷಣವಾಗಿದೆ.

ಇದೇ ಮೇರೆಗೆ ಎನಲು ಮೊದಲಾದವುಗಳಿಂದ ಸಂಬಂಧಿಸಿದ ವಾಕ್ಯಗಳು ಅಂಗವಾಗಿರುವದನ್ನು ಉದಾಹರಣಗಳಿಂದ ತಿಳಿದುಕೊಳ್ಳಬೇಕು.

ಖಂಡವಾಕ್ಯಗಳು ಅಂಗವಾಗಿರುವದಕ್ಕೆ ಉದಾಹರಣಗಳು — ಕೃನ್ನಾಮ, ಕೃದ್ಭಾವನಾಮಗಳಿಂದಾದ ಖಂಡವಾಕ್ಯಗಳು ಪ್ರಧಾನ ವಾಕ್ಯದ ಕಾರಕಸ್ಥಾನದಲ್ಲಿರುವವು. ಉದಾ—

ಕೃನ್ನಾಮಕ್ಕೆ—ನಿನ್ನೆ ನಿಮ್ಮನ್ನು ನೋಡಿದವನು ಇಂದು ಬೆಂಗಳೂರಿಗೆ ಹೋದನು. ಇಲ್ಲಿ ನೋಡಿದವನು ಎಂಬ ಕೃನ್ನಾಮದಿಂದಾದ ಖಂಡವಾಕ್ಯವು ಪ್ರಧಾನವಾಕ್ಯದ ಕರ್ತೃಸ್ಥಾನದಲ್ಲಿದೆ.

ಕೃದ್‌ಭಾವನಾಮಕ್ಕೆ— ಬೇಟೆಗಾರನ ಪ್ರಾಣಿಗಳ ಕೊಲೆಯನ್ನು ಸಾಧುಗಳು ಒಪ್ಪುವದಿಲ್ಲ. ಇಲ್ಲಿ ಕೊಲೆಯನ್ನು ಎಂಬ ಕೃದ್ಭಾವನಾಮದಿಂದಾದ ಖಂಡವಾಕ್ಯವು ಪ್ರಧಾನವಾಕ್ಯದ ಕರ್ಮಕಾರಕ ಸ್ಥಾನದಲ್ಲಿದೆ.

ಒಂದು ಊರವನು ಒಮ್ಮೆ ವ್ಯಾಪಾರದಲ್ಲಿ ಮೋಸವನ್ನು ಮಾಡುವದರಿಂದ ಮುಂದೆ ಆ ಊರವರೆಲ್ಲರೂ ಮೋಸಗಾರರಲ್ಲಿ ಎಣಿಸಲ್ಪಡುತ್ತಾರೆ. ಇಲ್ಲಿ ಮಾಡುವದರಿಂದ ಎಂಬ ಕೃದ್ಭಾವನಾಮದಿಂದಾದ ಖಂಡವಾಕ್ಯವು ಹೇತ್ವರ್ಥದಲ್ಲಿದೆ.

ಕೃದಂತಾವ್ಯಯಗಳಿಂದಾದ ಖಂಡವಾಕ್ಯಗಳು ಪ್ರಧಾನವಾಕ್ಯದ ಕ್ರಿಯಾವಿಶೇಷಣಸ್ಥಾನದಲ್ಲಿರುವವು. ಉದಾ—

ನಾಗವರ್ಮನು ಕನ್ನಡಭಾಷೆಯಲ್ಲಿ ವ್ಯಾಕರಣ, ಅಲಂಕಾರ ಗ್ರಂಥಗಳನ್ನು ಬರೆದು ಅದನ್ನು ಊರ್ಜಿತಸ್ಥಿತಿಯನ್ನೈದಿಸಿದನು.

ಸರಕಾರದ ಪೋಲಿಸು, ನ್ಯಾಯಕೋರ್ಟುಗಳನ್ನು ನಾಗರಿಕನು ಮನ್ನಿಸುತ್ತ ಅವಕ್ಕೆ ತಾನು ಅನುಕೂಲನಾಗಬೇಕು.

ಸ್ತುತಿಪಾಠಕರು ಮಂಗಳಗೀತಗಳನ್ನು ಹೇಳಲು ಶೂದ್ರಕನೃಪತಿಯು ಹಾಸಿಗೆಯಿಂದ ಏಳುವನು.

ಬಡವರು ವಿಲಾಸಕ್ಕೆ ಮೆಚ್ಚಿದರೆ ಅವರು ಸ್ವಲ್ಪ ದಿನಗಳಲ್ಲಿ ಸೋಮಾರಿಗಳಾಗುತ್ತಾರೆ.

ಈ ವಾಕ್ಯಗಳಲ್ಲಿ ಬರೆದು, ಮನ್ನಿಸುತ್ತ, ಹೇಳಲು, ಮೆಚ್ಚಿದರೆ ಈ ಕೃದಂತಾವ್ಯಯಗಳಿಂದಾದ ಖಂಡವಾಕ್ಯಗಳು ಪ್ರಧಾನವಾಕ್ಯಗಳ ಕ್ರಿಯಾವಿಶೇಷಣಗಳಾಗಿರುವವು.

ಸಂಮಿಶ್ರ ವಾಕ್ಯಗಳ ವಿಭಜನೆ

(೧) ಸಾಕ್ರೆಟೀಸನು ಒಂದು ಕಾಳಗದಲ್ಲಿ ಶೌರ್ಯದಿಂದ ಇಬ್ಬರ ಜೀವವನ್ನುಳಿಸಿದನೆಂಬದನ್ನು ಇತಿಹಾಸದಲ್ಲಿ ಓದಬಹುದು.

(೨) ನಾಗವರ್ಮನು ಕನ್ನಡ ಭಾಷೆಯಲ್ಲಿ ವ್ಯಾಕರಣ, ಅಲಂಕಾರ ಗ್ರಂಥಗಳನ್ನು ಬರೆದು ಅದನ್ನು ಊರ್ಜಿತಸ್ಥಿತಿಯನ್ನೈದಿಸಿದನು.

(ಸಂಮಿಶ್ರವಾಕ್ಯದ ವಿಭಜನೆಯಲ್ಲಿ ಅಂಗವಾಕ್ಯಕ್ಕೂ ಪ್ರಧಾನ ವಾಕ್ಯಕ್ಕೂ ಇರುವ ಸಂಬಂಧವನ್ನು ಮೊದಲಿನ ಕೋಷ್ಟಕದಲ್ಲಿ ತೋರಿಸಬೇಕು.

ವಾಕ್ಯ ಎಂತಹ ವಾಕ್ಯ ಸಂಬಂಧ	ಕರ್ತೃವಿನ ಸಂಬಂಧಿಪದ	ಕರ್ತೃ	ಕರ್ಮದ ಸಂಬಂಧಿಪದ	ಕರ್ಮ	ಕ್ರಿಯಾಪದಕ್ಕೆ ಸಂಬಂಧಿಪದ	ಕ್ರಿಯಾಪದ ಕ್ರಿಯಾಪೂರಕ
ಪ್ರಧಾನ ವಾಕ್ಯ ೧. ಸಾಕ್ರೆಟೀಸನು ....ಓದ ಬಹುದು	..	ನಾವು (ಅಧ್ಯಾಹೃತ)	....	ಸಾಕ್ರೆಟೀಸನು.... ಉಳಿಸಿದನು ಎಂಬದನ್ನು	ಇತಿಹಾಸದಲ್ಲಿ	ಓದಬಹುದು
ಅಂಗವಾಕ್ಯ ಸಾಕ್ರೆಟೀಸನು ....ಉಳಿಸಿದನು. ಪ್ರಧಾನವಾಕ್ಯದ ಕರ್ಮ ಕಾರಕಸ್ಥಾನ ದಲ್ಲಿದೆ	..	ಸಾಕ್ರೆ-ಟೀಸನು	ಇಬ್ಬರ	ಜೀವವನ್ನು	ಒಂದು ಕಾಳಗದಲ್ಲಿ ಶೌರ್ಯದಿಂದ	ಉಳಿಸಿದನು

ಪ್ರಧಾನವಾಕ್ಯ ೨ ನಾಗವರ್ಮನು........ಐದಿಸಿದನು.	..	ನಾಗ ವರ್ಮನು		೧ ಅದನ್ನು ೨ ಊರ್ಜಿತ ಸ್ಥಿತಿಯನ್ನು	ಕನ್ನಡ ಭಾಷೆಯಲ್ಲಿ ವ್ಯಾಕರಣ ಅಲಂಕಾರ ಗ್ರಂಥಗಳನ್ನು ಬರೆದು	ಐದಿ ದನ
ಅಂಗವಾಕ್ಯ ಕನ್ನಡ ಭಾಷೆಯಲ್ಲಿ........ ....ಬರೆದು ಪ್ರಧಾನ ವಾಕ್ಯದ ಕ್ರಿಯಾವಿಶೇಷಣ ಸ್ಥಾನದಲ್ಲಿದೆ.	..	ನಾಗ ವರ್ಮನು (ಅಧ್ಯಾಹೃತ		ವ್ಯಾಕರಣ ಅಲಂಕಾರ ಗ್ರಂಥ ಗಳನ್ನು	ಕನ್ನಡ ಭಾಷೆಯಲ್ಲಿ	ಬರೆ

ಸಂಯೋಜಿತ ವಾಕ್ಯ—ಮತ್ತು, ಆದರೆ ಮೊದಲಾದ ಸಂಯೋಜ ಶಬ್ದಗಳಿಂದ ಎರಡು ಸ್ವತಂತ್ರ ವಾಕ್ಯಗಳು ಕೂಡಿಸಲ್ಪಟ್ಟಿದ್ದರೆ ಆ ವಾ ಗಳು ಸಂಯೋಜಿತ ವಾಕ್ಯಗಳೆನಿಸುವವು. ಉದಾ—

ವಿದ್ಯಾರಣ್ಯರು ಮೃತ್ಯುಲೋಕದಲ್ಲಿ ಜನ್ಮವೆತ್ತಿದರು; ಮತ ಮಾನವ ಜನ್ಮದ ಸಾರ್ಥಕತೆಯನ್ನು ಮಾಡಿಕೊಂಡರು.

ವಾಕ್ಯಸಂಯೋಜಕಗಳು

(೧) ಸಮುಚ್ಚಾಯಕಗಳು—ಮತ್ತು, ಅಲ್ಲದೆ, ಇದಲ್ಲದೆ, ಜಿ
ಕೂಡಲೆ ಮುಂ.

(೨) ಕಾರಣಾರ್ಥಕಗಳು— ಅದರಿಂದ, ಇದರಿಂದ, ಆದದರಿಂ
ಆದಕಾರಣ, ಏಕೆಂದರೆ ಮುಂ.

(೩) ವಿರುದ್ಧಾರ್ಥಕಗಳು— ಆದರೆ, ಆದರೂ, ಇದ್ದರೂ ಮು

(೪) **ವಿಕಲ್ಪಾರ್ಥಕಗಳು**—ಇಲ್ಲವೆ, ಅಲ್ಲವೆ ಮುಂ.
(೫) **ವಿವರಣಾರ್ಥಕಗಳು**—ಹೇಗೆಂದರೆ, ಎಂತೆಂದರೆ, ಏನೆಂದರೆ.

ಉದಾಹರಣಗಳು

(೧) ಕುಟುಂಬದ ಪ್ರತಿಷ್ಠೆಯು ಬೆಳೆಯುಬೇಕಾದರೆ ಕುಟುಂಬದ ...ರು ಒಕ್ಕಟ್ಟಿನಿಂದ ಇರಬೇಕಲ್ಲದೆ ನೆರೆಹೊರೆಯುವರ ಸಂಗಡ ನ್ಯಾಯ ...ದಲೂ ಪ್ರೀತಿಯಿಂದಲೂ ನಡೆದುಕೊಳ್ಳಬೇಕು.

(೨) ಗೋತ್ರಪತಿಯು ಕುಟುಂಬದ ಪೋಷಕನೂ ನಿಯಾಮಕನೂ ...ನು; ಆದರಿಂದ ಗೋತ್ರಪತಿಯ ಅಧಿಕಾರವು ನೆಲೆಗೊಂಡಿತು.

(೩) ಇಜಿಪ್ತದಲ್ಲಿ ಪ್ರಜೆಗಳ ಹೋರೆಗಳಿಗನುಸಾರವಾಗಿ ಹಲವು ...ಾನ ಜಾತಿಗಳುಂಟಾದವು; ಆದರೆ ಈಜಿಗೆ ಧರ್ಮೋಪದೇಶಕರು ...ಷ್ಠ ಜಾತಿಯುವರಾದರು.

(೪) ಜನರು ಉದ್ಯೋಗಿಗಳಾಗಿ ಹಣವನ್ನು ಸಂಪಾದಿಸಬೇಕು. ...ವೆ ಸೋಮಾರಿತನದಿಂದ ಬಡತನದಲ್ಲಿ ತೊಳಲಾಡಬೇಕು.

(೫) ಕುಳಿತು ಉಂಡರೆ ಕುಡಿಕೆ ಹೊನ್ನೂ ಸಾಲದು; ಹೇಗೆಂದರೆ ...ಳಿತು ಉಣ್ಣುವವನು ಹೊಸ ದುಡ್ಡನ್ನು ಗಳಿಸದಿರುವದರಿಂದ ಇದ್ದ ...ಡ್ಡೆಲ್ಲ ಹೊಟ್ಟೆಗೆ ಹೋಗುವದು.

ಸಂಯೋಜಿತ ವಾಕ್ಯಗಳ ವಿಭಜನೆ

(೧) [ಅ] ನ್ಯೂಟನನು ಶಾಂತವೃತ್ತಿಯುವನೂ, ನಿರಭಿಮಾನಿಯೂ ...ನು; [ಬ] ಅಲ್ಲದೆ ಅವನಲ್ಲಿ ಧೈರ್ಯ, ಧರ್ಮಶ್ರದ್ಧೆ ಮೊದಲಾದ ...ವು ಸದ್ಗುಣಗಳಿದ್ದವು.

(೨) [ಅ] ಶ್ರೀಮುಹಾವಿಷ್ಣುವು ಭೂಲೋಕದಲ್ಲಿ ಸೂರ್ಯವಂಶದ ...ರಥಮುಹಾರಾಜನ ಹೆಂಡತಿಯಾದ ಕೌಸಲ್ಯಾದೇವಿಯ ಉದರದಲ್ಲಿ ...ಮಾಭಿಧಾನದಿಂದ ಅವತರಿಸಿದನು. [ಬ] ಏಕೆಂದರೆ, ರಾಕ್ಷಸ ...ಹಾರಾಪೇಕ್ಷಿಗಳಾದ ದೇವತೆಗಳು ಆತನನ್ನು ಹಾಗೆ ಆಗ್ರಹಗೊಳಿಸಿದರು.

ವಾಕ್ಯ ಸಂಬಂಧ	ಕರ್ತೃವಿಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯೆಗೆ ಸಂಬಂಧಿಸಿದ ಪದ	ಕ್ರಿಯಾ ಪದ
೧ (ಅ) ನ್ಯೂಟನನು.... ಇದ್ದನು ಅಲ್ಲದೆ ಎಂಬ ಸಮುಚ್ಚಯದಿಂದ ಸಂಯೋಜಿತವಾದ ವಾಕ್ಯ	೧. ಬಹು ಶಾಂತವೃತ್ತಿಯುವನೂ, ೨. ನಿರಭಿಮಾನಿಯೂ	ನ್ಯೂಟನನು	....	....		ಇದ್ದನು
(ಬ) ಅವನಲ್ಲಿ .. ಇದ್ದವು.	ಧೈರ್ಯ.... ಮೊದಲಾದ	ಸದ್ಗುಣಗಳು	....	....	ಅವನಲ್ಲಿ	ಇದ್ದವು.
೨ (ಅ) ಶ್ರೀಮಹಾವಿಷ್ಣುವು ಅವತರಿಸಿದನು. ಏಕೆಂದರೆ ಎಂಬುದು ಕಾರಣ ವಾಕ್ಯವನ್ನು ಆರಂಭಿಸುವದು.	....	ಶ್ರೀಮಹಾವಿಷ್ಣುವು	....	....	(೧) ಭೂಲೋಕದಲ್ಲಿ (೨) ಸೂರ್ಯ... ಉದರದಲ್ಲಿ (೩) ರಾಮಾಭಿಧಾನದಿಂದ	
(ಬ) ಏಕೆಂದರೆ .... ಆಗ್ರಹಗೊಳಿಸಿದರು.	ರಾಕ್ಷಸ ಸಂಹಾರಾಪೇಕ್ಷಿಗಳಾದ	ದೇವತೆಗಳು	....	ಆತನನ್ನು	ಹಾಗೆ	ಆಗ್ರಹಗೊಳಿಸಿದರು.

ಗ್ರಂಥಗಳಲ್ಲಿ ಸಾಮಾನ್ಯ ವಾಕ್ಯಗಳು ಕಡಿಮೆಯಾಗಿರುವವು. ಸಂಮಿಶ್ರ ವಾಕ್ಯಗಳೂ, ಸಂಯೋಜಿತ ವಾಕ್ಯಗಳೂ ವಿಶೇಷವಾಗಿರುವವು. ಅವುಗಳಲ್ಲಿಯೂ ಸಂಮಿಶ್ರ ವಾಕ್ಯಗಳೂ ಸಂಯೋಜಿತ ವಾಕ್ಯಗಳೂ ಒಂದರೊಳಗೊಂದು ಕೂಡಿಕೊಂಡಿರುವದೇ ವಿಶೇಷವಾಗಿದೆ. ಉದಾ—

ಲವಂಗದ ಆಕಾರವು ಮೊಳೆಯಂತೆ ಇರುತ್ತದೆ; ಆದರಿಂದ ಅದು ಏಶಿಯುದ ಸ್ವಾತಂತ್ರ್ಯ ಪುರುಷನ ಶವದ ಪೆಟ್ಟಿಗೆಯ ಮೊಳೆಯಾಯಿತೆಂದು ಒಬ್ಬನು ಉತ್ಪ್ರೇಕ್ಷಿಸುತ್ತಾನೆ. ಇಲ್ಲಿ ಮೊದಲನೆಯ ವಾಕ್ಯವು ಎರಡನೆಯ ವಾಕ್ಯಕ್ಕೆ ಕಾರಣವಾಗಿದೆ, ಎರಡನೆಯ ವಾಕ್ಯವು ಸಂಮಿಶ್ರ ವಾಕ್ಯವಾಗಿದೆ. ಅದರಲ್ಲಿ "ಒಬ್ಬನು ಇದು ಏಶಿಯುದ ಸಾತಂತ್ರ್ಯ ಪುರುಷನ ಶವದ ಪೆಟ್ಟಿಗೆಯ ಮೊಳೆಯಾಯಿತೆಂದು" ಎಂಬ ಅಂಗವಾಕ್ಯವು ಕ್ರಿಯಾ ವಿಶೇಷಣವಾಗಿದೆ. ಆದ್ದರಿಂದ ಈ ಸಂಯೋಜಿತ ವಾಕ್ಯಗಳಲ್ಲಿ ಮೊದಲನೆಯದು ಸಾಮಾನ್ಯವಾಕ್ಯವಾಗಿದೆ; ಎರಡನೆಯದು ಸಂಮಿಶ್ರ ವಾಕ್ಯವಾಗಿದೆ.

ಅರ್ಥವಿಶೇಷವನ್ನು ತೋರಿಸುವದಕ್ಕಾಗಿ ಕೆಲವು ಕ್ರಿಯಾಪದಗಳನ್ನು ಕೃದಂತಾವ್ಯಯಗಳಿಗೆ ಸೇರಿಸಿ ಉಪಯೋಗಿಸುವ ವಾಡಿಕೆಯು ಹೆಚ್ಚಾಗಿದೆ. ಉದಾ—ಕಾಲಾರ್ಥಕ ಕೃದಂತಾವ್ಯಯಗಳಿಗೆ ಇರು ಧಾತುವಿನ ಕ್ರಿಯಾ ಪದಗಳು—

ವರ್ತ. ಕೃ. ಅವ್ಯಯದ ಮುಂದೆ— ನೋಡುತ್ತಿರುತ್ತೇನೆ. ನೋಡುತ್ತಿದ್ದನು, ನೋಡುತ್ತಿರುವನು, ನೋಡುತ್ತಿರಲಿ, ನೋಡುತ್ತಿದ್ದಾನು, ನೋಡುತ್ತಿರನು. ಇಲ್ಲಿ ಕ್ರಿಯಾನೈರಂತರ್ಯವು ತೋರುವದು.

ಭೂ. ಕೃ. ಅವ್ಯಯದ ಮುಂದೆ – ನೋಡಿರುತ್ತಾನೆ. ನೋಡಿದ್ದನು. ನೋಡಿರುವನು, ನೋಡಿರಲಿ, ನೋಡಿದ್ದಾನು, ನೋಡಿದ್ದರು ಮುಂ.

ಭೂ. ಕೃ. ಅವ್ಯಯದ ಮುಂದೆ ಕೊಳ್ಳು, ಕೊಡು ಧಾತುಗಳ ರೂಪಗಳು— ತಿಳಿದುಕೊಂಡನು, ಹೇಳಿಕೊಡುತ್ತಾನೆ, ಬರೆದುಕೊಡುವನು, ಕಳುಹಿಕೊಡಲಿ, ಹೇಳಿಕೊಟ್ಟಾನು, ನೋಡಿಕೊಳ್ಳುವನು ಮುಂ.

ಬಿಡು-ನುಂಗಿಬಿಟ್ಟನು, ತೀರಿಸಿಬಿಡುವನು, ಒಗೆದುಬಿಡುತ್ತಾನೆ ಮುಂ.

ಆಡು—ತಿರುಗಾಡುತ್ತಾರೆ, ಬಯ್ದಾಡುವರು, ಹೊಡೆದಾಡಲಿ ಮುಂ.

(ಇವುಗಳ ಅರ್ಥವಿಶೇಷವನ್ನು ೪೬ನೆಯ ಪುಟದಲ್ಲಿ ನೋಡಿರಿ.)

ಹೋಗು—ಸತ್ತು ಹೋದನು. ಕೆಟ್ಟು ಹೋದನು.

ಹಾಕು—ಕಿತ್ತು ಹಾಕಿದನು. ಬೀಸಿ ಹಾಕುವನು.

ಬೇರೆ ಕೃದಂತಾವ್ಯಯಗಳ ಮುಂದೆ-ಇರಹೇಳಿದನು; ಬರಮಾಡಿದನು.

ಇಲ್ಲಿ ಕ್ರಿಯಾಪದಗಳನ್ನು ಕೃದಂತಗಳಿಂದ ವಿಂಗಡಿಸಿದರೆ ಸಂಮಿಶ್ರ ವಾಕ್ಯಗಳಾಗುವವು. ಉದಾ—

೧. ರಾಮನು ರಾವಣನನ್ನು ನೋಡಿದ್ದನು: ನೋಡಿ+ಇದ್ದನು ಇವನ್ನು ವಿಂಗಡಿಸಿದರೆ—

(ಅ) ರಾಮನು ರಾವಣನನ್ನು ನೋಡಿ;

(ಬ) ರಾಮನು ಇದ್ದನು.

ಅ ವಾಕ್ಯವು ಬ ವಾಕ್ಯಕ್ಕೆ ಅಂಗವಾಗಿರುವದರಿಂದ ಈ ವಾಕ್ಯವು ಸಂಮಿಶ್ರವಾಕ್ಯವಾಗುವದು.

ಆದರೆ ಇಂತಹ ಕ್ರಿಯಾಪದಗಳು ಒಂದೇ ಕ್ರಿಯಾಪದದಂತೆ ಅರ್ಥವನ್ನು ಹೇಳುವದರಿಂದ ವಾಕ್ಯವಿಭಜನೆಯಲ್ಲಿ ಇವನ್ನು ವಿಂಗಡಿಸದೆ ಇರಬಹುದು. ಉದಾ— ತೋಟಗನು [ಕರ್ತೃ] ಗಿಡಗಳನ್ನು [ಕರ್ಮ] ಕಿತ್ತುಹಾಕಿದನು. [ಕ್ರಿಯಾಪದ]. ಕಿತ್ತು ಮತ್ತು ಹಾಕಿದನು ಇವನ್ನು ವಿಂಗಡಿಸದಿರಬಹುದು.

ಸಂಯೋಜಿತ ವಾಕ್ಯಗಳಲ್ಲಿ ಉತ್ತರವಾಕ್ಯಕ್ಕೆ ಕಾರಣಸ್ಥಾನದಲ್ಲಿರುವ ಪೂರ್ವ ವಾಕ್ಯಗಳು ಒಂದಕ್ಕಿಂತ ಹೆಚ್ಚಿಗೆ ಇರಬಹುದು.

(೧) ಮನುಷ್ಯನು ಭೂಮಿಯಲ್ಲಿ ಹುಟ್ಟಿ ಬೆಳೆಯುತ್ತಾನೆ: (೨) ಅವನಿಗೆ ಆಕಾಶವು ಶ್ವಾಸೋಚ್ಛ್ವಾಸಾದಿ ಜೀವನ ಸಾಧನಗಳನ್ನು ಕೊಡುತ್ತದೆ; ಆದದರಿಂದ (೩) ಮನುಷ್ಯನಿಗೆ ಭೂಮಿಯು ತಾಯಿಯೆಂದೂ, ಆಕಾಶವು ತಂದೆಯೆಂದೂ ಋಗ್ವೇದವು ಹೇಳುತ್ತದೆ. ಇಲ್ಲಿ ೩ನೆಯ ವಾಕ್ಯಕ್ಕೆ ೧–೨ ವಾಕ್ಯಗಳು ಕಾರಣಸ್ಥಾನದಲ್ಲಿವೆ.

ಅನುಬಂಧ (೧). ಹಳಗನ್ನಡ ಶಬ್ದಗಳು ಹೊಸಗನ್ನಡಕ್ಕೆ ಬಂದಾಗ ಆದ ವಿಕಾರಗಳು

(೧) ವ್ಯಂಜನಾಂತ ಶಬ್ದಗಳ ಕೊನೆಯಲ್ಲಿ ಉಕಾರವು ಸೇರುವದು. ಉದಾ—ನಾಮ:—ಕಾಲ್-ಕಾಲು, ತಳಿರ್-ತಳಿರು, ಸೊಡರು, ಕೋಲು, ಊರು, ಕೊರಲು, ಕೂಳು, ಏಳು (೭), ಚೇಳು ಮುಂ.

ಧಾತು— ಆನ್-ಆನು, ಈನ್-ಈನು, ಸೀಸು, ಕೆರಳು, ತರು ಬರು, ಉದಿರು, ಬಳಲು, ನೇಲು, ಆಯು, ಕೇಳು, ಮುಂ.

ನ, ಣ, ಲ, ಯ, ಳ ಕಾರಾಂತಗಳಾದ ಒಂದು ಹ್ರಸ್ವಸ್ವರವುಳ್ಳ ಶಬ್ದಗಳ ಕೊನೆಯ ವ್ಯಂಜನಕ್ಕೆ ದ್ವಿತ್ವದೊಡನೆ ಉಕಾರವು ಸೇರುವದು.

ಉದಾ—ನಾಮ-ನ್-ಪೊನ್-ಹೊನ್ನು; ಬೆನ್-ಬೆನ್ನು; ಣ್-ಮಣ್ ಮಣ್ಣು, ಕಣ್ಣು, ಹೆಣ್ಣು, ಹಣ್ಣು; ಲ್-ಕಲ್-ಕಲ್ಲು, ಬಿಲ್ಲು; ನೆಲ್ಲು; ಳ್-ಮುಳ್-ಮುಳ್ಳು ಕಳ್ಳು (ಹೆಂಡ.) ಧಾತು—ನ್-ತಿನ್-ತಿನ್ನು, ಎನ್ನು; ಲ್-ನಿಲ್-ನಿಲ್ಲು, ಮೆಲ್ಲು, ಕೊಲ್ಲು, ಸಲ್ಲು. ಯ್-ಕೊಯ್-ಕೊಯ್ಯು, ಒಯ್ಯು. ಳ್-ಕೊಳ್-ಕೊಳ್ಳು.

(೨) ದೀರ್ಘಸ್ವರವುಳ್ಳ ಯಕಾರಾಂತ ಶಬ್ದಗಳ ಮತ್ತು ಒಲ್, ಕಲ್ ಧಾತುಗಳ ಕೊನೆಯಲ್ಲಿ ಇಕಾರವು ಸೇರುವದು. ಉದಾ-ತಾಯ್-ತಾಯಿ, ಬಾಯಿ, ಒಲಿ, ಕಲಿ.

(೩) ಕೆಲವು ಶಬ್ದಗಳ ಅನುಸ್ವಾರವು ಲೋಪಹೊಂದುವದು. ಉದಾ—ನಾಮ—ಪೊಸಂತಿಲ್-ಹೊಸತಿಲು, ಸೆರಂಗು-ಸೆರಗು, ನೊರಂಜು-ನೊರಜು ಇರುಂಪೆ-ಇರುವೆ. ದಿವಸಮಂ-ದಿವಸವ; ಮರಮಂ-ಮರವ; ಲೋಕಮಂ-ಲೋಕವ; ದ್ವಿತೀಯಾಂತ ಪದಗಳ ಇಂತಹ ವಿಕೃತರೂಪಗಳು ಬಹಳ ಬಳಕೆಯಲ್ಲಿ ಬಂದಿರುವದರಿಂದ ಇವುಗಳ ಕೊನೆಯ ಅ ಎಂಬುದು ಅಂ ಎಂಬುದರ ವಿಕೃತರೂಪವಾದ (ದ್ವಿತೀಯಾ) ವಿಭಕ್ತಿಪ್ರತ್ಯಯವೆಂದು ತಿಳಿಯಬಹುದು.

ಕ್ರಿ.—ಬಂದಂ-ಬಂದ; ತಂದಂ-ತಂದ; ನೋಡಿದಂ—ನೋಡಿದ ಮುಂ.

ಧಾತು—ಮಾಂಜು-ಮಾಜು, ಕಲಂಕು-ಕಲಕು, ಸೋಂಕು-ಸೋಕು ತುಳುಂಕು = ತುಳುಕು, ತೊಡಂಕು = ತೊಡಕು, ತರುಂಬು=ತರುಬು, ಅಡಂಗು=ಅಡಗು.

(೪) ಪಕಾರವು ಹಕಾರವಾಗುವದು. ನಾಮ— ಪಣೆ- ಹಣೆ; ಹಾವು, ಹಾಲು, ಹಾಡು, ಹಗೆ, ಹನಿ, ಹಾವಸೆ, ಹಂದಿ, ಹಲವು, ಹೆರವರು, ಹೊಸತು (ದು), ಹಳದು, ಅಂತಪ್ಪ–ಅಂತಹ, ಎಂತಹ.

ಧಾತು— ಪಸಿ–ಹಸಿ, ಹೋಲು, ಹೋರು, ಹೊಯ್ಯು, ಹಿಡಿ, ಹರಿ, ಹೊಸೆ, ಹೊಡೆ, ಹಲುಬು, ಹಾಸು, ಹುಳಿ, ಹರಸು.

(೫) ಸಂಯುಕ್ತಾಕ್ಷರಗಳ ಮೊದಲಿನ ವ್ಯಂಜನವು ಮುಂದಿನ ವ್ಯಂಜನವಾಗುವದು; ಇಲ್ಲವೆ ಅದು ಲೋಪಹೊಂದುವದು. ಉದಾ— ನಾಮ— ಕಳ್ತಲೆ-ಕತ್ತಲೆ, ಕಳ್ತಿ-ಕತ್ತಿ, ಪಳ್ತಿ–ಹತ್ತಿ, ಹೆರ್ಮೆ–ಹೆಮ್ಮೆ, ಧಾತು- ಪರ್ಬು- ಹಬ್ಬು, ಪೊಣ್ಮು–ಹೊಮ್ಮು, ತಳ್ಗು–ತಗ್ಗು, ಗುರ್ದು–ಗುದ್ದು, ಕರ್ಚು–ಕಚ್ಚು. ವ್ಯಂಜನಲೋಪ—ಕಿಮುಳ್ಚು–ಕಿವುಚು, ನಾಣ್ಚು–ನಾಚು.

(೬) ವಕಾರವು ಬಕಾರವಾಗುವದು. ಉದಾ—ನಾಮ—ಕರ್ವು– ಕಬ್ಬು, ಒರ್ವ–ಒಬ್ಬ, ಇರ್ವರು–ಇಬ್ಬರು. ಧಾತು— ಪರ್ವು–ಹಬ್ಬು.

(೭) ಸಂಯುಕ್ತಾಕ್ಷರಗಳ ನಡುವೆ ಉಕಾರವು ಸೇರುವದು.

ನಾಮ—ಒಲ್ಮೆ–ಒಲುಮೆ, ನುಣ್ಪು–ನುಣುಪು, ಬೆಳ್ಪು–ಬಿಳುಪು.

ಧಾತು—ಅಳ್ಕು–ಅಳುಕು ; ನಿಲ್ಕು–ನಿಲುಕು ; ಸಿಲ್ಕು–ಸಿಲುಕು; ಬಳ್ಕು–ಬಳುಕು ; ನುಣುಚು.

(೮) ಬೇರೆ ಕೆಲವು ವಿಕಾರಗಳು— ಅಹಗೆ–ಹಾಗೆ; ಇಹಗೆ–ಹೀಗೆ; ಎಹಗೆ–ಹೇಗೆ; ಅಲ್ಲಿಯಣ–ಅಲ್ಲಿನ; ಇಲ್ಲಿಯಣ–ಇಲ್ಲಿನ, ಎಲ್ಲಿಯಣ–ಎಲ್ಲಿನ; ತೆಂಕಣ–ತೆಂಕಲ, ಮೂಡಣ–ಮೂಡಲ; ಕೆಯ್–ಕೈ; ಮೆಯ್–ಮೈಮುಂ.

(ಎಲ್ಲ ಶಬ್ದಗಳಿಗೂ ಮೇಲೆ ಹೇಳಿದ ವಿಕಾರಗಳಾಗಬೇಕೆಂದೂ ಒಂದು ಶಬ್ದದಲ್ಲಿ ಒಂದೇ ವಿಕಾರವು ಬರಬೇಕೆಂದೂ ತಿಳಿಯಕೂಡದು.)

ಅನುಬಂಧ (೨)— ಹಳಗನ್ನಡ ರೂಪಗಳು

ಹಳಗನ್ನಡವು ಬರಬರುತ್ತ ಹೊಸಗನ್ನಡವಾಗಿ ಮಾರ್ಪಟ್ಟಿರುವದರಿಂದಲೂ, ಪದ್ಯಗ್ರಂಥಗಳ ಭಾಷೆಯು ಹಳಗನ್ನಡವಾಗಿ ಇರುವದರಿಂದಲೂ ಹಳಗನ್ನಡದ ಕೆಲವು ರೂಪಗಳನ್ನು ತಿಳಿದುಕೊಳ್ಳುವದು ಆವಶ್ಯಕವು.

ಹಳಗನ್ನಡ ನಾಮವಿಭಕ್ತಿಪ್ರತ್ಯಯಗಳೂ ನಾಮಪದಗಳೂ

ಹಳಗನ್ನಡ ವಿಭಕ್ತಿ ಪ್ರತ್ಯಯಗಳು	ಏಕವಚನದ ರೂಪಗಳು			ಬಹುವಚನದ ರೂಪಗಳು
	ಅರಸ	ಅರಸಿ	ಮರ	
ಪ್ರ. ಮ್. (ನ್)	ಅರಸನ್.	ಅರಸಿ (ಪ್ರತ್ಯಯ ಲೋಪ)	ಮರಂ,	ಅರಸರ್, ಅರಸಿಯರ್, ಮರಂಗಳ್
ದ್ವಿ. ಅಮ್.	ಅರಸನಂ.	ಅರಸಿಯಂ	ಮರಮಂ.	ಅರಸರಂ, ಅರಸಿಯರಂ, ಮರಂಗಳಂ,
ತೃ. ಇಂ ಇಂದಂ ಇಂದೆ	ಅರಸನಿಂ ಅರಸನಿಂದಂ ಅರಸನಿಂದೆ.	ಅರಸಿಯಿಂ ಮುಂ.	ಮರದಿಂ ಮುಂ. ಮುತ್ತ ಮರದೆ.	ಅರಸರಿಂ, ಅರಸಿಯರಿಂ, ಮರಂಗಳಿಂ ಮುಂ.
ಚ. ಗೆ. ಕೆ.	ಅರಸಂಗೆ	ಅರಸಿಗೆ	ಮರಕ್ಕೆ (ಕೆ)	
ಪಂ. ಅತ್ತಣಿಂ. ಅತ್ತಣಿಂದಂ. ಅತ್ತಣಿಂದೆ.	ಅರಸನತ್ತಣಿಂ ಮುಂ.	ಅರಸಿಯ-ತ್ತಣಿಂ ಮುಂ.	ಮರದತ್ತಣಿಂ ಮುಂ.	
ಷ. ಅ.	ಅರಸನ	ಅರಸಿಯ	ಮರದ.	
ಸ. ಒಳ್, ಅಲ್ಲಿ.	ಅರಸನೊಳ್ ಅರಸನಲ್ಲಿ	ಅರಸಿಯೊಳ್ ಅರಸಿಯಲ್ಲಿ	ಮರದೊಳ್ ಮರದಲ್ಲಿ	
ಸಂ. ಎ. ಏ.	ಅರಸನೆ (ನೇ)	ಅರಸಿಯೆ (ಯೇ)	ಮರಮೆ (ಮೇ)	

ತಳಿರ್ ಎಂಬ ವ್ಯಂಜನಾಂತ ಶಬ್ದದ ರೂಪಗಳು—ತಳಿರ್ ತಳಿರ್ಗಳ್, ತಳಿರಂ, ತಳಿರ್ಗಳಂ, ತಳಿರಿಂ, ತಳಿರ್ಗಳಿಂ, ತಳಿರ್ಗೆ, ತಳಿರ್ಗಳ್ಗೆ, ತಳಿರತ್ತಣಿಂ, ತಳಿರ್ಗಳತ್ತಣಿಂ, ತಳಿರ, ತಳಿರ್ಗಳ, ತಳಿರೊಳ್, ತಳಿರ್ಗಳೊಳ್, ತಳಿರೇ, ತಳಿರ್ಗಳೇ.

ಕ್ರಿಯಾವಿಭಕ್ತಿ ಪ್ರತ್ಯಯಂಗಳೂ ಕ್ರಿಯಾಪದಗಳೂ

ಕ್ರಿ. ವಿ. ಪ್ರತ್ಯಯ ಏ. ವ. ಬ. ವ.	ಭೂತಕಾಲ	ವರ್ತಮಾನಕಾಲ	ಭವಿಷ್ಯತ್ಕಾಲ
ಪ್ರ. ಅನ್, ಅರ್ ಮ. ಅಯ್, ಇರ್ ಉ. ಎನ್, ಎವು	ನುಡಿದನ್, ನುಡಿದರ್, ನುಡಿದಯ್, ನುಡಿದಿರ್, ನುಡಿದೆನ್. ನುಡಿದೆವು.	ನುಡಿದಪನ್, ನುಡಿದಪರ್, ನುಡಿದಪಯ್ ನುಡಿದಪಿರ್, ನುಡಿದಪೆನ್, ನುಡಿದಪೆವು.	ನುಡಿವನ್, ನುಡಿವರ್, ನುಡಿವಯ್, ನುಡಿವಿರ್, ನುಡಿವೆನ್ ನುಡಿವೆವು.

ಸಂಭಾವನಾರ್ಥಕ ರೂಪಗಳು ಹಳಗನ್ನಡದಲ್ಲಿ ಇಲ್ಲ. ಅಕ್ಕುಂ, ಬೇಳ್ಕುಂ ಮೊದಲಾದವನ್ನು ಕ್ರಿಯಾಪದದ ಮುಂದೆ ಸೇರಿಸುವರು. ಬಂದವನಕ್ಕುಂ=ಬಂದಿರಬಹುದು; ಮುಂ.

ವಿಧ್ಯರ್ಥಕ ರೂಪಗಳು

ವಿಧ್ಯರ್ಥಕ ಪ್ರತ್ಯಯ ಏ. ವ.	ಬ. ವ.	ಮಾಡು ಧಾತುವಿನ ರೂಪಗಳು ಏ. ವ.	ಬ. ವ.
ಪ್ರ. ಗೆ.	ಗೆ.	ಮಾಡುಗೆ (ಮಾಳ್ಕೆ)	ಮಾಡುಗೆ (ಮಾಳ್ಕೆ)
ಮ. ವುದು	ವುದು ಇಂ.	ಮಾಡುವುದು ಮಾಳ್ಪುದು) ಮಾಡು	ಮೂಡುವುದು (ಮಾಳ್ಪುದು) ಮಾಡಿಂ.
ಉ. ವೆನ್	ವಂ.	ಮಾಡುವೆನ್ (ಮಾಳ್ಪೆನ್)	ಮಾಡುವಂ (ಮಾಳ್ಪಂ)

ನಿಷೇಧಾರ್ಥಕ ರೂಪಗಳು — ನಿಷೇಧಾರ್ಥದಲ್ಲಿ ಭೂತಕಾಲದ ಪ್ರತ್ಯಯಗಳೇ ಬರುವವು. ನಡುವೆ ಆಗಮವಿಲ್ಲ.

ಮಾಡು ಧಾತುವಿನ ನಿಷೇಧಾರ್ಥಕ ರೂಪಗಳು— ಪ್ರ. ಪು. ಮಾಡನ್ ಮಾಡರ್, ಮ. ಪು. ಮಾಡಯ್, ಮಾಡಿರ್, ಉ. ಪು. ಮಾಡೆನ್, ಮಾಡೆವು.

ಕೃತ್ ಪ್ರತ್ಯಯಗಳಿಗೆ ಆಗುವ ವಿಕಾರಗಳು

ಪ್ರತ್ಯಯ	ಮಾಡು ಧಾತು ರೂಪ	ವಿಕಾರ	ಮಾಡು ಧಾ. ರೂಪ
ಅಲ್	ಮಾಡಲ್	ಅಲು	ಮಾಡಲು
ಅಲ್ಕೆ	ಮಾಡಲ್ಕೆ	ಅಲಿಕ್ಕೆ	ಮಾಡಲಿಕ್ಕೆ
ಉತ್ತೆ, ಉತೆ	ಮಾಡುತ್ತೆ, ಮಾಡುತೆ	ಉತ್ತ ಉತ್ತಾ	ಮಾಡುತ್ತ,
ಉತುಂ; ಉತ್ತುಂ	ಮಾಡುತುಂ, ಮಾಡುತ್ತುಂ		ಮಾಡುತ್ತಾ
ದೊಡೆ	ಮಾಡಿದೊಡೆ	ದರೆ	ಮಾಡಿದರೆ
ವೊಡೆ	ಮಾಡುವೊಡೆ	ವರೆ	ಮಾಡುವರೆ
ವುದುಂ	ಮಾಡುವುದುಂ	ವುದೂ	ಮಾಡುವು(ವ)ದೂ

ಹಳಗನ್ನಡದಲ್ಲಿ ಮಾತ್ರ ಇರುವ ಅಕ್ಷರಗಳು— ಱ್ (ರೇಫದಂತೆ ಉಚ್ಚರಣೆ); ಅಱಿ = ತಿಳಿ; ಅರಿ = ಕತ್ತರಿಸು. ೞ್ — (ಳಕಾರದಂತೆ ಉಚ್ಚರಣೆ) ಅೞಿ=ಮಜ್ಜಿಗೆ; ಅಳಿ=ಅಳತೆ ಮಾಡು.

ವರ್ತಮಾನ ಭವಿಷ್ಯತ್ಕಾಲಗಳಲ್ಲಿ ಪ್ರಥಮ ಪುರುಷದ ಎಲ್ಲ ಲಿಂಗಗಳಲ್ಲಿ ಎರಡೂ ವಚನಗಳಲ್ಲಿ ಕುಂ, ಗುಂ ಎಂಬ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುವವು. ಉದಾ—

ಬರ್+ಕುಂ=ಬರ್ಕುಂ, ನುಡಿ+ಗುಂ=ನುಡಿಗುಂ.

ಹೋಲಿಕೆಯನ್ನು ತೋರಿಸುವಾಗ ವೋಲ್ ವೊಲ್ ಎಂಬ ತದ್ಧಿತ ಪ್ರತ್ಯಯಗಳುಂಟು. ಉದಾ–ರಾಮನ+ವೊಲ್=ರಾಮನವೊಲ್; ರಾಮನ ವೋಲ್; ರಾಮಂ ಬೊಲ್ ರಾಮಂ ಬೋಲ್ ಎಂಬ ರೂಪಗಳೂ ಉಂಟು. ಎ, ಅನ್ನಂ, ಅನ್ನೆಗಂ; ಇನಂ, ಇನೆಗಂ ಎಂಬ ಕೃತ್ಪ್ರತ್ಯಯಗಳು ಹಳಗನ್ನಡದಲ್ಲಿ ಉಂಟು. ಉದಾ—ಎ-ಬರ್+ಎ-ಬರೆ; (ಬರಲು) ಅನ್ನಂ-ಬರ್+(ವ) ಅನ್ನಂ=ಬರ್ಪನ್ನಂ; (ಬರುವವರೆಗೆ) ಬರ್+ವ+ಅನ್ನೆಗಂ=ಬರ್ಪನ್ನೆಗಂ= (ಬರುವವರೆಗೆ) ಬರ್+ಇನಂ=ಬರ್ಪಿನಂ; (ಬರುತ್ತಿರಲು) ಬರ್+ಇನೆಗಂ= ಬರ್ಪಿನೆಗಂ (ಬರುವವರೆಗೆ). ಇದೇ ಮೇರೆಗೆ ನುಡಿಯೆ, ನುಡಿವನ್ನಂ, ನುಡಿವನ್ನೆಗಂ, ನುಡಿವಿನಂ, ನುಡಿವಿನೆಗಂ ಮುಂ.

ನಾನ್ ಎಂಬ ಶಬ್ದದಂತೆ ಹಳಗನ್ನಡದಲ್ಲಿ ಎನ್ ಎಂಬ ಶಬ್ದವೂ ಉಂಟು. ಅದರ ರೂಪಗಳು—ಏ.ವ—ಆನ್, ಎನ್ನಂ, ಎನ್ನಿಂ, ಎನಗೆ, ಎನ್ನತ್ತಣಿಂ, ಎನ್ನ, ಎನ್ನೊಳ್. ಬ.ವ-ಆಂ, ಎಮ್ಮಂ, ಎಮ್ಮಿಂ, ಎಮಗೆ ಮುಂ.

ರಾಮನ್-ರಾಮ; ದನಂ-ದನ, ಬಂದನ್-ಬಂದ; ನಡೆದನ್-ನಡೆದ ಎಂದು ವಿಭಕ್ತಿಪ್ರತ್ಯಯ ಲೋಪವೂ ಕೆಲವೆಡೆ ಉಂಟು.

ಅನುಬಂಧ (೩)—ತದ್ಭವಗಳು

ತದ್ಭವ— ಸಂಸ್ಕೃತದಿಂದ ವಿಕಾರವನ್ನು ಹೊಂದಿ ಕನ್ನಡಕ್ಕೆ ಬಂದಿರುವ ಶಬ್ದಗಳು ತದ್ಭವಗಳೆನಿಸುವವು ಕೆಲವು ಶಬ್ದಗಳು ಕೊನೆಯಲ್ಲಷ್ಟೇ ವಿಕಾರವನ್ನು ಹೊಂದಿರುವವು. ಕೆಲವು ಶಬ್ದಗಳು ಮೊದಲಲ್ಲಿಯೂ ನಡುವೆಯೂ ವಿಕಾರವನ್ನು ಹೊಂದಿರುವವು.

ಕೊನೆಯಲ್ಲಷ್ಟೇ ವಿಕಾರವನ್ನು ಹೊಂದಿರುವ ಶಬ್ದಗಳಿಗೆ ಸಮಸಂಸ್ಕೃತಗಳೆಂಬ ಹೆಸರೂ ಉಂಟು.

ಕೊನೆಯಲ್ಲಾಗುವ ವಿಕಾರಗಳು

ಸ್ವರಾಂತಗಳು-(೧) ಕೆಲವು ಶಬ್ದಗಳ ಕೊನೆಯ ಅಕಾರಕ್ಕೆ ವಿಕಲ್ಪವಾಗಿ ಎಕಾರವು ಬರುವದು ಉದಾ—ಪ್ರಶ್ನ- ಪ್ರಶ್ನೆ, ಪ್ರಶ್ನ; ದರ್ಭೆ; ಊಹೆ; ಅಕ್ಷತೆ, ಉದಾಹರಣೆ, ಪಾತ್ರೆ, ಅಭಿಲಾಷೆ, ಬೋಧೆ, ವಿವರಣೆ, ವರ್ಣನೆ ಮುಂ.

(೨) ಸಂಸ್ಕೃತದಲ್ಲಿ ಸ್ತ್ರೀಲಿಂಗಗಳಾದ ಆಕಾರಾಂತ ಶಬ್ದಗಳ ಕೊನೆಯ ಆಕಾರವು ಎಕಾರವಾಗುವದು. ಉದಾ—ಮಾಲಾ-ಮಾಲೆ, ಬಾಲೆ, ಶಾಲೆ, ಗಂಗೆ, ಚಂದ್ರಿಕೆ, ಪಂಡಿತೆ, ನಿಪುಣೆ. ಶಾಂತೆ, ಸಂಪನ್ನೆ ಮುಂ.

ಕೆಲವು ಶಬ್ದಗಳ ಕೊನೆಯ ಆಕಾರವು ಅಕಾರವೂ ಆಗುವದು. ಉದಾ-ಕಂಧರಾ-ಕಂಧರ, ಕಂಧರೆ, ಕರುಣ, ಕರುಣೆ, ದಯ, ದಯೆ, ಭಿಕ್ಷ, ಭಿಕ್ಷೆ.

(೩) ಅನೇಕ ಸ್ವರಗಳುಳ್ಳ ಈ, ಊಕಾರಾಂತ ಶಬ್ದಗಳ ಕೊನೆಯ ಸ್ವರಗಳು ಹ್ರಸ್ವವಾಗುವವು. ಉದಾ—ಈ-ನದೀ-ನದಿ; ಗೌರಿ, ಲಕ್ಷ್ಮಿ, ಮಹಿ, ನಾರಿ, ವಾಣಿ, ವಿದುಷಿ, ಕರ್ತ್ರಿ, ಆಯುಷ್ಮತಿ, ಭಗವತಿ.

ಊ—ವಧೂ-ವಧು; ಚಮು.

ಏಕಸ್ವರವುಳ್ಳ ಶಬ್ದಗಳು ವಿಕಾರವನ್ನು ಹೊಂದುವದಿಲ್ಲ. ಉದಾ— ಸ್ತ್ರೀ, ಶ್ರೀ, ಭ್ರೂ, ಗೋ.

(೪) ಕೊನೆಯ ಋಕಾರವು ಆರ ಎಂದಾಗುವದು. ಉದಾ— ಕರ್ತೃ— ಕರ್ತಾರ, ದಾತಾರ, ಭರ್ತಾರ, ವಕ್ತಾರ, ಶ್ರೋತಾರ.

ಕೆಲವೆಡೆಯಲ್ಲಿ ಋಕಾರವು ಅಕಾರವಾಗುವದು. ಉದಾ— ಕರ್ತೃ— ಕರ್ತ, ದಾತ, ಭರ್ತ, ಪಿತ. ಮಾತೃ ಶಬ್ದವು ಮಾತೆ ಎಂದಾಗುವದು.

ವ್ಯಂಜನಾಂತಗಳು— (೧) ಕೊನೆಯ ನಕಾರವು ಲೋಪ ಹೊಂದುವದು. ಉದಾ—ಆತ್ಮನ್-ಆತ್ಮ, ರಾಜನ್-ರಾಜ, ಶಶಿನ್-ಶಶಿ, ಇದೇ ಮೇರೆಗೆ ಬ್ರಹ್ಮ, ಪರ್ವ, ಕರ್ಮ. ಕರಿ, ಯಶಸ್ವಿ ಮುಂ.

(೨) ಕೊನೆಯ ಸ ತಕಾರಗಳಿಗೆ ದ್ವಿತ್ವದೊಡನೆ ಉಕಾರವು ಸೇರುವದು. ಉದಾ — ಸಕಾರಕ್ಕೆ—ಯಶಸ್—ಯಶಸ್ಸು; ಇದೇ ಮೇರೆಗೆ—ಮನಸ್ಸು, ವಯಸ್ಸು; ತೇಜಸ್ಸು; ಶ್ರೇಯಸ್ಸು; ಧನುಸ್ಸು; ವರ್ಚಸ್ಸು; ತಕಾರಕ್ಕೆ— ಜಗತ್—ಜಗತ್ತು; ಇದೇ ಮೇರೆಗೆ ಸಂಪತ್ತು, ವಿಪತ್ತು, ಆಪತ್ತು, ಮರುತ್ತು ಮುಂತಾದವು.

ಕೆಲವೆಡೆ ಕೊನೆಯ ಸಕಾರಕ್ಕೆ ಲೋಪವೂ ಉಂಟು. ಉದಾ—ಮನಸ್— ಮನ; ಇದೇ ಮೇರೆಗೆ ಪಯ, ಶ್ರೇಯ, ವಯ, ತೇಜ, ಧನು.

(೩) ಅಂತ್ಯವ್ಯಂಜನದಲ್ಲಿ ಅಕಾರವು ಸೇರುವದು. ಉದಾ—ಸಂಪದ್— ಸಂಪದ ದಿವ್—ದಿವ, ಆಪದ್—ಆಪದ; ಹೀಗೆ ಸುಮನಸ, ನಿಶ್ರೇಯಸ.

(೪) ವತ್, ಮತ್, ಪ್ರತ್ಯಯಗಳು ವಂತ, ಮಂತ ಎಂದಾಗುವವು. ಉದಾ— ಭಗವತ್—ಭಗವಂತ, ಯಶಸ್ವತ್—ಯಶಸ್ವಂತ; ಕೀರ್ತಿಮತ್— ಕೀರ್ತಿವಂತ; ಆಯುಷ್ಮಂತ; ಹನುಮಂತ ಮುಂ.

ಬೇರೆ ಕೆಲವು ವಿಕಾರಗಳು— ವಾಚ್—ವಾಕ್ಕು, ಮಹತ್—ಮಹಾಂತ; ಜಗತ್—ಜಗ, ಪಥಿನ್—ಪಥ, ಸಖಿ—ಸಖ, ದಿಶ್—ದಿಕ್ಕು, ವಿದ್ವಸ್-ವಿದ್ವಾಂಸ.

ಆದಿ ಮಧ್ಯಾಂತ್ಯಗಳಲ್ಲಾಗುವ ವಿಕಾರಗಳು

೧. ಮಹಾಪ್ರಾಣಗಳು ಅಲ್ಪಪ್ರಾಣಗಳಾಗುವವು. ಉದಾ— ಸ್ತಂಭ— ಕಂಬ, ಗೋಧೂಮ—ಗೋದಿ, ಘಟಿಕಾ—ಗಳಿಗೆ, ಘಂಟಾ—ಗಂಟೆ, ಭೂತಿ— ಬೂದಿ.

೨. ವರ್ಗಗಳ ಪ್ರಥಮಾಕ್ಷರಗಳು ತೃತೀಯಾಕ್ಷರಗಳಾಗುವವು ಉದಾ– ಮಲ್ಲಿಕಾ–ಮಲ್ಲಿಗೆ, ಝಕಟ–ಜಗಳ, ಸೂಚೀ–ಸೂಜಿ; ವಚಾ–ಬಜೆ, ಕಾಚ–ಕಾಜು, ತಟ–ದಡ, ಕಟಕ–ಕಡಗ, ಧಾತ್ರೀ–ದಾದಿ, ದ್ಯೂತ–ಜೂಜು.

೩. ಪ ಬ ಮಕಾರಗಳು ವಕಾರವಾಗುವವು. ಉದಾ— ಪ—ತಪಸ್ವಿನ್—ತವಸಿ, ಕಪರ್ದಿಕಾ–ಕವಡಿ, ಸಪತ್ನೀ–ಸವತಿ, ಬ–ಕಬಲ–ಕವಳ. ಮ—ಯಾಮ—ಜಾವ; ಯಮಲ—ಅವಳಿ, ಜವಳಿ; ಭ್ರಮಣ–ಭವಣಿ.

೪. ವಕಾರವು ಬಕಾರವಾಗುವದು, ಉದಾ—ವರ್ತಿ–ಬತ್ತಿ, ವೃಷಭ–ಬಸವ, ವಾಪೀ—ಬಾವಿ, ವಾಟ—ಬಾಡ; ವೀಥೀ–ಬೀದಿ, ವಂಧ್ಯಾ–ಬಂಜೆ, ವೇಗ—ಬೇಗ, ವಿಜ್ಞಾಪನ—ಬಿನ್ನಪ, ಬಿನ್ನಹ, ಬಿನ್ನಯ; ವೇತ್ರ—ಬೆತ್ತ; ವಿನಾಯಕ—ಬೆನಕ, ವಲ್ಲೀ–ಬಳ್ಳಿ.

೫. ಯಕಾರವು ಜಕಾರವಾಗುವದು. ಉದಾ—ಯತ್ನ—ಜತನ, ಯಾತ್ರೆ–ಜಾತ್ರೆ, ಯಾಮ–ಜಾವ, ಯೋಗಿನ್–ಜೋಗಿ.

೬. ಶ, ಷಕಾರಗಳು ಸಕಾರವಾಗುವವು. ಉದಾ—ಪಶು—ಹಸು, ಶರ್ಕರಾ–ಸಕ್ಕರೆ, ಶಾಣ–ಸಾಣೆ, ಶುಂಠೀ–ಸುಂಟಿ, ಷ–ಸರ್ಷಪ–ಸಾಸುವೆ, ಜ್ಯೋತಿಷಿ–ಜೋಯಿಸಿ, ಮಷೀ–ಮಸಿ, ಸ್ನುಷಾ–ಸೊಸೆ, ವಿಷಮ–ಬೆಸ, ಶೇಷಾ—ಸೇಸೆ.

೭. ಪ ಫಕಾರಗಳು ಹಕಾರವಾಗುವವು. ಉದಾ–ಪಲ್ಲೀ–ಹಳ್ಳಿ, ಹಲ್ಲಿ; ಪ್ರಾಣ–ಹರಣ; ಪಕ್ಷಿನ್–ಹಕ್ಕಿ; ಪಿಷ್ಟ–ಹಿಟ್ಟು, ಪೂರ್ಣಿಮಾ–ಹುಣ್ಣಿವೆ, ಪಿಂಡ–ಹಿಂಡು, ಹಿಂಡೆ; ಫಲಕ–ಹಲಗೆ, ಫಟಾ–ಹೆಡೆ.

೮. ಟ, ಠ, ಡ, ಲಕಾರಗಳು ಳಕಾರವಾಗುವವು. ಉದಾ—ಸ್ಫಟಿಕ–ಪಳುಕು, ಕುಕ್ಕುಟ–ಕೋಳಿ, ಮಠಿಕಾ–ಮಳಿಗೆ, ದಾಡಿಮ–ದಾಳಿಂಬ, ಜಲ–ಜಳ, ಇಲಾ–ಇಳೆ ಕಲಮ–ಕಳವೆ (ಬತ್ತ), ಕಂಬಲ–ಕಂಬಳಿ.

೯. ವಿಜಾತೀಯ ಸಂಯುಕ್ತಾಕ್ಷರಗಳ ಆದಿಯ ಸಕಾರಕ್ಕೆ ಕೆಲವೆಡೆ ಲೋಪವಾಗುವದು. ಉದಾ—ಸ್ಥಾನ—ಠಾಣ, ಸಂಸ್ಥಾ—ಸಂತೆ.

೧೦. ಚ, ಛಕಾರಗಳು ಸಕಾರವಾಗುವವು. ಉದಾ— ಚರ್ಮಕಾರ—ಸಮ್ಮಗಾರ, ಚೀರ—ಸೀರೆ, ಚೂರ್ಣ—ಸುಣ್ಣ, ಛುರಿಕಾ—ಸುರಿಗೆ.

(೧೧) ವಿಜಾತೀಯ ಸಂಯುಕ್ತಾಕ್ಷರಗಳ ನಡುವೆ ಉಕಾರವು ಸೇರುವದು. ಉದಾ—ಭಕ್ತ-ಭಕುತ, ಮುಕ್ತಿ-ಮುಕುತಿ, ಯುಕ್ತಿ-ಯುಕುತಿ, ವರ್ಷ-ವರುಷ.

ಇನ್ನೂ ಹಲವು ವಿಕಾರಗಳಾಗುವವು. ಕೆಳಗೆ ಕೊಟ್ಟ ತದ್ಭವಗಳಲ್ಲಿ ಅಂತಹ ವಿಕಾರಗಳನ್ನು ತಿಳಿದುಕೊಳ್ಳಬಹುದು.

ಕೆಲವು ಉಪಯುಕ್ತವಾದ ತದ್ಭವಗಳು

ಅಕ್ಷ-ಅಚ್ಚು ಅರ್ಗಲ-ಅಗುಳಿ ಆರ್ಯ-ಅಜ್ಜ ಆಶ್ರಯ-ಆಸರ ಆಜ್ಞಾ-ಆಣೆ ಅಂತರಿಕ್ಷ-ಅಂತರಿಕೆ ಕರ್ತರೀ-ಕತ್ತರಿ ಕರ್ಮಕಾರ-ಕಮ್ಮಾರ ಕರಂಡಕ-ಕರಡಿಗೆ ಕ್ರಕಚ-ಕರಗಸ ಕಾಂಸ್ಯ-ಕಂಚು ಕುಠಾರ-ಕೊಡಲಿ ಕುಮಾರ-ಕುವರ ಕುಂಭಕಾರ-ಕುಂಬಾರ ಕೂಷ್ಮಾಂಡ-ಕುಂಬಳ ಕೋಕಿಲ-ಕೋಗಿಲ ಖಲ-ಕಳ (ಕಣ) ಗ್ರಂಥಿ-ಗಂಟು ಗಾಥೆ-ಗಾದೆ ಘಟಿಕಾ-ಗಡಿಗೆ ಘಟಿಕಾ-ಗಳಿಗೆ ಚಮರೀ-ಚೌರಿ ಛಾಂದಸ-ಛಾನಸ ಚತುರ್ಥೀ-ಚೌತಿ ತುವರೀ-ತೊಗ(ವ)ರಿ ದಂಷ್ಟ್ರಾ-ದಾಡೆ ದಂತ-ಜಂತ ದ್ವಿತೀಯಾ-ಬಿದಿಗೆ ತೃತೀಯಾ-ತದಿಗೆ ದೀಪಿಕಾ-ದೀವಿಗೆ ಧನ-ದಣ್ಣ ನಿದ್ರಾ-ನಿದ್ದೆ ಪನಸ-ಹಲಸು ಪ್ರತಿಪದ್-ಪಾಡ್ಯ ಪಕ್ಷ-ಪಕ್ಕ ಪ್ರಗ್ರಹ-ಹಗ್ಗ ಪ್ರಣಾಲಿಕಾ-ಹರಿನಾಳಿಗೆ ಪಾದುಕಾ-ಹಾವುಗೆ ಪ್ರಸಾಧನ-ಹಸನ ಪ್ರಾಯ-ಹರಯ ಪುಸ್ತಕ-ಹೊತ್ತಗೆ ಮುಖ-ಮೊಗ ರಾಕ್ಷಸ-ರಕ್ಕಸ ವರ್ಧಕಿ-ಬಡಗಿ ಶಷ್ಕುಲಿ-ಚಕ್ಕುಲಿ ಭಕ್ತ-ಭತ್ತ ಸಂಚಕರ-ಸಂಚಕಾರ, ಚಂಚಗಾರ ಸಂಧ್ಯಾ-ಸಂಜೆ ಸಿಂಹ-ಸಿಂಗ ಹಂಸ-ಅಂಚೆ ಅವಿಶ್ರಾಂತ-ಅಸರಂತ ಅಂಬಾ-ಅಂಬೆ, ಅಬ್ಬೆ, ಅವ್ವೆ, ಅವ್ವ.

ಸಂಸ್ಕೃತದ ಶಬ್ದಗಳು ತದ್ಭವಗಳಾಗುವಂತೆ ಸಮಾಸಗಳೂ ತದ್ಭವಗಳಾಗುವವು. ಉದಾ:-ಚರ್ಮಪಟ್ಟಿಕಾ-ಚಮ್ಮಟಿಗೆ ದೇವಕುಲ-ದೇಗುಲ, ಮಂಗಲಾರ್ತಿಕ್ಯ-ಮಂಗಳಾರತಿ, ಚತುಷ್ಪಥ-ಚೌಪಟ ಮುಂ.

ಕನ್ನಡ

ಛಂದೋಮಂಜರಿ

ಛಂದಃಶಾಸ್ತ್ರವು ಪದ್ಯರಚನೆಯ ನಿಯಮಗಳನ್ನು ಹೇಳುವದು. ಪದ್ಯವು ಪಾದಗಳಿಂದ ಕೂಡಿರುವದು. ಪದ್ಯದ ಒಂದು ಸಾಲಿಗೆ ಪಾದ, ಚರಣ ಎಂಬ ಹೆಸರುಗಳುಂಟು. ಪಾದವು (೧) ಗಣ, (೨) ಪ್ರಾಸ, (೩) ಯತಿ ಇವುಗಳ ನಿಬಂಧನೆಯಿಂದ ರಚಿಸಲ್ಪಟ್ಟಿರುವದು.

(೧) ಗಣ— ಗಣಗಳು ಅಕ್ಷರಗಣ ಮಾತ್ರಾಗಣ ಎಂದು ಎರಡು ಬಗೆಯಾಗಿವೆ ಅಕ್ಷರಗಣಗಳು ಗುರುಲಘುಗಳ ಲೆಕ್ಕದಿಂದ, ಮಾತ್ರಾಗಣಗಳು ಮಾತ್ರೆಗಳ ಲೆಕ್ಕದಿಂದ ಆಗುವವು.

ಗುರು—ದೀರ್ಘಸ್ವರಕ್ಕೂ ದೀರ್ಘಸ್ವರವು ಸೇರಿದ ವ್ಯಂಜನಗಳಿಗೂ ಗುರುವೆಂಬ ಹೆಸರು. ಉದಾ—ಆ, ಈ, ಕಾ, ಕ್ತಾ, ಸ್ತ್ರೀ. ಮುಂ.

ಲಘು—ಹ್ರಸ್ವಸ್ವರಕ್ಕೂ, ಹ್ರಸ್ವಸ್ವರವು ಸೇರಿದ ವ್ಯಂಜನಗಳಿಗೂ ಲಘುವೆಂಬ ಹೆಸರು. ಉದಾ—ಅ, ಇ, ಕ, ಕ್ತ, ಸ್ತ್ರ ಮುಂ.

ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರಗಳೂ, ಸಂಯುಕ್ತಾಕ್ಷರಗಳ ಹಿಂದಿನ ಅಕ್ಷರಗಳೂ ಲಘುಗಳಾಗಿದ್ದರೂ ಗುರುಗಳೆನಿಸುವವು. ಉದಾ—

ಪಿರಿದಾದತ್ತು ರಘೂದ್ವಹಂಗೆ ಪರಿತಾಪಂ ಲಕ್ಷ್ಮಣಂಗಾಗಳು ।
ಜ್ವರಮಾದತ್ತು ಲತಾಂಗಿ ಸೀತೆ ಪುಗೆ ತೇಜಃಪಿಂಡಮಂ ಕುಂಡಮಂ ॥

ಇಲ್ಲಿ ಮೊದಲನೆಯ ಪಾದದೊಳಗಿನ ಹಂ, ಣಂ, ಎಂಬ ಅಕ್ಷರಗಳು ಅನುಸ್ವಾರದಿಂದ ಕೂಡಿರುವದರಿಂದಲೂ ಎರಡನೆಯ ಪಾದದೊಳಗಿನ ಜಃ ಎಂಬದು ವಿಸರ್ಗದಿಂದ ಕೂಡಿರುವದರಿಂದಲೂ, ೧ನೆಯ ೨ನೆಯ ಪಾದಗಳೊಳಗಿನ ದ ಅಕ್ಷರಗಳು ಸಂಯುಕ್ತಾಕ್ಷರದ ಹಿಂದಿನವಾದುದರಿಂದಲೂ ಗುರುಗಳಾಗಿವೆ.

ಪದ್ಯದಲ್ಲಿ ಪಾದಗಳ ಕೊನೆಯಲ್ಲಿರುವ ಲಘುವು ವಿಕಲ್ಪದಿಂದ ಗುರುವಾಗುವದು. ಎಂದರೆ ಪಾದಾಂತ್ಯಲಘುವನ್ನು ಅವಶ್ಯವಿದ್ದಲ್ಲಿ ಗುರುವೆಂದು

ತಿಳಿಯಬಹುದು. ಷಟ್ಪದಿ ಮೊದಲಾದ ವೃತ್ತಗಳಲ್ಲಿ ಅರ್ಧದ ಕೊನೆಯಲ್ಲಿರುವ ಲಘುವು ಗುರುವಾಗಿರುವದು ಹಲವೆಡೆಯಲ್ಲಿ ಕಾಣಬರುವದು. ಉದಾ—

ಭಾ. ಷ.—ತರುಕುಲಂ ಫಲಕಾಲದೊಳ್ಪಾ |
ಗಿರುವದಾಗಸ ಬಿಟ್ಟು ಧರಣಿಗೆ |
ಬರುವವು ಘನಂಗಳು ನವಾಂಬುಕಣಂ ಸಮೃದ್ಧಿಸಲು ||

ಇಲ್ಲಿ ಕೊನೆಯ ಲುಂ ಎಂಬದು ಲಘುವಾಗಿದ್ದರೂ ಗುರುವೆನಿಸುವದು.

ಸಂಯುಕ್ತಾಕ್ಷರದ ಹಿಂದಿನ ಲಘುವು ಕೆಳಗೆ ಹೇಳಿದ ಕೆಲವೆಡೆಗಳಲ್ಲಿ ಗುರುವಾಗಿರುವದಿಲ್ಲ. ಉದಾ—

ತಳಿರ್ಗಳ್ ತನಿವಣ್ಗಳ್ ಸುಮ
ಕುಳಂಗಳಿಡಿಕಿರಿದ ಚೂತ ಶಾಖಾಂತರದೊಳ್ ||

ನೆಗಳ್ದಪಯಶವಿೂ ಶಬರನಿಂ........ |

ಪದೆದಮರ್ದಪ್ಪಿದಂ ಗುಹಗಜಾಸ್ಯರನಪ್ಪುವ ತೋಳ್ಗಳಿಂದೆ ಮಾ ||

ಮುದಮಲರ್ವಂತೆ ಮೈದಡವಿದಂ ವರವೀವ ಕರಾಬ್ಜದಿಂದೆ ನೋ ||

ಇಲ್ಲಿ * ಈ ಗುರುತು ಹಾಕಿದ ಅಕ್ಷರಗಳು ಸಂಯುಕ್ತಾಕ್ಷರಗಳ ಹಿಂದೆ ಇದ್ದರೂ ಗುರುಗಳಲ್ಲ. ಇಂಥ ಸಂಯುಕ್ತಾಕ್ಷರಗಳನ್ನು ಶಿಥಿಲವಾಗಿ ಉಚ್ಚರಿಸಬೇಕು.

ಬರ್ದಿಲ, ಎರ್ದೆ, ಅಮರ್ದು ಮೊದಲಾದ ಕೆಲವು ಶಬ್ದಗಳೊಳಗಿನ ಸಂಯುಕ್ತಾಕ್ಷರಗಳು ನಿತ್ಯ ಶಿಥಿಲವಾಗಿರುವದರಿಂದ ಅವುಗಳ ಹಿಂದಿನ ಬ, ಎ, ಮ ಮೊದಲಾದ ಲಘುಗಳು ಗುರುಗಳಾಗುವದಿಲ್ಲ.

ಧರಾ| ವರನಿಂದಾ ಬರ್ದಿಲಕ್ಕೆ ನಾಳಿಗೆ ವರಂ ರತ್ನಾಕರಾಧೀಶ್ವರಾ ||

ಸಿಂಗದ ಕೈಗೆ ಬಿದ್ದ ಹರಿಣಾಂಗನೆವೋಲೆರ್ದೆಗೆಟ್ಟು ರಾಮಚಂ....

ಇಲ್ಲಿ ಬ. ಲೆ, ಎಂಬಿವು ನಿತ್ಯಶಿಥಿಲಸಂಯುಕ್ತಾಕ್ಷರಗಳ ಹಿಂದೆ ಇರುವದರಿಂದ ಲಘುಗಳಾಗಿವೆ.

ರೇಫಸಂಯುಕ್ತವು ಶಿಥಿಲವಾಗಿದ್ದಾಗ ಅದರ ಹಿಂದಿನ ಲಘುವಿಗೆ ಗುರುತ್ವವಿಲ್ಲ. ಉದಾ—

ಮುನಿಗಳ್ನೊಂದರೊ ಕಾಡಕ್ರೂರಮೃಗಗಳ್ಗಾ ಭೂರುಹಂಗಳ್ಗೆನಾ।
ನನಯುತ್ಪಂದಳೆಯಲ್.......................||

ಇಲ್ಲಿ ಡ ಎಂಬುದು ಶಿಥಿಲಸಂಯುಕ್ತಾಕ್ಷರದ ಹಿಂದೆ ಇದ್ದದರಿಂದ ಲಘುವಾಗಿದೆ.

ಕೆಲವರು ಎಲ್ಲ ಸಂಯುಕ್ತಾಕ್ಷರಗಳನ್ನು ಶಿಥಿಲವಾಗಿ ಉಚ್ಚರಿಸುವದರಿಂದ ಅವುಗಳ ಹಿಂದಿನ ಲಘುವು ಗುರುವಾಗುವದಿಲ್ಲ. ಇಂತಹ ಉದಾಹರಣಗಳು ಅರ್ವಾಚೀನ ಪದ್ಯಗ್ರಂಥಗಳಲ್ಲಿ ಕಾಣಬರುವವು. ಈ ಶೈಥಿಲ್ಯವು ಅನುಚಿತವಾದದ್ದು. ಉದಾ—ಕಂದಪಾದ-ಇದುಂ ಸ್ವಾದು ಜಲದೆ ತುಂಬಿದ| ಇಲ್ಲಿ ೧ನೆಯ ದುಂ ಲಘುವಾಗಿರಬೇಕಾಗಿದೆ. ಇದು ಅನುಚಿತವು.

ಪದ್ಯಗಳು ಅಕ್ಷರವೃತ್ತಗಳೆಂದೂ ಮಾತ್ರಾವೃತ್ತಗಳೆಂದೂ ಎರಡು ಬಗೆಯಾಗಿವೆ.

ಅಕ್ಷರವೃತ್ತ— ಅಕ್ಷರಗಳ ಎಣಿಕೆಯ ನಿಯಮದಿಂದ ರಚಿಸಲ್ಪಟ್ಟ ವೃತ್ತಗಳು ಅಕ್ಷರವೃತ್ತಗಳು. ಉದಾ—ಚಂಪಕಮಾಲೆ, ಸ್ರಗ್ಧರೆ ಮುಂ.

ಮಾತ್ರಾವೃತ್ತ-ಮಾತ್ರೆಗಳ ಎಣಿಕೆಯ ನಿಯಮದಿಂದ ರಚಿಸಲ್ಪಟ್ಟ ವೃತ್ತಗಳು ಮಾತ್ರಾವೃತ್ತಗಳೆನಿಸುವವು. ಉದಾ—ಕಂದ, ಷಟ್ಪದಿ ಮುಂ.

ಅಕ್ಷರಗಣ— ಅಕ್ಷರವೃತ್ತಗಳ ಪಾದಗಳ ಅಕ್ಷರಗಳು ಕೆಲವು ಗಣಗಳೆಂದು ವಿಭಾಗಿಸಲ್ಪಡುವವು. ಪ್ರತಿ ಒಂದು ಗಣವು ಮೂರು ಅಕ್ಷರಗಳಿಂದಾಗುವದು. ಈ ಮೂರು ಅಕ್ಷರಗಳನ್ನು ಲಘು-ಗುರುಗಳ ಭಿನ್ನಭಿನ್ನ ಕ್ರಮದಲ್ಲಿ ಎಂಟು ಬಗೆಯಿಂದ ಇಡಬಹುದಾದದರಿಂದ ಅಕ್ಷರಗಣಗಳು ಎಂಟಾಗಿವೆ.

(—ಇದು ಗುರುವಿನ ಚಿಹ್ನ; ∪ ಇದು ಲಘುವಿನ ಚಿಹ್ನ.)

ಗಣರಚನೆ.	ಹೆಸರು.	ಉದಾಹರಣ.
— — —	ಮ ಗಣ	ಶ್ರೀಕಾಂತಂ
∪ ∪ ∪	ನ ಗಣ	ಕ್ರಮದೆ
— ∪ ∪	ಭ ಗಣ	ಪಾರ್ವತಿ
∪ — —	ಯ ಗಣ	ಗಿರೀಶಂ

ᑌ—ᑌ	ಜ	ಗಣ	ಗಣೇಶ
—ᑌ—	ರ	ಗಣ	ಶಂಕರಂ
ᑌᑌ—	ಸ	ಗಣ	ಸುರಪಂ
— —ᑌ	ತ	ಗಣ	ಪಾಲಿಕ್ಕೆ

ಗುರು, ಲಘು ಮೂಱಿರೆ ಮ ನ ಗಣ ।
ಗುರು, ಲಘು ಮೊದಲಲ್ಲಿ ಬರಲು ಭ ಯ ಗಣಮೆಂಬರ್ ॥
ಗುರು, ಲಘು ನಡುವಿರೆ, ಜ ರ ಗಣ ।
ಗುರು, ಲಘು ಕಡೆಯಲ್ಲಿ ಬರಲು ಸ ತ ಗಣಮಕ್ಕುಂ ॥

ಗುರು ಮೂರು ಇರೆ ಮ ಗಣ; ಲಘು ಮೂರು ಇರೆ ನ ಗಣ;
ಗುರು ಮೊದಲಲ್ಲಿ ಬರಲು ಭ ಗಣ; ಲಘು ಮೊದಲಲ್ಲಿ ಬರಲು ಯ ಗಣ;
ಗುರು ನಡುವೆ ಇರೆ ಜ ಗಣ; ಲಘು ನಡುವೆ ಇರೆ ರ ಗಣ;
ಗುರು ಕಡೆಯಲ್ಲಿ ಬರಲು ಸ ಗಣ; ಲಘು ಕಡೆಯಲ್ಲಿ ಬರಲು ತ ಗಣ;

೨. **ಪ್ರಾಸ**— ಪದ್ಯದ ಪ್ರತಿಪಾದದ ಒಂದನೆಯ ಮತ್ತು ಎರಡನೆಯ ...ರಗಳ ನಡುವೆ ಒಂದೇ ತರದ ವ್ಯಂಜನವು ಇಲ್ಲವೆ ವ್ಯಂಜನ ಸಮು...ಯವು ಬಂದರೆ ಅದು ಪ್ರಾಸವೆನಿಸುವದು. ಪ್ರಾಸಾಕ್ಷರದ ಹಿಂದೆ ಒಂದು ...ದದಲ್ಲಿ ಹ್ರಸ್ವ, ದೀರ್ಘ, ಅನುಸ್ವಾರ, ವಿಸರ್ಗ ಇವುಗಳಲ್ಲೊಂದು ...ಂದಿದ್ದರೆ ಎಲ್ಲ ಪಾದಗಳಲ್ಲಿಯೂ ಅದೇ ಇರಬೇಕೆಂದು ನಿಯಮವು; ಮತ್ತು ...ರಾಸಾಕ್ಷರವು ವಿಜಾತೀಯ ಸಂಯುಕ್ತಾಕ್ಷರವು ಇಲ್ಲವೆ ಸಜಾತೀಯ ಸಂಯು...ಕ್ತಾಕ್ಷರವು ಆಗಿದ್ದರೆ ಎಲ್ಲ ಪಾದಗಳಲ್ಲಿ ಅದೇ ಇರಬೇಕೆಂಬ ನಿಯಮವು. ಹೀಗೆ ...ರಾಸಕ್ಕೆ ಸಂಬಂಧಿಸಿದ ಅಕ್ಷರಗಳ ಭೇದದಿಂದ ಪ್ರಾಸಗಳಲ್ಲಿ **ಸಿಂಹ, ಗಜ, ...ವೃಷಭ, ಅಜ, ಶರಭ, ಹಯ** ಎಂಬ ಆರು ಪ್ರಕಾರಗಳಾಗುವವು.

...ಜದಿಂ ಬಂದೊಡೆ ಸಿಂಹಂ। ಗಜ ದೀರ್ಘಂ ಬಿಂದು ವೃಷಭ ವ್ಯಂಜನ ಶರಭಂ॥
...ಜನು ವಿಸರ್ಗಂ ಹಯಮುಂ । ಬುಜಮುಖಿ ದಡ್ಡಕ್ಕರಂಗಳಿವು ಷಟ್ಪ್ರಾಸಂ॥

ಸಿಂಹಪ್ರಾಸ— ಪ್ರಾಸಾಕ್ಷರದ ಹಿಂದೆ ಎಲ್ಲ ಪಾದಗಳಲ್ಲಿ ಹ್ರಸ್ವ ...ಸ್ವರವು ಬಂದರೆ ಸಿಂಹಪ್ರಾಸವು. ಉದಾ—

ದುರುಳರ ತುಳಿವಾವ್ರತಸ್ಥಳಾನೆಂ|ದರುಹುತೆ ರಾಕ್ಷಸರಾಜಲಂಕೆಯುಂತಾಂ||
ನೆರೆ ಪದತಲದಿಂದ ಮೆಟ್ಟಿ ನಿಂತೀ। ಭರತ ಧರಿತ್ರಿಯಿಹಳ್ವಿಲಾಸದಿಂದಂ ||
(ವಿದ್ಯಾರಣ್ಯ ಕಾವ್ಯ)

ಈ ಪದ್ಯದ ಒಂದನೆಯ ಪಾದದಲ್ಲಿ ದು, ರು ಎಂಬಿವು ಮೊದಲನೆಯೆರಡಕ್ಷರಗಳು. ಅವುಗಳಲ್ಲಿರುವ ಉ, ಉ ಎಂಬಿವು ಮೊದಲನೆಯ ಎರಡು ಸ್ವರಗಳು. ಅವುಗಳ ನಡುವಿನ ರೇಫವು ಪ್ರಾಸಾಕ್ಷರವು. ಅದು ಉಳಿದ ಎಲ್ಲ ಪಾದಗಳಲ್ಲಿಯೂ ಒಂದನೆಯ ಮತ್ತು ಎರಡನೆಯ ಸ್ವರಗಳ ನಡುವೆ ಬಂದಿರುವದು. ಈ ಪ್ರಾಸಾಕ್ಷರದ ಹಿಂದೆ (ಉ) ಹ್ರಸ್ವಸ್ವರವು ಬಂದದರಿಂದ ಇದು ಸಿಂಹಪ್ರಾಸವಾಯಿತು.

ಗಜಪ್ರಾಸ— ಎಲ್ಲ ಪಾದಗಳಲ್ಲಿ ಪ್ರಾಸಾಕ್ಷರದ ಹಿಂದೆ ದೀರ್ಘಸ್ವರವು ಬಂದರೆ ಗಜಪ್ರಾಸವು. ಉದಾ—

ನೀಲರತ್ನಂಗಳಾನೆಲಗಟ್ಟು ಪಳಕುಗಳ।
ಸಾಲೆಸೆವ ಭಿತ್ತಿಗಳ್ ವಜ್ರದೊಳ್ಗಂಬಂಗ।
ಳಾಲಲಿತ ಪಚ್ಚೆಗಳ ತೊಲೆ ರತ್ನಬೋದುಗೆಗಳು ಪ್ರವಾಳಂಗಳಿಂದ||

ಇಲ್ಲಿ ಪ್ರಾಸಾಕ್ಷರದ ಹಿಂದೆ ಎಲ್ಲ ಪಾದಗಳಲ್ಲಿ ದೀರ್ಘಸ್ವರವು ಬಂದಿದೆ.

ವೃಷಭಪ್ರಾಸ — ಪ್ರಾಸಾಕ್ಷರದ ಹಿಂದೆ ಅನುಸ್ವಾರವು ಬಂದರೆ ವೃಷಭಪ್ರಾಸವು.

ಉದಾ— ಸಿಂಗದ ಕೈಗೆ ಬಿದ್ದ ಹರಿಣಾಂಗನೆವೋಲೆರ್ದೆಗೆಟ್ಟು ರಾಮುಚಂ।
ದ್ರಾಂಗನೆ ನೀಳ್ದ ಕಣ್ಮಲರ್ಗಳಿಂದುಗೆ ಕಣ್ಬನಿಗಳ್ ಮಡಲ್ತ ಪ॥

ಅಜಪ್ರಾಸ — ಪ್ರಾಸಾಕ್ಷರದ ಹಿಂದೆ ವಿಸರ್ಗವು ಬರಲು ಅಜಪ್ರಾಸವು. ಉದಾ— ಆಃ ಕುಶಲನಿವನೆ ಸದಯಾಂ
ತಃಕರಣದೆ ಸಕಲ ಮನುಜರಂ ಪೊರೆದಪನೈ ||

(ಅಜಪ್ರಾಸದ ಉದಾಹರಣೆಗಳು ತೀರ ಕಡಿಮೆ.)

ಶರಭಪ್ರಾಸ*— ಪ್ರಾಸಾಕ್ಷರವು ವಿಜಾತೀಯ ಸಂಯುಕ್ತಾಕ್ಷರವಾಗಿದ್ದರೆ ಶರಭಪ್ರಾಸವು. ಉದಾ—

* ಶರಭ ಹಯ ಪ್ರಾಸಗಳಲ್ಲಿ ಪ್ರಾಸದ ಹಿಂದೆ ಅನುಸ್ವಾರ ವಿಸರ್ಗಗಳಿರಬಾರದು.

ಸ್ವಸ್ತಿಟನಿ ಮಹಾಪರತರ ।
ವಸ್ತುವೆನಿಪ್ಪಾಪುರಾರಿ ನಿನ್ನನದೆಂದುಂ ॥
ಮಸ್ತಕದೊಳಿತ್ತು ಳ್ದಪನೆನೆ ।
ನಿಸ್ತುಳವದು ನಿನತು ಮೈಮೆಯೇಂ ಕೇವಳಮೇ ॥

(ಇಂದ್ರಕೀಲವಿಜಯ.)

ಹಯಪ್ರಾಸ—ಪ್ರಾಸಾಕ್ಷರವು ಸಜಾತೀಯ ಸಂಯುಕ್ತಾಕ್ಷರವಾಗಿದ್ದರೆ ಹಯಪ್ರಾಸವು. ಉದಾ—

ಮೆಯ್ಯೊಳಗೆನ್ನೆಗಂ ಮಮತೆಯುಂಟವನನ್ನೆಗಮುಗ್ರಕಾಲನಾ ।
ಕೆಯ್ಯೊಳಗಿರ್ಪ ಪಕ್ಕಿ ವಿಷಯಂಗಳ ಮೆಚ್ಚಿದವಂ ವಿಷಾಗ್ನಿಯೊಳ್ ॥

ಪ್ರಾಸವನ್ನು ಕನ್ನಡದ ಎಲ್ಲ ಹಿಂದಿನ ಕವಿಗಳು ಪಾಲಿಸಿರುತ್ತಾರೆ. ಆದರೂ ಒಂದೇ ಪದ್ಯದ ಪ್ರಾಸ ಸ್ಥಾನಗಳಲ್ಲಿ ಲ, ಳ ಕಾರಗಳನ್ನೂ ಒಂದು ವರ್ಗದ ಬೇರೆ ಬೇರೆ ವ್ಯಂಜನ (ಕ್, ಖ್, ಗ್ ಮುಂ.) ಗಳನ್ನೂ ಶ, ಷ, ಸ ಗಳನ್ನೂ, ಭಿನ್ನಸಂಯುಕ್ತಾಕ್ಷರಗಳನ್ನೂ ಕೆಲವೆಡೆ ಉಪಯೋಗಿಸಿರುವರು. ಅವುಗಳ ಉದಾಹರಣಗಳನ್ನು ಗ್ರಂಥಗಳಲ್ಲಿ ಕಾಣಬಹುದು. (ಇದರಿಂದ ಪ್ರಾಸ ನಿಯಮದ ಶೈಥಿಲ್ಯವು ಅಷ್ಟೊಂದು ದೋಷಾವಹವಲ್ಲವೆಂದು ಸೂಚಿತವಾಗುತ್ತದೆ) ಈ ಪ್ರಾಸದ ಮೋಹದಿಂದ ಕನ್ನಡಕವಿಗಳು ಹಲವು ಕಾವ್ಯದೋಷಗಳನ್ನು ಲೆಕ್ಕಿಸಿಲ್ಲ ;

ಉದಾ-ಎಲೆ ಗಿರಿಜಾತೆ ನೋಡಿವನ ಸಾಹಸಮಂ ಸಲೆ ನಾಲ್ಕು ತಿಂಗಳುಂ ।
ವಿಲಸಿತ ಜೀರ್ಣಪರ್ಣವನೆ ಮೆಲ್ದುಳಿದೊಪ್ಪುವ ನಾಲ್ಕು ತಿಂಗಳ ॥

(ಶಬರ ಶಂ. ವಿ.)

ಇಲ್ಲಿ ವಿಲಸಿತ ಎಂಬುದಕ್ಕೆ ಪ್ರತಿಯಾಗಿ ಕುತ್ಸಿತ ಎಂಬರ್ಥದ ಶಬ್ದವಿರಬೇಕು.

ತರಣಿ ತನಗಿತ್ತಮಲ ರತ್ನವ ।
ನಿರದೆ ಕೊರಳಲಿ ಧರಿಸಿಕೊಂಡಂ ।
ಬುರುಹಮಿತ್ರನ ಬಕುತ ಸತ್ರಾಜಿತನು ಪುರವರಕೆ ॥

ಬರುತಿರಲು ಪುರವಾಸಿ ಜನ ಕಂ।
ಡಿರದೆ ನೋಡುವೆವೆನುತ ಹರಿತಂ।
ದಿರದೆ ಬಿನ್ನಹ ಮಾಡಿದರು ಕೃಷ್ಣಂಗೆ ಕೈಮುಗಿದು ||

ಈ ಪದ್ಯದಲ್ಲಿ ರಕಾರ ಪ್ರಾಸಕ್ಕಾಗಿ 'ಇರದೆ' ಎಂಬ ಪದವು ಮೂರು ಬಾರಿ ಪ್ರಯೋಗಿಸಲ್ಪಟ್ಟಿದೆ. (ಇಂತಹ ಇನ್ನೂ ಅನೇಕ ದೋಷಗಳ ಉದಾಹರಣಗಳನ್ನು ಕಾಣಬಹುದು.

೨. ಯತಿ— ಶ್ರುತಿಸೌಕರ್ಯಕ್ಕಾಗಿ, ಎಂದರೆ ಪದ್ಯಗಳನ್ನು ಹೇಳುವಾಗ ಕೇಳುವದಕ್ಕೆ ಅನುಕೂಲವಾಗಬೇಕೆಂದು ಅರ್ಥಕ್ಕೆ ಬಾಧೆ ಬಾರದಂತೆ, ಗೊತ್ತುಮಾಡಿದ ಕೆಲವು ಸ್ಥಳಗಳಲ್ಲಿ ನಿಲ್ಲುವದುಂಟು. ಅಂತಹ ಸ್ಥಳಗಳಿಗೆ ಯತಿ ಎಂಬ ಹೆಸರು.

ಯತಿಸ್ಥಾನಗಳು— ೧. ಪದ್ಯದ ಪ್ರತಿ ಪಾದದ ಕೊನೆಯಲ್ಲಿ; ೨. ಪದ್ಯಾರ್ಧದ ಕೊನೆಯಲ್ಲಿ; ೩. ಕೆಲವು ವೃತ್ತಗಳ ಪಾದಗಳ ನಡುನಡುವೆ.

ಯತಿಯಿರುವಲ್ಲಿ ವಿಭಕ್ತಿಯು ವ್ಯಕ್ತವಾಗಿರಬೇಕು. ಎಂದರೆ ಅಲ್ಲಿ ಪದವು ಮುಗಿದಿರಬೇಕು. ಪದಮಧ್ಯದಲ್ಲಿ ಯತಿ ಬಂದರೆ ಅರ್ಥಸ್ಫೂರ್ತಿಗೆ ತೊಂದರೆಯಾಗುವದು. ಯತಿ ಇದ್ದಲ್ಲಿ ಅವ್ಯಕ್ತವಿಭಕ್ತಿಯಿದ್ದರೂ ಆಗಬಹುದು. ಸಮಾಸದಲ್ಲಿ ವಿಭಕ್ತಿಯು ಲೋಪ ಹೊಂದಿದ್ದರೆ ಅದು ಅವ್ಯಕ್ತವಿಭಕ್ತಿಯೆನಿಸುವದು. ಉದಾ ವ್ಯಕ್ತವಿಭಕ್ತಿಗೆ—

ಹಿಮವತ್ಪರ್ವತರಾಜಿ ಕೇಶನಿಚಯಂ§ಗಂಗಾಂಬೆಯುಂ ಸಿಂಧುವುಂ ||
ಕಮನೀಯಾಕೃತಿವೆತ್ತ ಬಾಹುಯುಗಲಂ§ವಿಂಧ್ಯಾದ್ರಿಮಧ್ಯಸ್ಥಲಂ।
ಕ್ರಮದಿಂ ಸೇರಿಹ ಪೂರ್ವಪಶ್ಚಿಮ ನಗಂಗಳ್ನಿನ್ನ ಪಾದಂಗಳಿಂ।
ತಮಮಾ! ಭಾರತಮಾತೆ ನಿನ್ನಿರವ ನೋಡಲ್ಕೀಗಳತ್ಯದ್ಭುತಂ ||
(ವಿದ್ಯಾ. ಕಾ.)

ಈಪದ್ಯದ ಮೊದಲಿನ ಎರಡುಪಾದಗಳಲ್ಲಿ§ಈ ಗುರುತು ಹಾಕಿದಲ್ಲಿ ಯತಿಯುಂಟು. ಅಲ್ಲಿ ವ್ಯಕ್ತವಿಭಕ್ತಿಗಳಿವೆ; ಉಳಿದೆರಡು ಪಾದಗಳಲ್ಲಿ ಯತಿಯು ಪಾಲಿಸಲ್ಪಟ್ಟಿಲ್ಲ. ಅವ್ಯಕ್ತವಿಭಕ್ತಿಗೆ;—ಉದಾ—

ಸೂಳೊಳ್ಬೀಳ್ವಂತೆ ಬಿಳ್ದರ್ಮಕುಟಮಣಿಗಣ§ದ್ಯೋತಸಾರರ್
ಕುಮಾರರ್ (ಪಂಪಭಾರತ).

ಇಲ್ಲಿ ಗಣ ಎಂಬ ಸಮಾಸಗತ ಪದದ ಮುಂದಿನ ಷಷ್ಠೀವಿಭಕ್ತಿಯು ಲುಪ್ತವಾಗಿರುವದರಿಂದ ಅಲ್ಲಿ ಅವ್ಯಕ್ತವಿಭಕ್ತಿಯುಂಟು. ಸ್ರಗ್ಧರಾವೃತ್ತದ ಗಳನೆಯ ಸ್ಥಾನವಾದುದರಿಂದ ಅಲ್ಲಿ ಯತಿಯಿರುವದು.

ಕನ್ನಡದಲ್ಲಿ ಪ್ರಾಸನಿಬಂಧನೆಯನ್ನು ಇಟ್ಟುಕೊಂಡದ್ದರಿಂದ ಯತಿಯನ್ನು ಪಾಲಿಸಿದ ಉದಾಹರಣೆಗಳು ತೀರ ಕಡಿಮೆ. ಯತಿವಿಲಂಘನವು ಕನ್ನಡದಲ್ಲಿ ದೋಷವೆಂದೆಣಿಸಲ್ಪಡುವದಿಲ್ಲ, "ಯತಿವಿಲಂಘನದಿಂದರಿದಲ್ತೆ ಕನ್ನಡಂ" ಎಂದು ಶಬ್ದಮಣಿದರ್ಪಣದಲ್ಲಿದೆ.

ಅಕ್ಷರವೃತ್ತಗಳು.

ಅಕ್ಷರವೃತ್ತಗಳಲ್ಲಿ ೨೬ ಗುಂಪುಗಳು ಇರುವವು; ಆ ಗುಂಪುಗಳಿಗೆ 'ಛಂದಸ್ಸು' ಎಂಬ ಹೆಸರು. ಅಕ್ಷರವೃತ್ತಗಳು ನಾಲ್ಕು ಪಾದಗಳುಳ್ಳವು; ಪ್ರತಿಪಾದದ ಅಕ್ಷರಸಂಖ್ಯೆಯು ಒಂದರಿಂದ ಇಪ್ಪತ್ತಾರರ ವರೆಗೆ ಇರುವದು. ಆ ೨೬ ಛಂದಸ್ಸುಗಳಿಗೆ ಕ್ರಮದಿಂದ ಕೆಳಗೆ ಹೇಳಿದ ಹೆಸರುಗಳುಂಟು.

(ಎಲ್ಲ ಪಾದಗಳು ಸಮವಾಗಿರುವ ವೃತ್ತಗಳು ಸಮವೃತ್ತಗಳು. ಪೂರ್ವಾರ್ಧವು ಉತ್ತರಾರ್ಧಕ್ಕೆ ಸಮವಾಗಿರುವ ವೃತ್ತಗಳು ಅರ್ಧಸಮವೃತ್ತಗಳು. ಎಲ್ಲ ಪಾದಗಳು ಪರಸ್ಪರ ಭಿನ್ನವಾಗಿರುವ ವೃತ್ತಗಳು ವಿಷಮವೃತ್ತಗಳು. ಅರ್ಧಸಮ, ವಿಷಮ ಅಕ್ಷರವೃತ್ತಗಳನ್ನು ಈ ಪುಸ್ತಕದಲ್ಲಿ ಉದಾಹರಿಸಿಲ್ಲ.)

೧. ಉಕ್ತೆ	೧೦. ಪಂಕ್ತಿ	೧೯. ಅತಿಧೃತಿ
೨. ಅತ್ಯುಕ್ತೆ	೧೧. ತ್ರಿಷ್ಟುಪ್ಪು	೨೦. ಕೃತಿ
೩. ಮಧ್ಯೆ	೧೨. ಜಗತಿ	೨೧. ಪ್ರಕೃತಿ
೪. ಪ್ರತಿಷ್ಠೆ	೧೩. ಅತಿಜಗತಿ	೨೨. ಆಕೃತಿ
೫. ಸುಪ್ರತಿಷ್ಠೆ	೧೪. ಶಕ್ವರಿ	೨೩. ವಿಕೃತಿ
೬. ಗಾಯತ್ರಿ	೧೫. ಅತಿಶಕ್ವರಿ	೨೪. ಸಂಕೃತಿ
೭. ಉಷ್ಣಿಕ್ಕು	೧೬. ಅಷ್ಟಿ	೨೫. ಅಭಿಕೃತಿ
೮. ಅನುಷ್ಟುಪ್ಪು	೧೭. ಅತ್ಯಷ್ಟಿ	೨೬. ಉತ್ಕೃತಿ
೯. ಬೃಹತಿ	೧೮. ಧೃತಿ	

ಈ ಪ್ರತಿ ಒಂದು ಛಂದಸ್ಸಿನಲ್ಲಿ ಎಷ್ಟೆಷ್ಟು ವೃತ್ತಗಳಾಗುವವೆಂಬದನ್ನು ಪ್ರಸ್ತಾರದಿಂದ ತಿಳಿದುಕೊಳ್ಳಬಹುದು.

ಪ್ರಸ್ತಾರ— ಯಾವದೊಂದು ಛಂದಸ್ಸಿನ ಒಂದು ಚರಣಕ್ಕೆ ಎಷ್ಟು ಅಕ್ಷರಗಳೋ ಅಷ್ಟು ಗುರುಗಳನ್ನು ಅಡ್ಡಸಾಲಿನಲ್ಲಿ ಬರೆಯಬೇಕು; ಬಳಿಕ ಮೊದಲನೆಯ ಸ್ಥಾನದ ಗುರುವಿನ ಕೆಳಗೆ ಉದ್ದಸಾಲಿನಲ್ಲಿ ಲಘುವನ್ನೂ ಆ ಲಘುವಿನ ಕೆಳಗೆ ಮತ್ತೆ ಗುರುವನ್ನೂ ಬರೆಯುತ್ತ ಹೋಗಬೇಕು. ಎರಡನೆಯ ಸ್ಥಾನದಲ್ಲಿ ಎರಡು ಗುರುಗಳ ಕೆಳಗೆ ಎರಡು ಲಘುಗಳು, ಮೂರನೆಯ ಸ್ಥಾನದಲ್ಲಿ ನಾಲ್ಕು ಗುರುಗಳ ಕೆಳಗೆ ನಾಲ್ಕು ಲಘುಗಳು ಹೀಗೆ ಸ್ಥಾನ ಕ್ರಮದಿಂದ ಇಮ್ಮಡಿ ಗುರುಗಳ ಕೆಳಗೆ ಅಷ್ಟೇ ಲಘುಗಳು ಬರುತ್ತಹೋಗುವಂತೆ ಬರೆಯಬೇಕು. ಹೀಗೆ ಕಡೆಯ ಅಡ್ಡಸಾಲು ಎಲ್ಲ ಲಘುಗಳದಾಗುವ ವರೆಗೆ ಬರೆಯುತ್ತ ಹೋಗಬೇಕು.

ಉದಾ— ಮೂರು ಅಕ್ಷರಗಳ ಪಾದದ ಮಧ್ಯೆ ಎಂಬ ಛಂದಸ್ಸಿನ ಪ್ರಸ್ತಾರ

೧ನೆಯ ಸ್ಥಾನ	೨ನೆಯ ಸ್ಥಾನ	೩ನೆಯ ಸ್ಥಾನ
—	—	—
∪	—	—
—	∪	—
∪	∪	—
—	—	∪
∪	—	∪
—	∪	∪
∪	∪	∪

ಇಲ್ಲಿ ಒಂದನೆಯ ಸ್ಥಾನದಲ್ಲಿ ಒಂದು ಗುರುವಿನ ಕೆಳಗೆ ಒಂದು ಲಘುವನ್ನೂ ೨ನೆಯ ಸ್ಥಾನದಲ್ಲಿ ೨ ಗುರುಗಳ ಕೆಳಗೆ ೨ ಲಘುಗಳನ್ನೂ ೩ನೆಯ ಸ್ಥಾನದಲ್ಲಿ ೪ ಗುರುಗಳ ಕೆಳಗೆ ೪ ಲಘುಗಳನ್ನೂ ಬರೆಯುತ್ತ ಹೋಗಿದೆ. ಕೊನೆಯ ಅಡ್ಡ ಸಾಲು ಮೂರು ಲಘುಗಳುಳ್ಳದ್ದಾಗಿದೆ.

(ಮ ಯ ರ ಸ ತ ಜ ಭ ನ ಎಂಬ ಗಣಗಳು ಈ ಮಧ್ಯಾಚ್ಛಂದಸ್ಸಿನ ವೃತ್ತಗಳಾಗಿರುವವು.)

ಈ ಛಂದಸ್ಸಿನಲ್ಲಿ ೮ ವೃತ್ತಗಳಾಗುವವು. ಈ ಮೇರೆಗೆ ಒಂದೊಂದು ಛಂದಸ್ಸಿನಲ್ಲಿ ಹಲವು ವೃತ್ತಗಳಾಗುವವು. ಉಕ್ತೆ ಎಂಬ ಮೊದಲನೆಯ ಛಂದಸ್ಸಿನಲ್ಲಿ ೨ ವೃತ್ತಗಳೂ, ಮುಂದೆ ಪ್ರತಿ ಛಂದಸ್ಸಿಗೆ ಇಮ್ಮಡಿಯಂತೆ ಬೆಳೆಯುತ್ತ ಅತಿಧೃತಿ ಎಂಬ ೧೯ನೆಯ ಛಂದಸ್ಸಿನಲ್ಲಿ ೫೨೪೨೮೮ ವೃತ್ತಗಳೂ ಉತ್ಕೃತಿ ಎಂಬ ೨೬ನೆಯ ಛಂದಸ್ಸಿನಲ್ಲಿ ೬೭೧೦೮೮೬೪ ವೃತ್ತಗಳೂ ಆಗುವವು. ಎಲ್ಲ ಛಂದಸ್ಸುಗಳಲ್ಲಾಗುವ ವೃತ್ತಗಳ ಒಟ್ಟು ಸಂಖ್ಯೆಯು ೧೩೪೨೧೭೭೨೬ ಆಗುವದು. ಈ ಎಲ್ಲ ವೃತ್ತಗಳು ಬಳಕೆಯಲ್ಲಿಲ್ಲ. ಅತಿ ಸ್ವಲ್ಪ ವೃತ್ತಗಳನ್ನಷ್ಟೇ ಕವಿಗಳು ಉಪಯೋಗಿಸಿರುವರು.

ಕನ್ನಡದಲ್ಲಿ ಅಕ್ಷರವೃತ್ತಗಳು ಕಡಿಮೆ. ಅವುಗಳಲ್ಲಿಯೂ ಕೆಲವು ವೃತ್ತಗಳಷ್ಟೇ ಹೆಚ್ಚಿಗೆ ಬಳಕೆಯಲ್ಲಿವೆ. ಇಲ್ಲಿ ಅಂತಹ ಕೆಲವು ವೃತ್ತಗಳ ಲಕ್ಷಣಗಳು ಅದೇ ವೃತ್ತದ ಒಂದೊಂದು ಚರಣದಲ್ಲಿ ತೋರಿಸಲ್ಪಟ್ಟವೆ. ವೃತ್ತ ಲಕ್ಷಣವನ್ನು ಹೇಳುವ ಆ ಚರಣವೇ ಆ ವೃತ್ತದ ಒಂದು ಚರಣದ ಉದಾಹರಣವಾಗುವದು. ಲಕ್ಷಣದಲ್ಲಿ ಲ, ಗ ಎಂದರೆ ಲಘು, ಗುರು ಎಂದು ತಿಳಿಯಬೇಕು; ಸಂಖ್ಯೆಯನ್ನು ಹೇಳುವ ಶಬ್ದವು ಯತಿಸ್ಥಾನವನ್ನು ಸೂಚಿಸುವದು. ನಾಲ್ಕು ಚರಣಗಳಿಗೆ ಒಂದು ವೃತ್ತವು.

೧೦. **ಪಂಕ್ತಿ**. ಭತ್ರಯ ಗಂ ಬರೆ **ಚಿತ್ರಪದಂ** ।

(ಅರ್ಥ—೧೦ನೆಯ ಪಂಕ್ತಿ ಎಂಬ ಛಂದಸ್ಸಿನಲ್ಲಿ ಚಿತ್ರಪದ ಎಂಬ ವೃತ್ತದ ೧ ಚರಣಕ್ಕೆ ೩ ಭಗಣ ೧ ಗುರು ಇರುವವು.) ಪ್ರಸ್ತಾರ—

—∪∪ —∪∪ —∪∪ —

೧೧. ತ್ರಿಷ್ಟುಪ್ಪು. (೧) ನರರ ಲಂಗಮುಂ **ಶುದ್ಧಕಾಮುದಂ** ।
(೨) ತಂತಂತಗಂಗಂ ಲಯುಗ್ರಾಹಿಯುಕ್ಕಂ ।
(೩) ತಂತಂಜಗಂಗಂ ಬರಲಿಂದ್ರವಜ್ರಂ ।
(೪) ಉಪೇಂದ್ರ ವಜ್ರಂ ಜತಜಂಗಗಂ ತಾಂ।

೧೨. ಜಗತಿ (೧) ಇರೆ ತೋಟಕಮೆಂಬರು ನಾಲ್ಸಗಣಂ ।
ಭುಜಂಗ ಪ್ರಯಾತಂ ಚತುರ್ಯಂಗಳಿಂದಂ ॥

೧೩. **ಅತಿಜಗತಿ.** (೧) ಬರೆಮಂಜುಭಾಷಿಣಿಯು ಸಂಜಸಂಜಗಂ।
೧೪. **ಶಕ್ವರಿ.** (೨) ಅಕ್ಕುಂ ವಸಂತತಿಲಕಂ ತಭಜಂ ಜಗಂಗಂ।
೧೫. **ಅತಿಶಕ್ವರಿ.** (೩) ನನಮಯಯುಗಳಿಂದಂ ಮಾಲಿನೀ ವೃತ್ತಮಕ್ಕುಂ।
೧೬. **ಅಷ್ಟಿ.** (೧) ಜರಂ ಜರಂ ಜಗಂಗಳಿಂದದಾಯ್ತು ಪಂಚಚಾಮರಂ।

೧೭. **ಅತ್ಯಷ್ಟಿ**
(೧) ನಸಮರಸಲಂ ಗಂ*ಷಟ್‌ಭಿನ್ನಂ ಮತಂಹರಿಣೀಪ್ಲುತಂ।
(೨) ಮಂದಾಕ್ರಾಂತಂ ಮಭನತತದಿಂ ಗದ್ವಯಂ ತೋರಲಕ್ಕುಂ।
(೩) ಯಮಂ ನಂಸಂ ಭಂಲಂ ಶಿಖರಿಣಿಯದಂತ್ಯಕ್ಕೆ ಗುರುವಿಂ।
(೪) ಜಸಂ ಜಸಯಲಂ ಗಮುಂ ಬರಲು ಪೃಥ್ವಿ ತಾನೆಂದಪರ್।

೧೮. **ಧೃತಿ.** (೧) ರಂ ಸಜಂ ಜಭರಂ‡ದಿಶಾಯತಿಯಾಗೆ ಮಲ್ಲಿಕೆಮಾಲೆ ತಾಂ। (ಮಲ್ಲಿಕಾಮಾಲೆ)

೧೯. **ಅತಿಧೃತಿ.**
(೧) †ಅರ್ಕಸ್ಥಂ ಮಸಜಂಸತಂ ತಗಗಳಿಂ ಶಾರ್ದೂಲವಿಕ್ರೀಡಿತಂ
(೨) ತರಲವೃತ್ತಕೆ ನಿಲ್ಕೆ§ರುದ್ರಗೆ ನಂಭರಂ ಸಜಜಂಗಮುಂ।

೨೦. **ಕೃತಿ.**
(೧) ಉತ್ಪಲಮಾಲೆ ಭಂ ರನಭಭಂರಲಗಂ ಹರನೊಳ್ವಿರಾಮದಿಂ।
(೨) ಪದಿಮೂರಕ್ಕೆ ಸಭಂ ರನಂ ಮಯಲಗಂ ಮತ್ತೇಭವಿಕ್ರೀಡಿತಂ

೨೧. **ಪ್ರಕೃತಿ.**
(೧) ×ಏಳೇಳಕ್ಕಂ ವಿರಾಮಂ ಮರಭನಯಯುದಿಂ ಸ್ರಗ್ಧರಂ ತೋರೆ ಯಂ ಮೇಣ್।

---

* ಷಟ್ ಭಿನ್ನ = ೬ನೆಯ ಅಕ್ಷರಕ್ಕೆ ಯತಿ. ‡ ದಿಶಾಯತಿ = ೧೦ನೆಯ ಅಕ್ಷರಕ್ಕೆ ಯತಿ.
† ಅರ್ಕಸ್ಥ = ೧೨ನೆಯ ಅಕ್ಷರಕ್ಕೆ ಯತಿ. § ರುದ್ರ = ೧೧.
+ ಹರ = ೧೧, ವಿರಾಮ = ಯತಿ. × ಏಳಕ್ಕೆ ಮತ್ತೆ ಏಳಕ್ಕೆ ವಿರಾಮ.

(೨) ಯತಿ*ಕರದಿಂ ನಜಂ ಭಜಜಜಂ ರದೆ ಚಂಪಕಮಾಲೆ
ಯೆಂದಪರ್ ।

೨೨. ಆಕೃತಿ. ‌ ‌ ‌ ಕ್ಷಿತಿಥಿಸಂಖ್ಯಾವಿಶ್ರಮಂ ತಾಂ ಸತತನಸರರಂ
ಗಂ ಮಹಾಸ್ರಗ್ಧರಾಖ್ಯಂ ।

(ಕನ್ನಡದಲ್ಲಿ ಯತಿಯನ್ನು ಪಾಲಿಸುವ ವಾಡಿಕೆ ಕಡಿಮೆಯಾಗಿರುವದರಿಂದ ಎಲ್ಲ ವೃತ್ತಗಳ ಯತಿಸ್ಥಾನಗಳನ್ನು ಲಕ್ಷಣಗಳಲ್ಲಿ ಹೇಳಿಲ್ಲ.)

ಕನ್ನಡದಲ್ಲಿ ಸುಪ್ರಸಿದ್ಧವಾದ ೬ ಅಕ್ಷರವೃತ್ತಗಳನ್ನು ತಿಳಿದುಕೊಳ್ಳುವ ಸಾಮಾನ್ಯ ಸಂಕೇತಗಳನ್ನು ಹೇಳುವ ಒಂದು ಪದ್ಯವು—

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆಶಾರ್ದೂ
ಲಮಾ ।
ಗುರು ನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರು ದ್ವಂದ್ವಮಾ ॥
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ ।
ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾರುಂ ಖ್ಯಾತಿ ಕರ್ನಾಟದೊಳ್ ॥

—ಯಾವದೊಂದು ದೊಡ್ಡ ವೃತ್ತದ ಆರಂಭದಲ್ಲಿ-ಒಂದೇ ಗುರುವೂ ಮುಂದೆ ಎರಡು ಲಘುಗಳೂ ಇದ್ದರೆ ಉತ್ಪಲಮಾಲೆಯು; ಮೊದಲಲ್ಲಿ ಮೂರು ಗುರುಗಳಿದ್ದರೆ ಶಾರ್ದೂಲ ವಿಕ್ರೀಡಿತವು; ನಾಲ್ಕು ಗುರುಗಳಿದ್ದರೆ ಸ್ರಗ್ಧರೆಯು; ಎರಡು ಲಘುಗಳೂ ಎರಡು ಗುರುಗಳೂ ಇದ್ದರೆ ಮತ್ತೇಭ ವಿಕ್ರೀಡಿತವು; ಎರಡು ಲಘುಗಳೂ ಮೂರು ಗುರುಗಳೂ ಇದ್ದರೆ ಮಹಾಸ್ರಗ್ಧರೆಯು; ನಾಲ್ಕು ಲಘುಗಳಿದ್ದರೆ ಚಂಪಕಮಾಲೆಯು.

(ಇಷ್ಟರಿಂದಲೇ ವೃತ್ತಗಳನ್ನು ನಿರ್ಣಯಿಸುವುದಕ್ಕಾಗದಿದ್ದರೂ ಇದರಿಂದ ಯಾವ ವೃತ್ತವಿರಬಹುದೆಂಬ ಸೂಚನೆ ದೊರೆಯುವದು.)

ಮಾತ್ರಾವೃತ್ತಗಳು

ಮಾತ್ರೆ-ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸಲಿಕ್ಕೆ ಬೇಕಾಗುವಷ್ಟು ಕಾಲಪರಿಮಾಣವು ಮಾತ್ರೆಯೆನಿಸುವದು.

---

*ಕರ = ೧೩, ‌ ‌ ‌ ತಿಥಿ = ೧೫:

ಲಘುವಿಗೆ ಒಂದು ಮಾತ್ರೆ; ಗುರುವಿಗೆ ಎರಡು ಮಾತ್ರೆಗಳು.

ಮೂರು, ನಾಲ್ಕು ಐದು ಮಾತ್ರೆಗಳಿಂದ ಮಾತ್ರಾಗಣಗಳು ಮೂರು ಬಗೆಯಾಗಿವೆ. ಅವುಗಳಲ್ಲಿ ಮತ್ತೆ—
ಮೂರು ಮಾತ್ರೆಯ ಗಣವು ಮೂರು ವಿಧವಾಗುವದು—

ಉದಾ—(೧) ᑌᑌᑌ; (೨)—ᑌ; (೩) ᑌ—.

ನಾಲ್ಕು ಮಾತ್ರೆಯ ಗಣವು ಐದು ವಿಧವಾಗುವದು.
ಉದಾ—(೧) ᑌᑌᑌᑌ; (೨)—ᑌᑌ; (೩) ᑌ—ᑌ; (೪) ᑌᑌ—; (೫)— —

ಐದು ಮಾತ್ರೆಯ ಗಣವು ಎಂಟು ವಿಧವಾಗುವದು—
ಉದಾ—(೧) ᑌᑌᑌᑌᑌ; (೨) —ᑌᑌᑌ; (೩) ᑌ—ᑌᑌ; (೪) ᑌᑌ—ᑌ; (೫) ᑌᑌᑌ—; (೬) — —ᑌ; (೭) ᑌ— —; (೮) ᑌ—ᑌ.

ಮಾತ್ರಾಗಣವು ಮುಗಿಯುವಲ್ಲಿ ಅಕ್ಷರವು ಪೂರ್ಣವಾಗಬೇಕು. ಒಂದು ಗುರುವಿನ ಎರಡು ಮಾತ್ರೆಗಳಲ್ಲಿ ಒಂದು ಹಿಂದಿನ ಗಣಕ್ಕೂ ಇನ್ನೊಂದು ಮುಂದಿನ ಗಣಕ್ಕೂ ಸೇರಲಾಗದು. ಅದು ಮಾತ್ರಾಪರಾಶ್ರಿತತ್ವವೆಂಬ ದೋಷವು; ಉದಾ-ಸೂರ್ಯೋದಯ ಎಂಬಲ್ಲಿ ಯೋ ಎಂಬುದರ ಎರಡು ಮಾತ್ರೆಗಳಲ್ಲಿ ಒಂದನ್ನು ಹಿಂದೆಯೂ ಒಂದನ್ನು ಮುಂದೆಯೂ ಲೆಕ್ಕಮಾಡಿ ಆ ಶಬ್ದದಲ್ಲಿ ಮೂರು ಮಾತ್ರೆಯ ಎರಡು ಗಣಗಳಾದವೆಂದು ತಿಳಿಯಬಾರದು.

ಮಾತ್ರಾವೃತ್ತಗಳು ಕನ್ನಡದಲ್ಲಿ ಹೆಚ್ಚಿಗೆ ಬಳಕೆಯಲ್ಲಿವೆ. ಮಾತ್ರಾವೃತ್ತಗಳ ಸಂಖ್ಯೆಯೂ ಬಹಳವಾಗಿದೆ. ಆದರೆ ಇಲ್ಲಿ ಕಂದ ಷಟ್ಪದಿ ಮೊದಲಾದ ಕೆಲವು ಮುಖ್ಯ ಮಾತ್ರಾವೃತ್ತಗಳ ಲಕ್ಷಣಗಳಷ್ಟೇ ಹೇಳಲ್ಪಟ್ಟಿವೆ.

ಅರ್ಧಸಮ ಮಾತ್ರಾವೃತ್ತಗಳು

ಕಂದ-ಒಂದನೆಯ, ಮೂರನೆಯ, ಚರಣಗಳಿಗೆ ನಾಲ್ಕು ಮಾತ್ರೆಯ ಮೂರು ಮೂರು ಗಣಗಳು, ಎರಡನೆಯ ನಾಲ್ಕನೆಯ ಚರಣಗಳಿಗೆ ನಾಲ್ಕು ಮಾತ್ರೆಯ ಐದೈದು ಗಣಗಳು, ಹೀಗೆ ೬೪ ಮಾತ್ರೆಗಳಿಂದಾಗುವ ನಾಲ್ಕು

ಪಾದಗಳುಳ್ಳ ವೃತ್ತವು ಕಂದವು. ಇದರ ಪೂರ್ವಾರ್ಧ ಉತ್ತರಾರ್ಧಗಳ ವಿಷಮಸ್ಥಾನದ ಗಣಗಳು (೧,೩,೫,೭ ಗಣಗಳು) ಮಧ್ಯಗುರುವುಳ್ಳವಾಗಿರಬಾರದು; ಆರನೆಯ ಸ್ಥಾನದಲ್ಲಿ ಮಧ್ಯಗುರುವುಳ್ಳ (ᴗ—ᴗ) ಗಣವಾಗಲಿ, ಎಲ್ಲ ಲಘುಗಳುಳ್ಳ (ᴗᴗᴗᴗ) ಗಣವಾಗಲಿ ಬರಬೇಕು. ಎಂಟನೆಯ ಗಣವು ಅಂತ್ಯಗುರುವುಳ್ಳ ಗಣವೇ (ᴗᴗ—, ಇಲ್ಲವೆ— —ಈ ಗಣವು) ಬರಬೇಕು. (ಕಂದದಲ್ಲಿ)– "ಜಗಣಂ ವಿಷಮದೊಳಾಗದು ।

ಜಗಣಂ ಮೇಣ್ ನಗಣಮಕ್ಕೆಯಾರನೆಯೆಡೆಯೊಳ್"

(ಜಗಣ=ಮಧ್ಯಗುರುವುಳ್ಳ ಗಣ; ನಗಣ=ಎಲ್ಲ ಲಘುಗಳುಳ್ಳ ಗಣ.)

ಕಂದಕ್ಕೆ ಉದಾ— ಭಾರತಮಾತೆಗೆ ಮುದ್ದಂ ।
ಬೀರುವ ತೊಡೆಗೂಸಿದೆಂಬವೊಲ್ಕರ್ಣಾಟಂ ॥
ರಾರಾಜಿಸುತೌಚಿತ್ಯದಿ ।
ಸೇರಿರ್ಪಂತಿರ್ಪುದೀ ಪ್ರದೇಶದ ಮಾಟಂ ॥

(ವಿದ್ಯಾರಣ್ಯಕಾವ್ಯ)

ಷಟ್ಪದಿಗಳ್ —

ಶರ ಕುಸುಮ ಭೋಗ ಭಾಮಿನಿ ।
ಪರಿವರ್ಧಿನಿ ವಾರ್ಧಕಂಗಳೆಂದಾರು ತೆರಂ ॥
ಕರಿ (೮) ದಶ (೧೦) ರವಿ (೧೨) ಮನು (೧೪) ರಾಜರ್ (೧೬)
ಬರೆ ವಿಂಶತಿ (೨೦) ಮಾತ್ರೆಯಿಂದೆ ಷಟ್ಪದಿ ನಡೆಗುಂ ॥

ಷಟ್ಪದೀಭೇದ— ಶರಷಟ್ಪದಿ, ಕುಸುಮಷಟ್ಪದಿ, ಭೋಗಷಟ್ಪದಿ, ಭಾಮಿನೀಷಟ್ಪದಿ, ಪರಿವರ್ಧಿನೀಷಟ್ಪದಿ, ವಾರ್ಧಕಷಟ್ಪದಿ, ಎಂದು ಷಟ್ಪದಿಗಳು ಆರು ಬಗೆಯಾಗಿವೆ. ಇವುಗಳ ಮೊದಲನೆಯ ಚರಣಕ್ಕೆ ಕ್ರಮವಾಗಿ ೮, ೧೦, ೧೨, ೧೪, ೧೬, ೨೦ ಮಾತ್ರೆಗಳಿರುವವು.

ಷಟ್ಪದಿಗಳ ಸಾಮಾನ್ಯ ಲಕ್ಷಣ— ಷಟ್ಪದಿಗೆ ಆರು ಪಾದಗಳು; ಮೂರು ಮೂರು ಪಾದಗಳಿಂದ ಒಂದೊಂದು ಅರ್ಧವು. ಒಂದನೆಯ ಎರಡನೆಯ ನಾಲ್ಕನೆಯ ಐದನೆಯ ಚರಣಗಳು ಸಮಾನವಾಗಿರುವವು. ಒಂದನೆಯ ಚರಣದಲ್ಲಿದ್ದ ಮಾತ್ರೆಗಳ ಒಂದೂವರೆಯಷ್ಟು ಮಾತ್ರೆಗಳೂ ಮುಂದೆ ಒಂದು ಗುರುವೂ ಮೂರನೆಯ, ಆರನೆಯ ಚರಣಗಳಲ್ಲಿರುವವು.

ಷಟ್ಪದಿಗಳ ವಿಶೇಷ ಲಕ್ಷಣ—

ಶರಷಟ್ಪದಿ — ಇದರ ಮೊದಲನೆಯ ಚರಣಕ್ಕೆ ೮ ಮಾತ್ರೆಗಳು * ನಾಲ್ಕು ನಾಲ್ಕು ಮಾತ್ರೆಗಳಿಂದ ಒಂದು ಗಣವು. ಇದರಲ್ಲಿ ಮಧ್ಯಗುರು ಗಣ (⏑—⏑) ವು ಬರಕೂಡದು. ಉದಾ—

ಶ. ಷ.—ಈಶನ ಕರುಣೆಯ ।
ನಾಶಿಸು ವಿನಯದಿ
ದಾಸನ ಹಾಗೆಯೆ ನೀ ಮನವೇ ॥
(ಇದು ಪೂರ್ವಾರ್ಧವು; ಇದರಂತೆ ಉತ್ತರಾರ್ಧ)

ಕುಸುಮಷಟ್ಪದಿ—ಮೊದಲನೆಯ ಚರಣಕ್ಕೆ ಹತ್ತು ಮಾತ್ರೆಗಳು. ಐದೈದು ಮಾತ್ರೆಗಳಿಂದ ಒಂದೊಂದು ಗಣವು; ಇದರಲ್ಲಿ ⏑—⏑⏑ ಗಣವೂ ⏑ — — ಈ ಗಣವೂ ಬರಕೂಡದು. ಉದಾ—

ಕು. ಷ.— ಹರಿಪದವ ಪೂಜಿಸದೆ ।
ಗುರುಜನರ ಸೇವಿಸದೆ ।
ನರಜನ್ಮ ಸಾರ್ಥಕ್ಯವೆಂತಪ್ಪುದೈ ॥ (ಪೂರ್ವಾರ್ಧ).
(ಇದೇಮೇರೆಗೆ ಉತ್ತರಾರ್ಧವು.)

ಭೋಗಷಟ್ಪದಿ—ಒಂದನೆಯ ಚರಣಕ್ಕೆ ೧೨ ಮಾತ್ರೆಗಳು. ಮೂರು ಮೂರು ಮಾತ್ರೆಗಳಿಗೆ ಒಂದು ಗಣವು. ⏑— ಈ ಗಣವು ಬರಕೂಡದು. ಉದಾ—ಭೋ. ಷ — ತಿರಕನೊರ್ವನೂರಮುಂದೆ ।
ಮುರುಕಧರ್ಮಶಾಲೆಯಲ್ಲಿ ।
ಯೊರಗಿರುತ್ತಲೊಂದ ಕನಸ ಕಂಡನೆಂತೆನೆ ॥
(ಪೂರ್ವಾರ್ಧ). ಇದೇ ಮೇರೆಗೆ ಉತ್ತರಾರ್ಧವು.

---

* ಮೊದಲನೆಯ ಚರಣದ ಮಾತ್ರೆಗಳಷ್ಟೇ ಮಾತ್ರೆಗಳು ೨, ೪, ೫ ಚರಣಗಳಿಗೆ ಇರುವವೆಂಬ, ಮತ್ತು ಮೂರನೆಯ, ಆರನೆಯ ಚರಣಗಳಿಗೆ ಮೊದಲನೆಯ ಚರಣದ ೧॥ ಮಡಿ ಮಾತ್ರೆಗಳೂ ಮುಂದೆ ಒಂದು ಗುರುವೂ ಇರುವವೆಂಬ ಷಟ್ಪದೀ ಸಾಮಾನ್ಯ ಲಕ್ಷಣವನ್ನು ಎಲ್ಲ ಷಟ್ಪದಿಗಳಿಗೆ ಇಟ್ಟುಕೊಳ್ಳಬೇಕು. ಮತ್ತು ಬೇರೆ ಬೇರೆ ಷಟ್ಪದಿಗಳ ಮೂರನೆಯ ಆರನೆಯ ಚರಣಗಳ ಮಾತ್ರೆಗಳನ್ನು ಲೆಕ್ಕದಿಂದ ತಿಳಿದುಕೊಳ್ಳಬೇಕು

ಭಾಮಿನೀಷಟ್ಪದಿ—ಮೊದಲನೆಯ ಚರಣಕ್ಕೆ ೧೪ ಮಾತ್ರೆಗಳು; ಮೊದಲು ಒಂದು ೩ ಮಾತ್ರೆಯ ಗಣ, ಬಳಿಕ ಒಂದು ೪ ಮಾತ್ರೆಯ ಗಣ; ಮತ್ತೆ ಹೀಗೆ ಎರಡು ಗಣಗಳು; ಈ ಮೇರೆಗೆ ೪ ಗಣಗಳು. ಇದರಲ್ಲಿ ᴗ—, ᴗ—ᴗ ಈ ಗಣಗಳು ಬರಕೂಡದು. ಉದಾ—

ಭಾ. ಷ — ಅರಸನೊಕ್ಕಯ್ಯೋಗರಕೆ ತಾ |
ನರುಹನುಳಿದಂತೀ ಧರಿತ್ರಿಗೆ |
ನಿರುತವಧಿಪತಿ ನೀವೆಯಲ್ಲಾ ? ಬಸವಮಂತ್ರೀಶಾ ||

(ಪೂರ್ವಾರ್ಧ). ಇದೇ ಮೇರೆಗೆ ಉತ್ತರಾರ್ಧ. (ಬಸವ ಪು.)

ಪರಿವರ್ಧಿನೀಷಟ್ಪದಿ-ಮೊದಲನೆಯ ಚರಣಕ್ಕೆ ೧೬ ಮಾತ್ರೆಗಳು. ನಾಲ್ಕು ನಾಲ್ಕು ಮಾತ್ರೆಯ ೪ ಗಣಗಳು. ಇಲ್ಲಿಯೂ ಮಧ್ಯಗುರುಗಣ (ᴗ—ᴗ) ವು ಬರಕೂಡದು. ಉದಾ—

ಪ. ಷ.—ಮಾರಿಯ ಮನೆಬಿಯ್ಯದ ಕಣಜಂ ಮ |
ತ್ತಾರಾಜ ಕೃತಾಂತನ ಬಳಕೆಯ ಬಂ |
ಡಾರಂ ಮೃತ್ಯು ಮಹಾದೇವತೆಯುಗ್ರಾಣಮುಗುರ್ವಿಸುವ ||
ಭೂರಿ ಪಿಶಾಚ ಗ್ರಹಬೇತಾಳಗ |
ಳಾರೋಗಣೆಯ ಗೃಹಂ ತಾನೆನಲಾ |
ದಾರುಣತರ ಸಂಗ್ರಾಮ ಧರಾತಳಮತಿ ಭೀಕರವಾಯ್ತು ||

(ಜಯನೃಪ ಕಾವ್ಯ)

ವಾರ್ಧಕಷಟ್ಪದಿ— ಮೊದಲನೆಯ ಚರಣಕ್ಕೆ ೨೦ ಮಾತ್ರೆಗಳು. ಐದು ಐದು ಮಾತ್ರೆಯ ಗಣಗಳು. ಇದರಲ್ಲಿ ᴗ—ᴗᴗ, — — ಈ ಗಣಗಳು ಬರಕೂಡದು. ಉದಾ, (ಪೂರ್ವಾರ್ಧ)—

ವಾ. ಷ.—ಕರಿಯ ಕುಂಭಸ್ಥಳದ ಮುಕ್ತಾಫಲಂಗಳಂ |
ಬರುಹಿಗಳ ಗರಿಗಳಂ ಚಮರಿವಾಲಂಗಳಂ |
ದ್ವಿರದ ನವದಂತಾಂಕುರಂಗಳಂ ಕಸ್ತೂರಿಯ—
ಮೃತ್ತಿಕೆಗಳಂ ಬನದೊಳು || (ಜೈ. ಭಾ.)

೯ (ಅ)—ನು.

ರಗಳೆಗಳು

ರಗಳೆಗಳ ಸಾಮಾನ್ಯ ಲಕ್ಷಣ— ರಗಳೆಗಳು ಸಮವೃತ್ತಗಳು. ಪ್ರತಿಪಾದಕ್ಕೆ ಸಮಾನ ಮಾತ್ರಾಗಣಗಳಿರುವವು. ಇವಕ್ಕೆ ಆದಿಪ್ರಾಸದ ನಿರ್ಬಂಧವಿಲ್ಲ. ಅಂತ್ಯದಲ್ಲಾಗಲಿ,ಮಧ್ಯ-ಅಂತ್ಯಗಳಲ್ಲಾಗಲಿ,ಆದಿ-ಅಂತ್ಯಗಳಲ್ಲಾಗಲಿ ಪ್ರಾಸವಿರುವದು. ಇದಕ್ಕೆ ಹಲವು ಪಾದಗಳಿರಬಹುದು. ಪ್ರಾಸವು ಎರಡೆರಡು ಪಾದಗಳಿಗೆ, ಇಲ್ಲವೆ ನಾಲ್ಕು ನಾಲ್ಕು ಪಾದಗಳಿಗೆ ಇರಬಹುದು. (ಇಲ್ಲಿ ಪ್ರಾಸವೆಂದರೆ ಸಮಾನ [ಒಂದೆ] ವ್ಯಂಜನವೆಂದು ತಿಳಿಯಬೇಕು.)

ರಗಳೆಗಳಲ್ಲಿ **ಮಂದಾನಿಲ, ಲಲಿತ, ಉತ್ಸಾಹ** ಎಂಬ ಮೂರು ಭೇದಗಳುಂಟು.

ಮಂದಾನಿಲರಗಳೆ— ಪ್ರತಿಪಾದಕ್ಕೆ ನಾಲ್ಕು ನಾಲ್ಕು ಮಾತ್ರೆಯ ನಾಲ್ಕು ಗಣಗಳು. ಉದಾ—

ಮಂ. ರ.— ಆ ವೇಳೆಯೊಳತಿಸಂಭ್ರಮಮೆಸೆದಿರೆ |
ಪೂವಲಿ ಪುರವೀಧಿಗಳೊಳ್ ನೆರೆದಿರೆ |
ಪವಳದ ರನ್ನದ ಗುದಿಗಳ ಗುಡಿಗಳ್ |
ನವಮೌಕ್ತಿಕ ರಂಗದ್ದಾಂಗುಡಿಗಳ್ ||

ಲಲಿತರಗಳೆ— ಪ್ರತಿಪಾದಕ್ಕೆ ಐದು ಐದು ಮಾತ್ರೆಯ ನಾಲ್ಕು ಗಣಗಳು. ಉದಾ—

ಲ. ರ.—ಅಲ್ಲಿ ಮಾಮರದಲ್ಲಿ ಮಲ್ಲಿಕಾಲತೆಯಲ್ಲಿ |
ಎಳ ಅಸುಗೆ ಮರದಲ್ಲಿ ಜಳರುಹಾಕರದಲ್ಲಿ |
ಸಂಪಗೆಯ ತರುಗಳೊಳ್ ಸೊಂಪಿಡಿದ ಸುರಯಿಯೊಳ್ |
ಪಾದರಿಯ ಬನದಲ್ಲಿ ಮಾಧವಿಯ ಲತೆಯಲ್ಲಿ ||

ಉತ್ಸಾಹರಗಳೆ— ಪ್ರತಿಪಾದಕ್ಕೆ ಮೂರು ಮೂರು ಮಾತ್ರೆಯ ಎಂಟು ಗಣಗಳು.

ಉ. ರ.—ಅಟ್ಟ ಅನ್ನ ಉಣ್ಣಬಿಡನು ಕೊಟ್ಟಸಾಲ ಕೇಳಬಿಡನು ||
ಪೆಟ್ಟಿಯೊಳಿಹ ಚಿನ್ನದೊಡವೆ ತೊಟ್ಟೆನೆನಲು ಯಮನು ಬಿಡನು ||

ಅಕ್ಕನನ್ನು ಕರೆಯಲಿಲ್ಲ ಮಕ್ಕಳನ್ನು ಪಡೆಯಲಿಲ್ಲ |
ದುಕ್ಕಗೊಂಡು ಕಣ್ಣನೀರನುಕ್ಕಿಸುವರೆ ಯಮನು ಬಿಡನು ||

ದ್ವಿಪದಿ— ಇದಕ್ಕೆ ಎರಡು ಪಾದಗಳು, ಪ್ರತಿಪಾದಕ್ಕೆ ಐದು ಐದು ಮಾತ್ರೆಯ ಮೂರು ಗಣಗಳೂ ನಾಲ್ಕು ಮಾತ್ರೆಯ ಒಂದು ಗಣವೂ ಇರುವವು.

ಉದಾ— ದ್ವಿ. ರಾಮನಾಜ್ಞೆಯ ಹನುಮನಾಂತು ನಿಜಶಿರದೆ |
ಭೂಮಿಜೆಯನರಸಲ್ಕೆ ಪೋದನವಸರದೆ |

ಸಾಂಗತ್ಯ-ಒಂದನೆಯ ಮೂರನೆಯ ಪಾದಗಳಿಗೆ ೨೦ ಮಾತ್ರೆಗಳು; ಎರಡನೆಯ ನಾಲ್ಕನೆಯ ಪಾದಗಳಿಗೆ ೧೩ ಮಾತ್ರೆಗಳು. ಒಂದನೆಯ ಮೂರನೆಯ ಚರಣಗಳಲ್ಲಿ ೧೦ನೆಯ ಮಾತ್ರೆಗೆ ಯತಿಯಿರುವದು. ಉದಾ—.

ಸಾ.—ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ |
ಪೆಣ್ಣಲ್ಲವೆ ಪೊರೆದವಳು ||
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು |
ಕಣ್ಣುಕಾಣದ ಗಾವಿಲರು || (ಹದಿಬದೆಯ ಧರ್ಮ)

ಆರ್ಯಾವೃತ್ತ— ಇದರ ಒಂದನೆಯ ಮೂರನೆಯ ಚರಣಗಳಲ್ಲಿ ನಾಲ್ಕು ನಾಲ್ಕು ಮಾತ್ರೆಯ ಮೂರು ಮೂರು ಗಣಗಳೂ, ಎರಡನೆಯ ಚರಣದಲ್ಲಿ ನಾಲ್ಕು ನಾಲ್ಕು ಮಾತ್ರೆಯ ನಾಲ್ಕು ಗಣಗಳೂ ಮುಂದೆ ಒಂದು ಗುರುವೂ ಇರುವವು. ನಾಲ್ಕನೆಯ ಚರಣದಲ್ಲಿ ನಾಲ್ಕು ಮಾತ್ರೆಯ ಎರಡು ಗಣಗಳ ತರುವಾಯ ಒಂದು ಲಘುವೂ ಮುಂದೆ ನಾಲ್ಕು ಮಾತ್ರೆಯ ಒಂದು ಗಣವೂ ಬಳಿಕ ಒಂದು ಗುರುವೂ ಇರುವವು. ಎಂದರೆ ೧ನೆಯ ೩ನೆಯ ಚರಣಗಳಿ ೧೨ ಮಾತ್ರೆಗಳು; ಎರಡನೆಯದಕ್ಕೆ ೧೮ ಮಾತ್ರೆಗಳು; ೪ನೆಯ ಚರಣಕೆ ೧೫ ಮಾತ್ರೆಗಳು.

ಉದಾ: ಆ. ಗಂಗೆಯುದಿರ್ಪುತ್ತರಭಾ| ಗಂ ಗೌರವಕರ್ಹಮಾಗೆ ಪಿರಿದೇನೈ ||
ಗಂಗಾಸಮಾನೆ ದಕ್ಷಿಣ | ಗಂಗೆಯೆ ತಾಂ ಕೃಷ್ಣೆ ದಕ್ಷಿಣದೊಳ್

ತ್ರಿಪದಿ- ಮೂರು ಚರಣಗಳು; ಮೊದಲನೆಯ ಪಾದಕ್ಕೆ ಸುಮಾರು*೨೦

---

*೬ನೆಯ ಮತ್ತು ಹತ್ತನೆಯ ಗಣವು ಬ್ರಹ್ಮಗಣವಾಗಿರಬೇಕೆಂದೂ, ಉಳಿದವು ವಿಷ್ಣು

ಮಾತ್ರೆಗಳು; ೪ ಗಣಗಳು; ೨ನೆಯ ಚರಣಕ್ಕೆ ಸುಮಾರು ೧೭ ಮಾತ್ರೆ
೪ ಗಣಗಳು; ೩ನೆಯ ಚರಣಕ್ಕೆ ಸುಮಾರು ೧೬ ಮಾತ್ರೆಗಳು; ೩ ಗಣ
ಒಟ್ಟಿಗೆ ೧೧ ಗಣಗಳು. ಉದಾ—

ತ್ರಿಪದಿ.— ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ |
ಇಚ್ಛೆಯನರಿವ ಸತಿಯಾಗೆ ಸ್ವರ್ಗಕ್ಕೆ |
ಕಿಚ್ಚು ಹಚ್ಚೆಂದ ಸರ್ವಜ್ಞ ||

ಗೀತೆ—ಆರ್ಯಾವೃತ್ತದ ಪೂರ್ವಾರ್ಧವೂ ಅಪರಂತೆಯೇ ಉ
ರ್ಧವೂ ಇದ್ದರೆ ಅದು ಗೀತೆಯೆನಿಸುವದು. ಉದಾ—

ಗೀ.— ಅಮೃತ ಪರಿಪೂರ್ಣ ಮೇಘೋ |
ಪಮಮಧುರ ಶರೀರನಾಗಿರುವ ನಿನ್ನಾ |
ಶ್ರಮಹರಣಾಲಿಂಗನ ಸಂ |
ಭ್ರಮ ವಾತ್ಸಲ್ಯಂ ತ್ವರಂಗೊಳಿಪುದೆನ್ನ ||

(ಉತ್ತರರಾಮ

ತ್ರಿಪುಡೆ—ಇದಕ್ಕೆ ಎರಡು ಪಾದಗಳು. ಪ್ರತಿಪಾದಕ್ಕೆ ಏಳು ಗಣ
ಮುಂದೆ ಒಂದು ಗುರುವೂ ಇರುವವು. ವಿಷಮಸ್ಥಾನದ ಗಣಗಳು ಮ
ಮಾತ್ರೆಯವು. ಸಮಸ್ಥಾನದ ಗಣಗಳು ನಾಲ್ಕು ಮಾತ್ರೆಯವು. ಉದ

ತ್ರಿಪುಡೆ.—ಒಂದು ಜೇಡವು ತನ್ನ ಬೀಡನು ಕಟ್ಟಲೋಸುಗ ಗೆಳೆಯನೇ
ಚೆಂದವಾಗಿಹ ಸ್ಥಳವನೊಂದನು ಹುಡುಕಿಕೊಂಡಿತು ಗೆಳೆಯ

ಗಣವಾಗಿರಬೇಕೆಂದೂ ನಾಗವರ್ಮನು ಹೇಳುವನು. ಬ್ರಹ್ಮಗಣಗಳು ನಾಲ್ಕು
ಮೂರು ಇಲ್ಲವೆ ನಾಲ್ಕು ಮಾತ್ರೆಗಳಿಂದಾಗುವವು. ವಿಷ್ಣುಗಣಗಳು ೪, ೫, ೬ ಮ
ಗಳಿಂದಾಗುವವು. ಆದುದರಿಂದ ತ್ರಿಪದಿಯ ಪಾದಕ್ಕೆ ಇಷ್ಟೇ ಮಾತ್ರೆಗಳೆಂದು ಹೇ
ಸುಮಾರು ಎಂದು ಹೇಳಿದೆ.